ಶಿವಮೊಗ್ಗ
ಮಂಗಳವಾರ, 30 ಜೂನ್ 2026
ಸಂಪುಟ 17, ಸಂಚಿಕೆ 67, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
RNI: KAR KAN 2010/64051 ₹4
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಜರ್ಮನಿ: ಗುಂಡಿನ ದಾಳಿಗೆ 6 ಸಾವು | 02
ಬಂಗಾಳ: ಏನಾಸಂ ಅನುಷ್ಠಾನಕ್ಕೆ ಚಾಲನೆ | 02
ಸೇನಾ ಬಲಕ್ಕೆ ಸಿಂಧೂರ ಸಾಕ್ಷಿ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ನಮ್ಮ ಮನೋದ್ರಿಕ್ತ ಮನಸ್ಸನ್ನು ಜಯಿಸುವ ಗುರುವಿನ ಶಕ್ತಿಯ ಮುಂದೆ ಸಾವಿರ ಆನೆಗಳನ್ನು ಜಯಿಸುವುದು ಏನೂ ಅಲ್ಲ.
▲ ಶ್ರೀ ರಮಣ ಮಹರ್ಷಿ

ಹೆಸರಲ್ಲೇನಿದೆ..!? ಆದರೆ ಹೆಸರಲ್ಲೇ ಎಲ್ಲಾ ಇದೆ!

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
• ಪುಟ ೬

ಕಿರುಸುದ್ದಿ

ಪ್ರತಿಪಕ್ಷ ನಾಯಕರಾಗಿ ಖರ್ಗೆ ಮರು ನೇಮಕ

• **ಹೊಸದಿಲ್ಲಿ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಹಾಗೂ ಮರು ಆಯ್ಕೆಯಾದ ಎಂಟು ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭೆ ಸಭಾಪತಿ ಸಿ.ರಾಧಾಕೃಷ್ಣನ್ ಅವರು ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ ಖರ್ಗೆ ಅವರು ಮರು ನೇಮಕವಾಗಿದ್ದಾರೆ.
• ಪುಟ ೭

ಅಪರಾಧ ನಡೆದ ಎರಡೇ ತಿಂಗಳಲ್ಲಿ ಗಲ್ಲು ಶಿಕ್ಷೆ

• **ಪುಣೆ:** ಮಹಾರಾಷ್ಟ್ರದಾದ್ಯಂತ ಸಾರ್ವಜನಿಕರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದ್ದ ನಸ್ರಾಪುರ ಗ್ರಾಮದ ಮೂರು ವರ್ಷದ ಹೆಣ್ಣು ಮಗುವಿನ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಅಪರಾಧಿಗೆ ಸೋಮವಾರ ಗಲ್ಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ತೀರ್ಪು ನೀಡಿದ್ದಾರೆ.
• ಪುಟ ೭

ಸರಳಾ ಹತ್ಯೆ ಕೇಸ್: ಯಾಸಿನ್ ವಿರುದ್ಧ ಚಾರ್ಜ್‌ಶೀಟ್

• ಪುಟ ೭

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದಿಂದ ಇಬ್ಬರು ಭಾಗಿ

• ಪುಟ ೭

ವಿದ್ಯುತ್ ಖಾಸಗೀಕರಣ: ಕ್ಯಾಬಿನೆಟ್ ಅಭಿಪ್ರಾಯ ಪರಿಗಣನೆ- ಡಿಕೆಶಿ

• ಪುಟ ೯

ಸಾಗರ ಬಂದ್ ಉತ್ತಮ

• ಪುಟ ೯



ಸ್ಕ್ಯಾನ್ ಅಸ್ತ್ರ


ನಕಲಿ ಔಷಧಗಳ ವಿರುದ್ಧ ಭಾರತದ ಡಿಜಿಟಲ್ ಕವಚ
• ಪುಟ ೭
ಸುದ್ದಿ ಸಮಗ್ರ

ಮನೆ ಮನೆಗೆ ಬಿಎಲ್‌ಒ ಭೇಟಿ | ಸಿಇಒ ಅನ್ಬುಕುಮಾರ್ ಮಾಹಿತಿ

ಇಂದಿನಿಂದ ಎಸ್‌ಐಆರ್

ಎಸ್‌ಐಆರ್ ಪ್ರಕ್ರಿಯೆ-2026ರ ವೇಳಾಪಟ್ಟಿ


ಪ್ರಕ್ರಿಯೆಯ ವಿವರ	ನಿಗದಿಪಡಿಸಿದ ದಿನಾಂಕ
ಅರ್ಹತಾ ದಿನಾಂಕ	ಅಕ್ಟೋಬರ್ 1, 2026
ಬಿಎಲ್‌ಒಗಳಿಂದ ಮನೆಮನೆಗೆ ಭೇಟಿ, ಪರಿಶೀಲನೆ	ಜೂನ್ 30 ರಿಂದ ಜುಲೈ 29
ಮತಗಟ್ಟೆಗಳ ತಾರ್ಕಿಕ ಮರುಹೊಂದಾಣಿಕೆ-ವಿಂಗಡಣೆ	ಜುಲೈ 29 ರೊಳಗೆ
ಕರಡು ಮತದಾರರ ಪಟ್ಟಿ ಪ್ರಕಟಣೆ	ಆಗಸ್ಟ್ 5
ಹಕ್ಕು, ಆಕ್ಷೇಪಣೆ ಸಲ್ಲಿಸುವ ಅವಧಿ	ಆ.5 ರಿಂದ ಸೆ.4
ಆಕ್ಷೇಪಣೆಗಳ ಪರಿಶೀಲನೆ, ವಿಲೇವಾರಿ ಪ್ರಕ್ರಿಯೆ	ಆ.5 ರಿಂದ ಅ.3
ಅಂತಿಮ ಮತದಾರರ ಪಟ್ಟಿ ಪ್ರಕಟಣೆ	ಅಕ್ಟೋಬರ್ 7



• **ಬೆಂಗಳೂರು:** ಯಾವುದೇ ಅರ್ಹ ವ್ಯಕ್ತಿ ಮತದಾರರಪಟ್ಟಿಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ನಡೆಸಲಾಗುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಮಂಗಳವಾರದಿಂದ (ಜೂ.30) ಆರಂಭವಾಗಲಿದೆ. ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡಲಿದ್ದು, ಜು.29ಕ್ಕೆ ಮುಕ್ತಾಯವಾಗಲಿದೆ. ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ವಿ.ಅನ್ಬುಕುಮಾರ್ ಸೋಮವಾರ ವಿವರ ನೀಡಿದರು.

ರಾಜ್ಯದಾದ್ಯಂತ ಒಟ್ಟು 59,050 ಬಿಎಲ್‌ಒಗಳಿಗೆ ತರಬೇತಿ ನೀಡಿ ನಿಯೋಜಿಸಲಾಗಿದೆ. ಎಲ್ಲಾ 31 ಜಿಲ್ಲಾ ಚುನಾವಣಾಧಿಕಾರಿಗಳು, 4 ಅಪರ ಜಿಲ್ಲಾ ಚುನಾವಣಾಧಿಕಾರಿಗಳು, 224 ಮತದಾರರ ನೋಂದಣಾಧಿಕಾರಿಗಳು, 336 ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತ್ತು 7,556 ಬಿಎಲ್‌ಒ ಮೇಲ್ವಿಚಾರಕರು ಸೇರಿ ಒಟ್ಟು 68,123 ಸಿಬ್ಬಂದಿ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲಿದ್ದಾರೆ. ಅಲ್ಲದೆ, ರಾಜಕೀಯ ಪಕ್ಷಗಳಿಂದ 1,15,112 ಬೂತ್ ಮಟ್ಟದ ಏಜೆಂಟರನ್ನು (ಬಿಎಲ್‌ಎ) ನೇಮಿಸಲಾಗಿದೆ ಎಂದು ತಿಳಿಸಿದರು.

5.54 ಕೋಟಿ ಮತದಾರರ ಮನೆ ಬಾಗಿಲಿಗೆ ನಮೂನೆ: ಗಣತಿ ನಮೂನೆಗಳನ್ನು (ಎಣ್ಯುಮರೇಷನ್ ಫಾರಂ) ಮುದ್ರಿಸಲಾಗಿದ್ದು, ಜಿಲ್ಲಾ ಚುನಾವಣಾಧಿಕಾರಿಗಳ ಮೂಲಕ ಬೂತ್ ಮಟ್ಟದ ಅಧಿಕಾರಿಗಳಿಗೆ ವಿತರಣೆ ಮಾಡಲಾಗಿದೆ. ಕರ್ನಾಟಕದಲ್ಲಿ ಜೂ.16ಕ್ಕೆ ಮತದಾರರಪಟ್ಟಿ ಫ್ರೀಜ್ ಮಾಡಲಾಗಿದೆ. ಪ್ರಸಕ್ತ 5,54,32,314 ಮತದಾರರಿದ್ದು, ಇವರು ಈ ವಿಶೇಷ ಸಮಗ್ರ ಪರಿಷ್ಕರಣೆಯ ವ್ಯಾಪ್ತಿಗೆ ಒಳಪಡಲಿದ್ದಾರೆ.
➡ಪುಟ ೮



▸▸ ಬಿಎಲ್‌ಒಗಳಿಗೆ ನೆಟ್‌ವರ್ಕ್ ಸಮಸ್ಯೆ ಅಥವಾ ತಾಂತ್ರಿಕ ತೊಂದರೆ ನಿವಾರಿಸಿ ಫಾರ್ಮ್‌ಗಳನ್ನು ಡಿಜಿಟಲೈಸ್ ಮಾಡಲು ಪ್ರತಿ ತಾಲೂಕಿನಲ್ಲಿ ಕನಿಷ್ಠ 2 ರಿಂದ 3 ಬಿಎಲ್‌ಒ ಫೆಸಿಲಿಟೇಷನ್ ಸೆಂಟರ್ ಸ್ಥಾಪನೆ

▸▸ ಸಾರ್ವಜನಿಕರ ದೂರು ಹಾಗೂ ಮಾಹಿತಿ ಹಂಚಿಕೆಗಾಗಿ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಮತದಾರರ ನೆರವು ಕೇಂದ್ರ ಸ್ಥಾಪನೆ

ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ

ನಿಗದಿತ ಅವಧಿಯೊಳಗೆ ಭರ್ತಿ ಮಾಡಿದ ಗಣತಿ ನಮೂನೆಯನ್ನು ಸಲ್ಲಿಸುವ ಎಲ್ಲಾ ಮತದಾರರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದು. ಗಣತಿ ನಮೂನೆಯು ಸ್ವೀಕೃತವಾಗದ ಸಂದರ್ಭಗಳಲ್ಲಿ ಮತದಾರರ ಹೆಸರನ್ನು ಕರಡು ಮತದಾರರ ಪಟ್ಟಿಯಲ್ಲಿ ಸೇರಿಸಲಾಗುವುದಿಲ್ಲ. ಅಲ್ಲದೆ ಮನೆ ಮನೆ ಭೇಟಿ ಹಂತದಲ್ಲಿ ಯಾವುದೇ ದಾಖಲೆ ಸಂಗ್ರಹಿಸುವುದಿಲ್ಲ.
➡ಪುಟ ೮

"ಮತದಾನದ ಹಕ್ಕು ಕಳೆದುಕೊಂಡರೆ ಸರ್ಕಾರದ ಸವಲತ್ತುಗಳನ್ನು ಕಳೆದುಕೊಳ್ಳುತ್ತೀರಿ. ನಿಮ್ಮ ಮತದ ಹಕ್ಕು ನಿಮ್ಮ ಬದುಕಿನ ಹಕ್ಕನ್ನು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಜ್ಯದ ಜನತೆಗೆ ಸರ್ಕಾರ ಎಲ್ಲ ರೀತಿಯ ಸಹಾಯ ಮಾಡಲು ಬದ್ಧತೆ ಇಟ್ಟುಕೊಂಡಿದೆ.
■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿಎಂ

ಮಂಜೂರಾದ ಜಾಗ ಖಾಲಿ ಬಿಟ್ಟರೆ ಕ್ರಮ



• **ಬೆಂಗಳೂರು:** ಗಣಗಾರಿಕೆ ಸೇರಿ ನಾನಾ ಚಟುವಟಿಕೆಗಳಿಗೆ ಸರ್ಕಾರಿ ಜಾಗ ಪಡೆದು ವರ್ಷಗಳ ಕಾಲ ಚಟುವಟಿಕೆ ಆರಂಭಿಸದಿದ್ದರೆ ಕ್ರಮ ಕೈಗೊಳ್ಳಿ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಸೋಮವಾರ ಅರಣ್ಯ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಕೈಗಾರಿಕೆ ಹಾಗೂ ಗಣಗಾರಿಕೆ ಯೋಜನೆಗಳಿಗೆ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ನಿಗದಿತ ಕಾಲಮಿತಿಯೊಳಗೆ ನೀಡುವ ವ್ಯವಸ್ಥೆ ಮಾಡಬೇಕು ಎಂದರು. ಸರ್ಕಾರದ ಜಾಗವನ್ನು ಪಡೆದು ಐದಾರು ವರ್ಷ ಕಾಲ ಖಾಲಿ ಬಿಟ್ಟರೆ ಸರ್ಕಾರಕ್ಕೆ ಯಾವುದೇ ಆದಾಯ ದೊರೆಯುವುದಿಲ್ಲ. ಅಲ್ಲದೆ, ಈ ಅವಧಿಯಲ್ಲಿ ಉತ್ಪಾದನಾ ವೆಚ್ಚ, ಸರಕುಗಳ ಬೆಲೆ ಹಾಗೂ ಯೋಜನೆಯ ಒಟ್ಟು ಮೌಲ್ಯವೂ ಹೆಚ್ಚಾಗುತ್ತದೆ. ಇಂತಹ ವಿಳಂಬವನ್ನು ಸಹಿಸುವುದಿಲ್ಲ ಎಂದು ಹೇಳಿದರು.

ಸಿಎಂ ಸೂಚನೆಗೆ ಪ್ರತಿಕ್ರಿಯಿಸಿದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ತುಷಾರ ಗಿರಿನಾಥ್ ಅವರು, ಬಾಕಿ ಇರುವ ಎಲ್ಲಾ ಹಳೆಯ ಅರಣ್ಯ ಅನುಮತಿ ಪ್ರಕರಣಗಳನ್ನು ಜು.15ರೊಳಗೆ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಇಲಾಖೆಯ ಆಡಳಿತ ವ್ಯವಸ್ಥೆ, ಪ್ರಮುಖ ಯೋಜನೆಗಳು ಹಾಗೂ ವಿವಿಧ ಹಂತಗಳಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು ಸಮಗ್ರ ಮಾಹಿತಿ ಪಡೆದ ಮುಖ್ಯಮಂತ್ರಿಗಳು, ನಮ್ಮ ಅರಣ್ಯ ಪ್ರಾಣಿ ಸಂಪತ್ತು ಅಮೂಲ್ಯವಾದದ್ದು, ಸಂರಕ್ಷಣೆ ಪರಿಣಾಮಕಾರಿಯಾಗಿ ಆಗಬೇಕು ಎಂದು ನಿರ್ದೇಶಿಸಿದರು.
➡ಪುಟ ೮

ಅರಣ್ಯವಾಸಿಗಳನ್ನು ಕಡೆಗಣಿಸಬೇಡಿ

ಅರಣ್ಯ ಭೂಮಿ ಒತ್ತುವರಿ ತೆರವು, ಮಾನವ ವನ್ಯಜೀವಿ ಸಂಘರ್ಷ ತಡೆ ಹಾಗೂ ಅರಣ್ಯ ಸಂರಕ್ಷಣೆಗೆ ಸಂಬಂಧಿಸಿದ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಸ್ಪಷ್ಟ ನಿಯಮಗಳನ್ನು ಮುಂದಿಟ್ಟು ಅವರಿಗೆ ತೊಂದರೆ ನೀಡಬಾರದು. ನಿಯಮಾನುಸಾರ ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿಕೆ

ಮಾದರಿ ಚುನಾವಣೆ: ಭಾರತ ನಂ.1

• **ಶ್ರೀನಗರ:** ವಿಶ್ವದ ಪ್ರಮುಖ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತವು ಅತ್ಯಂತ ಪಾರದರ್ಶಕ ಚುನಾವಣಾ ವ್ಯವಸ್ಥೆಯನ್ನು ಹೊಂದಿದ್ದು, ಚುನಾವಣೆಯ ಪ್ರತಿ ಹಂತವೂ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಂದಲೇ ಪರಿಶೀಲನೆಗೆ ಒಳಪಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಸೋಮವಾರ ಹೇಳಿದ್ದಾರೆ.



3 ದಿನಗಳ ಕಾಶ್ಮೀರ ಪ್ರವಾಸದಲ್ಲಿರುವ ಅವರು ಶ್ರೀನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮತದಾರರ ಪಟ್ಟಿ ಸಿದ್ಧಪಡಿಸುವುದರಿಂದ ಹಿಡಿದು ಮತದಾನ, ಮತ ಎಣಿಕೆವರೆಗೆ ಪ್ರತಿ ಹಂತವೂ ಸಂಪೂರ್ಣ ಪಾರದರ್ಶಕವಾಗಿರುತ್ತದೆ ಎಂದರು. ಮತದಾರರ ಪಟ್ಟಿ ತಯಾರಿ, ಮತದಾನ, ಮತ ಎಣಿಕೆ ಸೇರಿ ಎಲ್ಲ ಹಂತಗಳನ್ನು ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಪರಿಶೀಲಿಸುತ್ತಾರೆ.
➡ಪುಟ ೮

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ನಾಯಕತ್ವ


ಭಾರತವು ಪ್ರಸ್ತುತ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಡೆಮಾಕ್ರಸಿ ಆ್ಯಂಡ್ ಎಲೆಕ್ಟೋರಲ್ ಅಸಿಸ್ಟೆನ್ಸ್ ಸಂಸ್ಥೆಯ ಅಧ್ಯಕ್ಷ ಸ್ಥಾನ ವಹಿಸಿಕೊಂಡಿದೆ ಎಂದು ಜ್ಞಾನೇಶ್ ಕುಮಾರ್ ತಿಳಿಸಿದರು. ಭಾರತದ ನಾಯಕತ್ವವು ದೇಶದ ಚುನಾವಣಾ ವ್ಯವಸ್ಥೆಗೆ ಜಾಗತಿಕ ಮಟ್ಟದಲ್ಲಿ ದೊರೆತಿರುವ ಮಾನ್ಯತೆಯ ಪ್ರತೀಕವಾಗಿದೆ ಎಂದು ಅವರು ಹೇಳಿದರು. ಭಾರತೀಯ ಚುನಾವಣಾ ಪ್ರಕ್ರಿಯೆ ಗಮನಿಸಿ, 2026ರಲ್ಲಿ ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತ ಮುಂಚೂಣಿಯಲ್ಲಿದ್ದು, ಅಂತಾರಾಷ್ಟ್ರೀಯ ಐಡಿಇಎ ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನೂ ಹೊಂದಿದೆ ಎಂದು ಜ್ಞಾನೇಶ್ ಕುಮಾರ್ ಹೇಳಿದರು.

ದೇಣಿಗೆ ದುರ್ಬಳಕೆ ಆರೋಪಿಗಳ ಪರ ವಾದಿಸಿದರೆ ದಂಡ

ವಕಾಲತ್ತು ವಹಿಸದಿರಲು ನಿರ್ಧಾರ

• **ಹೊಸದಿಲ್ಲಿ/ಅಯೋಧ್ಯೆ:** ಶ್ರೀರಾಮ ಮಂದಿರಕ್ಕೆ ಬಂದ ದೇಣಿಗೆ ಹಣದ ದುರ್ಬಳಕೆ ಆರೋಪದ ಪ್ರಕರಣ ದಿನದಿಂದ ದಿನಕ್ಕೆ ಹೊಸ ತಿರುವು ಪಡೆಯುತ್ತಿದ್ದು, ಆರೋಪಿಗಳ ವಿರುದ್ಧ ಸಾರ್ವಜನಿಕ ಆಕ್ರೋಶ ಹೆಚ್ಚುತ್ತಿರುವ ನಡುವೆ ಫೈಜಾಬಾದ್ ಬಾರ್ ಅಸೋಸಿಯೇಷನ್ ಮಹತ್ವದ ನಿರ್ಧಾರ ಕೈಗೊಂಡಿದೆ. ಬಂಧಿತ ಎಂಟು ಆರೋಪಿಗಳ ಪರವಾಗಿ ಯಾವುದೇ ವಕೀಲರು ವಕಾಲತ್ತು ವಹಿಸಬಾರದು ಎಂದು ಅಸೋಸಿಯೇಷನ್ ತೀರ್ಮಾನಿಸಿದ್ದು, ಸಿಬಿಐ ತನಿಖೆಗೆ ಆಗ್ರಹಿಸಿ ಕೋರ್ಟ್ ಮೊರೆ ಹೋಗುವುದಾಗಿ ಘೋಷಿಸಿದೆ. ಬಾರ್ ಅಸೋಸಿಯೇಷನ್ ಅಧ್ಯಕ್ಷ ಕಲಿಕಾ ಪ್ರಸಾದ್ ಮಾತನಾಡಿ, ಅಸೋಸಿಯೇಷನ್ ನಿರ್ಧಾರ ಉಲ್ಲಂಘಿಸಿ ಯಾರಾದರೂ ಆರೋಪಿಗಳ ಪರ ವಾದಿಸಿದರೆ 5 ಲಕ್ಷ ರೂ. ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಜತೆಗೆ ಮಂದಿರ ಟ್ರಸ್ಟ್ ನಿರ್ವಹಣೆಗೆ ಸಂಬಂಧಿಸಿದ ಚಂಪತ್ ರಾಯ್, ಅನಿಲ್ ಮಿಶ್ರಾ, ಗೋಪಾಲ್ ವಿರುದ್ಧವೂ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.
➡ಪುಟ ೮

ತುರ್ತು ವಿಚಾರಣೆಗೆ ನಿರಾಕರಣೆ



ದೇಣಿಗೆ ಹಣದ ಅವ್ಯವಹಾರದ ಆರೋಪಗಳ ಕುರಿತು ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಕ ಕಾಲಮಿತಿಯ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿ ಸೋಮವಾರ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬಂದಿತು. ಆದರೆ, ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್, ಶಿಲು ನಾಗು ಅವರಿದ್ದ ರಜೆ ಪೀಠ ತುರ್ತು ವಿಚಾರಣೆಯ ಅಗತ್ಯವೇನು ಎಂದು ಪ್ರಶ್ನಿಸಿ, ಬೇಸಿಗೆ ರಜೆ ಬಳಿಕ ಪ್ರಕರಣವನ್ನು ಪಟ್ಟಿ ಮಾಡುವುದಾಗಿ ತಿಳಿಸಿತು. 'ಆಕಾಶವೇನೂ ಕುಸಿದು ಬೀಳುವುದಿಲ್ಲ, ಇಷ್ಟು ತುರ್ತು ಏನು?' ಎಂದು ಪೀಠ ಮೌಖಿಕವಾಗಿ ಅಭಿಪ್ರಾಯಪಟ್ಟಿತು. ಸುಪ್ರೀಂ ಕೋರ್ಟ್ ಜುಲೈ 13ರಂದು ಪುನರಾರಂಭವಾಗಲಿದೆ.

ಪಾಕಿಸ್ತಾನದ ವಾಯುದಾಳಿಗೆ ಅಫ್ಘಾನ್‌ನ 36 ಮಂದಿ ಸಾವು

• **ಕರಾಚಿ:** ಪಾಕಿಸ್ತಾನ ಅಫ್ಘಾನಿಸ್ತಾನದ ಮೇಲೆ ಗಡಿಯಾಚೆಗಿನ ವಾಯುದಾಳಿಗಳನ್ನು ನಡೆಸಿದ್ದು, ಈ ದಾಳಿಯಲ್ಲಿ ಕನಿಷ್ಠ 36 ನಾಗರಿಕರು ಮೃತಪಟ್ಟಿದ್ದು, ಮೂರು ಪೂರ್ವ ಪ್ರಾಂತ್ಯಗಳಲ್ಲಿ 163 ಜನರು ಗಾಯಗೊಂಡಿದ್ದಾರೆ ಎಂದು ಅಫ್ಘಾನಿಸ್ತಾನದ ತಾಲಿಬಾನ್ ನೇತೃತ್ವದ ಸರ್ಕಾರ ಸ್ಪಷ್ಟನೆ ನೀಡಿದೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಪಾಕಿಸ್ತಾನದ ಯುದ್ಧ ವಿಮಾನಗಳು ರಾತ್ರಿ ವೇಳೆ ಪಕ್ತಿಯಾ, ಪಕ್ತಿಕಾ ಮತ್ತು ಕುನಾರ್ ಪ್ರಾಂತ್ಯಗಳಲ್ಲಿನ ವಸತಿ ಪ್ರದೇಶಗಳ ಮೇಲೆ ವೈಮಾನಿಕ ದಾಳಿ ನಡೆಸಿವೆ. ಈ ಬಗ್ಗೆ ತಾಲಿಬಾನ್ ಮುಖ್ಯ ವಕ್ತಾರ ಜಬೀಹುಲ್ಲಾ ಮುಜಾಹಿದ್ ಅವರು ಹೇಡಿತನದ ಆಕ್ರಮಣ ಮತ್ತು ಅಮಾನವೀಯ ಕೃತ್ಯ ಎಂದು ಎಕ್ಸ್ ಪೋಸ್ಟ್‌ನಲ್ಲಿ ಖಂಡಿಸಿದ್ದಾರೆ.
➡ಪುಟ ೮

ಪ್ರಿಯಕರ ಆಸ್ಪತ್ರೆಗೆ ದಾಖಲು | ಸುರಭಿ ತಾಯಿ ಕಿಡಿ

ಲವ್ ಜಿಹಾದ್: ಯುವತಿ ಸಾವು

• **ಚಿಕ್ಕಬಳ್ಳಾಪುರ:** ಜಿಲ್ಲೆಯ ನಂದಿಗಿರಿಧಾಮ ಸಮೀಪದ ಹೋಮ್ ಸ್ಟೇ ಒಂದರಲ್ಲಿ ಯುವತಿಯೊಬ್ಬಳು ಅನುಮಾನಾಸ್ಪದ ವಾಗಿ ಮೃತಪಟ್ಟಿರುವ ಘಟನೆ ಬೆಳಕಿಗೆ ಬಂದಿದ್ದು, ಇದು ಲವ್ ಜಿಹಾದ್ ಕೊಲೆ ಎಂದು ಮೃತ ಯುವತಿಯ ತಾಯಿ ಆರೋಪಿಸಿದ್ದಾರೆ. ಮೃತ ಯುವತಿಯನ್ನು ಬೆಂಗಳೂರು ಮೂಲದ ಸಾಯಿ ಸುರಭಿ (26) ಎಂದು ಗುರುತಿಸಲಾಗಿದ್ದು, ಇತ್ತೀಚೆಗೆ ಮುದ್ದೇನಹಳ್ಳಿ ಆಸ್ಪತ್ರೆಯಲ್ಲಿ ಫಿಸಿಯೋಥೆರಪಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದಳು ಎನ್ನಲಾಗಿದೆ.

ಬೆಂಗಳೂರು ಮೂಲದ ಸಾಯಿ ಸುರಭಿ ಹಾಗೂ ಕೇರಳದ ಕೋಝಿಕ್ಕೋಡ್ ನಿವಾಸಿ, ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಶನಿವಾರ ನಂದಿ ಗಿರಿಧಾಮ ಸಮೀಪ ಇರುವ ಮುದ್ದೇನಹಳ್ಳಿ ಬಳಿಯ ಹೋಂ ಸ್ಟೇಗೆ ಬಂದು ತಂಗಿದ್ದರು ಎನ್ನಲಾಗಿದೆ. ಸೋಮವಾರ ರೂಮ್ ಚೆಕ್-ಔಟ್ ಸಮಯ ಮುಗಿದರೂ ರೂಮ್ ತೆರೆಯದಿದ್ದಾಗ ಹೋಂ ಸ್ಟೇ ಕೇರ್‌ಟೇಕರ್ ಬಂದು ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಮೃತ ಸುರಭಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಆಕೆಯ ಪ್ರಿಯಕರ ಕೇರಳ ಮೂಲದ ಸಂಜೀತ್ ಅಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.
➡ಪುಟ ೮



ಮಗಳಿಗೆ ನಿರಂತರ ಕಾಟ ಕೊಡುತ್ತಿದ್ದ: ತಾಯಿ ಕಣ್ಣೀರು

ಸಾಯಿ ಸುರಭಿ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ಸ್ನೇಹಿತರ ಮೂಲಕ ಕೇರಳ ಮೂಲದ ಕ್ಯಾಬ್ ಡ್ರೈವರ್ ಸಂಜೀತ್ ಅಲಿ ಪರಿಚಯವಾಗಿದ್ದ. ನಂತರ ಆಕೆಯನ್ನು ಪ್ರೀತಿಸುವುದಾಗಿ ಹೇಳಿ ಸಂಜೀತ್ ಕಿರುಕುಳ ನೀಡಲಾರಂಭಿಸಿದ್ದ.
➡ಪುಟ ೮

ಹತ್ತನೇ ತರಗತಿ ಮಕ್ಕಳಿಗಿಲ್ಲ ತ್ರಿಭಾಷಾ ನೀತಿ: ಸಿಬಿಎಸ್‌ಇ

• **ಹೊಸದಿಲ್ಲಿ:** ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮೂರು ಭಾಷಾ ನೀತಿ ಕುರಿತು ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಪ್ರಸ್ತುತ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೊಸ ತ್ರಿಭಾಷಾ ನೀತಿಯನ್ನು ಅನುಸರಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ಪ್ರಸ್ತುತ 7, 8 ಮತ್ತು 9ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಮೂರನೇ ಭಾಷೆಯ ಪರೀಕ್ಷೆ ಬರೆಯುವ ಅಗತ್ಯವಿಲ್ಲ ಎಂದು ಸಿಬಿಎಸ್‌ಇ ಸ್ಪಷ್ಟನೆ ನೀಡಿದೆ. 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕನಿಷ್ಠ ಎರಡು ಸ್ಥಳೀಯ ಭಾರತೀಯ ಭಾಷೆಗಳನ್ನು ಒಳಗೊಂಡಂತೆ ಮೂರು ಭಾಷೆಗಳನ್ನು ಅಧ್ಯಯನ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಸಿಬಿಎಸ್‌ಇ ಘೋಷಿಸಿದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.



➡ಪುಟ ೮

ಕಿರುಸುದ್ದಿ

ಸಚಿವ ಆಗಬೇಕೆಂಬ ಆಸೆ ನನಗೂ ಇದೆ: ಶಾಂತನಗೌಡ

• **ದಾವಣಗೆರೆ:** ನನಗೂ ಸಚಿವ ಆಗಬೇಕು ಅನ್ನೋ ಆಸೆ ಇದೆ, ಆದರೆ ದುರಾಸೆಯಿಲ್ಲ, ನಾನು ಸಚಿವ ಸ್ಥಾನ ಕೇಳಲು ಹೋಗಿಲ್ಲ, ಒಂದು ವೇಳೆ ಕೊಟ್ರೆ ಖಂಡಿತಾ ಬಿಡಲ್ಲ ಎಂದು ಹೊನ್ನಾಳಿ ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ವಿಸ್ತರಣೆ ಮತ್ತು ಉಸ್ತುವಾರಿ ಸಚಿವರ ನೇಮಕದ ಕುರಿತು ಮುಕ್ತವಾಗಿ ಮಾತನಾಡಿದರು. ಕೇಳಿದ ತಕ್ಷಣ ಯಾರಿಗೂ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ. ಇದು ರಾಷ್ಟ್ರೀಯ ಕಾಂಗ್ರೆಸ್ ಪಕ್ಷ, ಇಲ್ಲಿ ಯಾವುದೇ ಒತ್ತಡಕ್ಕೆ ಮನ್ನಣೆ ಸಿಗುವುದಿಲ್ಲ, ರಾಜ್ಯದ 32 ಜಿಲ್ಲೆಗಳು, ಎಲ್ಲಾ ಕುಲ ಜಾತಿಗಳನ್ನು ಸಮಾನವಾಗಿ ಕಾಣುವುದು ಸುಲಭದ ಮಾತಲ್ಲ, ಸಾಮಾಜಿಕ ನ್ಯಾಯ ಏನಾದರೂ ಉಳಿದಿದ್ದರೆ ಅದು ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಎಂದು ಪ್ರತಿಪಾದಿಸಿದರು. ಜಿಲ್ಲಾ ಉಸ್ತುವಾರಿ ಸಚಿವರ ನೇಮಕದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಾರಿಗೂ ಕೇಳದೆಯೇ ಉಸ್ತುವಾರಿ ಮಾಡಿಲ್ಲ, ಸದ್ಯ ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಇದೆ. ಜಿಲ್ಲೆಗಳನ್ನು ನೋಡಿಕೊಳ್ಳಲು ಇರುವ 12 ಸಚಿವರಲ್ಲೇ ಉಸ್ತುವಾರಿಯನ್ನು ಹಂಚಿಕೆ ಮಾಡಲಾಗಿದೆ. ಇನ್ನು ರಾಜಕೀಯದಲ್ಲಿ ಸಚಿವ ಸ್ಥಾನಕ್ಕೆ ಯಾವುದೇ ನಿರ್ದಿಷ್ಟ ಮಾನದಂಡವಿಲ್ಲ, ಹೆಬ್ಬೆಟ್ಟು ಒತ್ತುವವರು ಕೂಡ ಇಲ್ಲಿ ಮಂತ್ರಿಯಾಗಬಹುದು ಎಂದರು. ಇತ್ತೀಚೆಗೆ ಶಾಸಕರು ದೆಹಲಿಗೆ ತೆರಳಿದ್ದ ವಿಚಾರವಾಗಿ ಸ್ಪಷ್ಟನೆ ನೀಡಿದ ಶಾಂತನಗೌಡರು, ಸಚಿವ ಸಂಪುಟ ಪುನರ್ ರಚಿಸುವಂತೆ ಒತ್ತಾಯಿಸಲು ನಾವು 30 ಶಾಸಕರು ದೆಹಲಿಗೆ ಹೋಗಿದ್ದೆವು ನಿಜ. ಆದರೆ ಅಲ್ಲಿ ನಾವು ಪಕ್ಷದಲ್ಲಿನ ಗೊಂದಲ ಬಗೆಹರಿಸಿ ಎಂದು ಕೇಳಿದ್ದೇವೆಯೇ ಹೊರತು, ಮಂತ್ರಿ ಸ್ಥಾನ ಕೇಳಿಲ್ಲ, ಇನ್ನು ಜಿಲ್ಲೆಯ ನಾಲ್ವರು ಶಾಸಕರು ಸಿಎಂ ಭೇಟಿ ಮಾಡಿದ್ದು ಕೇವಲ ಶುಭ ಕೋರಲು ಮಾತ್ರ. ನಿಗಮ ಮಂಡಳಿ ಬದಲಾವಣೆ ಮಾಡಲಿದ್ದಾರೆ, ನಾನು ಕೇಳದಿದ್ದರೂ ನನಗೆ ಸ್ಥಾನ ನೀಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬೆಳೆ ವಿಮೆ ನೋಂದಣಿಗೆ ಜುಲೈ 31 ಕೊನೆ ದಿನ

• **ದಾವಣಗೆರೆ:** ಫಸಲ್ ಬಿಮಾ ಯೋಜನೆಯನ್ನು ತಾಲ್ಲೂಕಿನಲ್ಲಿ ಗ್ರಾಮ ಪಂಚಾಯಿತಿ ಹಾಗೂ ಹೋಬಳಿ ಮಟ್ಟದಲ್ಲಿ ಎಸ್‌ಬಿಐ ಜನರಲ್ ವಿಮಾ ಕಂಪನಿ ಅನುಷ್ಠಾನಗೊಳಿಸಲಾಗುತ್ತಿದೆ. ರೈತರು ಪ್ರಕೃತಿ ವಿಕೋಪಗಳಿಂದ ಉಂಟಾಗುವ ಇಳುವರಿ ನಷ್ಟ, ಬಿತ್ತನೆ ತಡೆ, ಬೆಳವಣಿಗೆ ಹಂತದ ಮಧ್ಯಂತರ ವಿಪತ್ತು, ಕೊಯ್ಲಿನ ನಂತರ ನಷ್ಟ ಹಾಗೂ ಸ್ಥಳೀಯ ವಿಪತ್ತುಗಳಿಂದಾಗುವ ಬೆಳೆ ಹಾನಿಯಿಂದ ರೈತರಿಗೆ ಉಂಟಾಗುವ ಆರ್ಥಿಕ ನಷ್ಟಕ್ಕೆ ಪರಿಹಾರ ಒದಗಿಸುವ ಉದ್ದೇಶದಿಂದ ಈ ಯೋಜನೆ ಜಾರಿಗೊಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನ ಎಲ್ಲಾ ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮುಖ್ಯ ಬೆಳೆಯಾಗಿ ಮೆಕ್ಕೆಜೋಳ, ರಾಗಿ, ಭತ್ತ ಮುಂದುವರೆದು ಹೋಬಳಿ ಮಟ್ಟದಲ್ಲಿ ಅಡಿಕೆ ಹಾಗೂ ಮಾವಿನಕಾಯಿ ಹೋಬಳಿಗಳ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ತೋಟ ಬೆಳೆಗಳಿಗೆ ಜುಲೈ 31 ವಿಮಾ ತುಂಬುವ ಕೊನೆಯ ದಿನವಾಗಿರುತ್ತದೆ. ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ಡಿ.ಎಂ. ತಿಳಿಸಿದ್ದಾರೆ.

ದಾವಣಗೆರೆ ದುಗ್ಗಮ್ಮ ದೇಗುಲ ಆವರಣದಲ್ಲಿ 5 ವಾರಗಳ ಕಾಲ ಭಾನುವಾರದ ಸಂತೆ | ಜಿಲ್ಲೆಯ ವಿವಿಧೆಡೆ ದೇವರಿಗೆ ಪೂಜೆ

ಮಳೆಯನ್ನು ಕರುಣಿಸೋ ಭಗವಂತಾ...



• **ದಾವಣಗೆರೆ:** ಅಲ್ಲಲ್ಲಿ ಮಳೆಯಾಗುತ್ತಿದ್ದರೂ ಬಹುತೇಕ ರಾಜ್ಯದೆಲ್ಲೆಡೆ ಬರದ ಛಾಯೆ ಆವರಿಸಿದೆ. ಜಲಾಶಯಗಳು ಕೂಡ ಭರ್ತಿಯಾಗದೆ ರೈತರು ಆಕಾಶದತ್ತ ಮುಖ ಮಾಡಿ ಮುಂಗಾರು ಮಳೆಯ ಆಗಮನಕ್ಕೆ ನಿರೀಕ್ಷಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವರುಣನ ಕೃಪೆಗಾಗಿ ಜನರು ದೇವರ ಮೊರೆ ಹೋಗಿದ್ದಾರೆ.

ಮಳೆ ಕೊರತೆ ಉಂಟಾದಲ್ಲಿ ಸಮೃದ್ಧ ಮಳೆ ಬೆಳೆಗೆ ಪ್ರಾರ್ಥಿಸಿ ನಗರದೇವತೆ ದುರ್ಗಾಂಬಿಕಾ ದೇವಸ್ಥಾನದಲ್ಲಿ ಎಡೆಪಾತ್ರೆ ಮಾಡುವುದು, ದೇವಸ್ಥಾನದ ಆವರಣದಲ್ಲಿ ವಾರದ ಸಂತೆ ನಡೆಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಅದರಂತೆ, ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬಾರದ ಹಿನ್ನೆಲೆಯಲ್ಲಿ ಭಾನುವಾರ ದುಗ್ಗಮ್ಮ ದೇವಸ್ಥಾನದ ಆವರಣದಲ್ಲಿ 5 ವಾರಗಳ ಭಾನುವಾರದ ಸಂತೆ ಆರಂಭವಾಯಿತು.

ಜಿಲ್ಲೆಯಾದ್ಯಂತ ವಾಡಿಕೆಯಷ್ಟು ಮಳೆಯಾಗದೆ ಕುಡಿಯುವ ನೀರಿಗೂ ಹಾಹಾಕಾರ ಶುರುವಾಗಿದೆ. ಮುಂಗಾರು ಬಿತ್ತನೆ ಕಾರ್ಯಕ್ಕೂ ಹಿನ್ನಡೆಯಾಗಿದೆ. ಹೀಗಾಗಿ ಕಳೆದ ವಾರವಷ್ಟೇ ದಾವಣಗೆರೆಯ ಜನರು ನಗರದೇವತೆ ದುರ್ಗಾಂಬಿಕಾ ದೇವಿಗೆ ಎಡೆಪಾತ್ರೆ ಮಾಡಿ ಮಳೆ ಕರುಣಿಸುವಂತೆ ಪೂಜೆ ಸಲ್ಲಿಸಿದ್ದರು. ಇದೀಗ ದೇವಸ್ಥಾನ ಕಮಿಟಿ ತೀರ್ಮಾನದಂತೆ 5 ವಾರಗಳ ಕಾಲ ವಾರದ ಸಂತೆ ನಡೆಸಲು ನಿರ್ಧರಿಸಿದ್ದು, ಮೊದಲ ವಾರದ ಸಂತೆ ಭಾನುವಾರ ಜರುಗಿತು. ಪ್ರತಿ ವಾರ ನಡೆಯುತ್ತಿದ್ದ ಸ್ಥಳದ ಬದಲು ಈ ಬಾರಿ ದೇವಸ್ಥಾನ ಆವರಣದಲ್ಲಿ ರೈತರು, ವ್ಯಾಪಾರಿಗಳು ವಹಿವಾಟು ನಡೆಸಿದರು.

ದುಗ್ಗಮ್ಮ ದೇವಸ್ಥಾನ ಆವರಣದಲ್ಲಿ ಬೆಳಗ್ಗೆಯಿಂದಲೇ ಹಳ್ಳಿಗಳಿಂದ ಬಂದಿದ್ದ ರೈತರು ದುಗ್ಗಮ್ಮ ದೇವಸ್ಥಾನ ಆವರಣ, ಕನ್ನಿಕಾ ಪರಮೇಶ್ವರಿ ದೇವಸ್ಥಾನ ರಸ್ತೆ, ಮಹಾವೀರ್ ರಸ್ತೆ, ಬೀರಲಿಂಗೇಶ್ವರ ದೇವಸ್ಥಾನ, ಈಶ್ವರ ದೇವಸ್ಥಾನ, ನಿಮಿಷಾಂಬಾ ದೇವಸ್ಥಾನ, ಮಾರ್ಕಾಂಡೇಶ್ವರ ದೇವಸ್ಥಾನ, ವೀರಭದ್ರೇಶ್ವರ ಹಾಗೂ ಆಂಜನೇಯ ದೇವಸ್ಥಾನ ಪರಿಸರದಲ್ಲಿ ವ್ಯಾಪಾರ ನಡೆಸಿದರು. ಜೂನ್ ಆರಂಭದಿಂದಲೂ ಸರಿಯಾಗಿ ಮಳೆ ಬಾರದೇ ಇರುವುದರಿಂದ ವಾರದ ಸಂತೆ ಆರಂಭವಾಗಿದ್ದು, 5 ವಾರ ಸಂತೆ ನಡೆಸಿದರೆ ಬರಗಾಲ ಕಳೆದು ಮಳೆ ಬರುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ.

ವಾರದ ಸಂತೆ ಹಿನ್ನೆಲೆಯಲ್ಲಿ ರೈತರು ಹಾಗೂ ಭಕ್ತರು ಅಪಾರ ಭಕ್ತಿಭಾವದಿಂದ ದುರ್ಗಾಂಬಿಕಾ ದೇವಿಗೆ ಬೆಣ್ಣೆ ಅಲಂಕಾರ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದರು. ಉತ್ತಮ ಮಳೆಯಾಗಿ ರೈತರಿಗೆ ಬೆಳೆ ಸಮೃದ್ಧಿಯಾಗಲಿ, ಜನಜೀವನ ಸುಖ-ಶಾಂತಿಯಿಂದ ಕೂಡಿರಲಿ ಎಂಬುದಾಗಿ ದೇವಿಯಲ್ಲಿ ಪ್ರಾರ್ಥಿಸಲಾಯಿತು. ಪೂಜೆಯ ನಂತರ ಭಕ್ತರು ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆದರು. ದೇವಸ್ಥಾನದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು, ಭಕ್ತರು ಹಾಗೂ ಗ್ರಾಮಸ್ಥರು ಭಾಗವಹಿಸಿ ಭಕ್ತಿಭಾವದಿಂದ ಪೂಜಾ ಕೈಂಕರ್ಯಗಳಲ್ಲಿ ಪಾಲ್ಗೊಂಡರು.

ಮಹಾನಗರ ಪಾಲಿಕೆ ಆಡಳಿತ, ದುರ್ಗಾಂಬಿಕಾ ದೇವಸ್ಥಾನ ಸಮಿತಿ, ಊರಿನ ಹಿರಿಯರು, ಗಣ್ಯರು ಪ್ರತಿಸಲ ಮಳೆ ಕೈಕೊಟ್ಟಾಗಲೂ ದುಗ್ಗಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಐದು ವಾರಗಳ ಕಾಲ ವಾರದ ಸಂತೆ ನಡೆಸಿದರೆ ಮಳೆಯಾಗುತ್ತದೆಂಬ ಸಂಪ್ರದಾಯದಂತೆ ಈ ಸಲ ವಾರದ ಸಂತೆಯನ್ನು ಗುಡಿ ಬಳಿ ನಡೆಸಿದ್ದಾರೆ. ದೇವಿಯ ಕೃಪೆಯೋ, ಪವಾಡವೋ ಅಥವಾ ಕಾಕತಾಳೀಯವೋ ಎಂಬಂತೆ ಸಂತೆ ನಡೆದ ದಿನವೇ ಅಥವಾ ಮೂರ್‍ನಾಲ್ಕು ವಾರದ ಸಂತೆ ಮುಗಿಯುವವರೊಳಗೆ ಭಾರೀ ಮಳೆಯಾದ ನಿದರ್ಶನಗಳಿವೆ. ಭಕ್ತರ ನಂಬಿಕೆಗೆ ತಕ್ಕಂತೆ ಬೆಳಗ್ಗೆಯಿಂದಲೂ ನಗರದಲ್ಲಿ ಮೋಡ ಕವಿದ ವಾತಾವರಣ ಉಂಟಾಗಿ ಮಳೆ ಬರುವ ಆಶಾಭಾವ ಮೂಡಿಸಿತ್ತು. ಆದರೆ ಗಾಳಿಯು ಮೋಡಗಳನ್ನು ಚದುರಿಸಿದ್ದರಿಂದ ಒಣಹವೆ ಮುಂದುವರೆದಿತ್ತು.

ದುಗ್ಗಮ್ಮನ ಗುಡಿ ಬಳಿ ಸಂತೆ ಮಾಡುವುದರಿಂದ ನಾಡಿನಾದ್ಯಂತ ಯಾವುದೇ ತೊಂದರೆ ಇಲ್ಲದೇ ಕಾಲಕಾಲಕ್ಕೆ ಉತ್ತಮ ಮಳೆ, ಬೆಳೆ ಬಂದು ರೈತಾಪಿ ಜನರು ಖುಷಿಯಾಗಿರುತ್ತಾರೆ. ಇದರಿಂದ ವ್ಯಾಪಾರ ವಹಿವಾಟು ಚೆನ್ನಾಗಿ ನಡೆಯುತ್ತವೆ ಎಂಬ ನಂಬಿಕೆ ಪ್ರತಿಯೊಬ್ಬರಲ್ಲೂ ಇದೆ. ಸಂತೆ ಶುರುವಾದ ದಿನದಿಂದಲೇ ಮಳೆಯಾಗಿರುವುದೇ ದುಗ್ಗಮ್ಮನ ಪವಾಡಕ್ಕೆ ಸಾಕ್ಷಿಯಾಗಿದೆ ಎಂದು ದೇವಿಯ ಆರಾಧಕರು ಹೇಳುತ್ತಾರೆ. ರೈತರು, ವ್ಯಾಪಾರಿಗಳು ಹಾವು ಬೆಳೆದ, ಖರೀದಿಸಿದ ಹೂವು, ಹಣ್ಣು, ಸೊಪ್ಪು, ತರಕಾರಿ ಮುಂತಾದವುಗಳನ್ನು ತಂದು ಮಾರಾಟ ಮಾಡುತ್ತಾರೆ. ಪ್ರತಿಯೊಬ್ಬರಿಗೂ ಉತ್ತಮ ವ್ಯಾಪಾರವಾಗುತ್ತದೆ. ಗ್ರಾಹಕರು, ಸಾರ್ವಜನಿಕರೂ ಕೂಡಾ ಇದಕ್ಕೆ ಸ್ಪಂದಿಸುತ್ತಾ ಬಂದಿದ್ದಾರೆ. ಭಕ್ತರ ಪ್ರಾರ್ಥನೆಗೆ ಕಿವಿಗೊಟ್ಟು, ದುಗ್ಗಮ್ಮ ಕೃಪೆ ತೋರಿ, ಸಮೃದ್ಧ ಮಳೆ, ಬೆಳೆಯನ್ನು ಕರುಣಿಸಲಿ ಎಂಬುದೇ ಎಲ್ಲರ ಪ್ರಾರ್ಥನೆಯಾಗಿದೆ.

ಹಳೇಪೇಟೆ ವೀರಭದ್ರೇಶ್ವರ ದೇವಾಲಯದಲ್ಲಿ ಇಂದು ಮಳೆಗಾಗಿ ವಿಶೇಷ ಪೂಜೆ

• **ದಾವಣಗೆರೆ:** ಇಲ್ಲಿನ ಹಳೇಪೇಟೆಯ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವರುಣನ ಕೃಪೆಗಾಗಿ ಜೂನ್ 30ರ ಇಂದು ವಿಶೇಷ ಪೂಜೆ ಹಾಗೂ ಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ. ಇಂದು ಮುಂಜಾನೆ ಮಹಾರುದ್ರಾಭಿಷೇಕ ಮತ್ತು ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ಹಾಗೂ ಸಂಜೆ 7 ಗಂಟೆಗೆ ಸ್ವಾಮಿಯ ಪಲ್ಲಕ್ಕಿ ಉತ್ಸವವು ವೈಭವದಿಂದ ನೆರವೇರಲಿದೆ. ಈ ಎಲ್ಲ ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ಕೋರಿದೆ.

ಚಿರಡೋಣಿಯಲ್ಲಿ ಕಂತೆ ಭಿಕ್ಷೆ



• **ಬಸವಾಪಟ್ಟಣ:** ಉತ್ತಮ ಮಳೆಯಾಗಿ ನಾಡು ಸುಭಿಕ್ಷವಾಗಲಿ, ರೈತರ ಬದುಕು ಹಸನಾಗಲಿ ಎಂಬ ಸಂಕಲ್ಪದೊಂದಿಗೆ ಬಸವಾಪಟ್ಟಣ ಸಮೀಪದ ಚಿರಡೋಣಿ ಗ್ರಾಮದಲ್ಲಿ ಮೂರು ದಿನಗಳ ಕಾಲ ಕಂತೆ ಭಿಕ್ಷೆ ಸಂಗ್ರಹಿಸಿ ವಿಶೇಷ ಧಾರ್ಮಿಕ ಆಚರಣೆಗಳನ್ನು ನಡೆಸಿ, ಸೋಮವಾರ ವೀರಭದ್ರೇಶ್ವರ ಸ್ವಾಮಿಗೆ ವಿಶೇಷ ಪೂಜೆ ಹಾಗೂ ಅಭಿಷೇಕ ನೆರವೇರಿಸಲಾಯಿತು.

ಗ್ರಾಮದಲ್ಲಿ ಮೂರು ದಿನಗಳ ಕಾಲ ಮನೆ ಮನೆಗೆ ತೆರಳಿ ಕಂತೆ ಭಿಕ್ಷೆ ಸಂಗ್ರಹಿಸಿ, ಅದರ ಮೂಲಕ ಸಾಮೂಹಿಕ ಭೋಜನ ಆಯೋಜಿಸಲಾಯಿತು. ಈ ಅವಧಿಯಲ್ಲಿ ಉತ್ತಮ ಮಳೆಯಾಗಿ ಬೆಳೆ ಸಮೃದ್ಧಿಯಾಗಲಿ ಎಂದು ಗ್ರಾಮ ದೇವತೆ ವೀರಭದ್ರೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಗ್ರಾಮಸ್ಥರು ಪ್ರಾರ್ಥನೆ ಸಲ್ಲಿಸಿದರು.

ಸೋಮವಾರ ಬೆಳಗ್ಗೆ ಸುಮಾರು 10 ಗಂಟೆಗೆ ವೀರಭದ್ರೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ಭಕ್ತರು ಗ್ರಾಮದ ಹೊರವಲಯದಲ್ಲಿ ಹರಿಯುವ ಉಡೆದಳ್ಳಿ ಹಳ್ಳದವರೆಗೆ ಮೆರವಣಿಗೆಯಲ್ಲಿ ಕೊಂಡೊಯ್ದರು. ಹಳ್ಳದಲ್ಲಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಹಾಗೂ ಅಭಿಷೇಕ ನೆರವೇರಿಸಿದ ಬಳಿಕ ಗ್ರಾಮಸ್ಥರು ಮನೆಗಳಿಂದ ತಂದಿದ್ದ ರೊಟ್ಟಿ ಬುತ್ತಿಯನ್ನು ಸಾಮೂಹಿಕವಾಗಿ ಸವಿದರು.

ಬಳಿಕ ವೀರಭದ್ರೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪುನಃ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಐದಾರು ಮಂದಿ ಭಕ್ತರು ಪಲ್ಲಕ್ಕಿಯನ್ನು ಹೊತ್ತು ನಿಂತರು. ಈ ವೇಳೆ ಗ್ರಾಮದ ಹಿರಿಯ ಮುಖಂಡರೊಬ್ಬರು ಗ್ರಾಮದ ಪರವಾಗಿ ವೀರಭದ್ರೇಶ್ವರ ಸ್ವಾಮಿಗೆ ಸಂಕಲ್ಪ ಮಾಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈ ವರ್ಷದ ಮಳೆ ಹಾಗೂ ಬೆಳೆ ಹೇಗಿರಲಿದೆ ಎಂಬುದನ್ನು ತಿಳಿಯುವ ಉದ್ದೇಶದಿಂದ ಮುನ್ನವೇ ಎರಡು ಗುರುತುಗಳನ್ನು ನಿಗದಿಪಡಿಸಿಕೊಂಡರು. ಒಂದು ಗುರುತು ಈ ಬಾರಿ ಮಳೆ-ಬೆಳೆ ಸುಭಿಕ್ಷವಾಗಲಿದೆ ಎಂಬುದಕ್ಕೂ, ಮತ್ತೊಂದು ಗುರುತು ಈ ಬಾರಿ ಮಳೆಯ ಅಭಾವ ಉಂಟಾಗಲಿದೆ ಎಂಬುದಕ್ಕೂ ಮೀಸಲಾಗಿತ್ತು. ಸಂಕಲ್ಪದ ಬಳಿಕ ಪಲ್ಲಕ್ಕಿಯ ಹೊತ್ತವರು ಉತ್ಸವ ಮೂರ್ತಿಯ ಆದೇಶದಂತೆ ಚಲಿಸಿ ಹೋಗಿ ಮಳೆಯ ಅಭಾವವನ್ನು ಸೂಚಿಸುವ ಗುರುತನ್ನು ಮುಟ್ಟಿ ಕುರುಹು ತೋರಿಸಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದರು. ಇದರ ಆಧಾರದ ಮೇಲೆ ಈ ಬಾರಿ ಮಳೆಯ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ ಎಂಬ ಅಪ್ಪಣೆ ದೊರೆತಿದೆ ಎಂದು ಹೇಳಿದರು.

ಗ್ರಾಮದ ಹಿರಿಯರ ಪ್ರಕಾರ, ಮಳೆ ಕೊರತೆಯ ಲಕ್ಷಣಗಳು ಕಂಡುಬಂದಾಗ ಚಿರಡೋಣಿ ಗ್ರಾಮದಲ್ಲಿ ಬಹಳ ಹಿಂದಿನಿಂದಲೂ ಈ ವಿಶಿಷ್ಟ ಆಚರಣೆ ನಡೆಸುವ ಸಂಪ್ರದಾಯವಿದೆ. ಮೂರು ದಿನ ಕಂತೆ ಭಿಕ್ಷೆ ಸಂಗ್ರಹಿಸಿ ಸಾಮೂಹಿಕ ಭೋಜನ ನಡೆಸಿ, ನಾಲ್ಕನೇ ದಿನ ಉತ್ಸವ ಮೂರ್ತಿಯನ್ನು ಉಡೆದಳ್ಳಿ ಹಳ್ಳಕ್ಕೆ ಕೊಂಡೊಯ್ದು ಅಭಿಷೇಕ ಹಾಗೂ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಈ ಆಚರಣೆ ಬಳಿಕ ಹಿಂದಿನ ಅನೇಕ ಸಂದರ್ಭಗಳಲ್ಲಿ ಉತ್ತಮ ಮಳೆಯಾಗಿ ಬೆಳೆ ಸಮೃದ್ಧಿಯಾಗಿದ್ದನ್ನು ಹಿರಿಯರು ಸ್ಮರಿಸಿದರು.

ಧಾರ್ಮಿಕ ನಂಬಿಕೆ ಹಾಗೂ ಸಂಪ್ರದಾಯದಂತೆ ನಡೆದ ಈ ವಿಶೇಷ ಆಚರಣೆಯಲ್ಲಿ ಗ್ರಾಮಸ್ಥರು, ರೈತರು ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ರಾಜ್ಯಾದ್ಯಂತ ಉತ್ತಮ ಮಳೆಯಾಗಿ ಕೃಷಿ ಚಟುವಟಿಕೆಗಳು ಯಶಸ್ವಿಯಾಗಿ ನಡೆಯಲಿ ಎಂದು ಭಕ್ತಿಭಾವದಿಂದ ಪ್ರಾರ್ಥಿಸಿದರು.

ಈ ಕಾರ್ಯಕ್ರಮದಲ್ಲಿ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ ಆಡಳಿತ ಸಮಿತಿಯ ಅಧ್ಯಕ್ಷ ಎಸ್ ರಾಜು, ಕಾರ್ಯದರ್ಶಿ ಕೆ ಜಿ ಚಂದ್ರಣ್ಣ, ಹಾಗೂ ದೇವಸ್ಥಾನ ಸಮಿತಿಯ ಸದಸ್ಯರು, ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಕಾನೂನು ಕ್ರಮ ಕೈಗೊಳ್ಳಲು ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸದಸ್ಯರ ಆಗ್ರಹ

ಅಪಪ್ರಚಾರ ಖಂಡಿಸಿ ನಾಳೆ ಪ್ರತಿಭಟನೆ

• **ದಾವಣಗೆರೆ:** ಇಲ್ಲಿನ ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಸ್ಥೆಯ ಮಕ್ಕಳ ವಿದ್ಯಾಭ್ಯಾಸದ ಮೇಲೆ ಕೆಟ್ಟ ಪರಿಣಾಮ ಬೀರುವಂತೆ ಹಾಗೂ ವಿದ್ಯಾಸಂಸ್ಥೆ ವಿರುದ್ಧ ಸುಳ್ಳು ಹೇಳಿಕೆ ನೀಡಿ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಜುಲೈ 1 ರಂದು ಬೆಳಗ್ಗೆ 11 ಗಂಟೆಗೆ ನಗರದ ಅಂಬೇಡ್ಕರ್ ಸರ್ಕಲ್‌ನಿಂದ ಉಪವಿಭಾಗಾಧಿಕಾರಿ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಲಾಗುವುದು ಎಂದು ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸದಸ್ಯರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎಲ್.ಎಂ.ಹನುಮಂತಪ್ಪ, ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ, ನಿರ್ದೇಶಕ ಹಲಗೇರಿ ಮಂಜಪ್ಪ ಮಾತನಾಡಿ, ಇತ್ತೀಚೆಗೆ ಮಾದಿಗ ಸಮಾಜದ ಸ್ವಯಂ ಘೋಷಿತ ಸ್ವಹಿತಾಸಕ್ತಿಯುಳ್ಳ ಕೆಲ ಮುಖಂಡರು ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ವಿರುದ್ಧ ಪತ್ರಿಕಾಗೋಷ್ಠಿ ನಡೆಸಿ, ನಮ್ಮ ಸಂಸ್ಥೆ ವಿರುದ್ಧ ಯಾವುದೇ ಆಧಾರರಹಿತವಾದ ಅಪಪ್ರಚಾರ, ಬರಿ ಹುಸಿ ಸುದ್ದಿ ಸುಳ್ಳುಗಳ ಕಥೆಯನ್ನು ಕಟ್ಟಿ ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ತೇಜೋವಧೆ ಮಾಡುವುದರ ಮೂಲಕ ಮಾದಿಗ ಸಮಾಜಕ್ಕೆ ತಪ್ಪು ಸಂದೇಶ ಮೂಡುವಲ್ಲಿ ಅಪಪ್ರಚಾರ ಮಾಡಿದ್ದಾರೆ. ಆದಕ್ಕೆ ಆಡಳಿತ ಮಂಡಳಿ ಆ ಎಲ್ಲಾ ಸುಳ್ಳು ಆರೋಪಗಳಿಗೆ ದಾಖಲೆ ಸಮೇತ ಉತ್ತರಿಸುತ್ತಿದ್ದೇವೆ ಎಂದರು.

ಸಂಘದಲ್ಲಿ ಕೇವಲ ಐದು ಕುಟುಂಬಕ್ಕೆ ಮಾತ್ರ ಸದಸ್ಯತ್ವ ನೀಡಿಲ್ಲ, ಒಟ್ಟು 201 ಸಕ್ರಿಯ ಸದಸ್ಯರಿದ್ದಾರೆ. ಸಂಘದಲ್ಲಿ ಗ್ರಾಮೀಣ, ಪಟ್ಟಣ ಹಾಗೂ ಎಂಟು ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯ 200ಕ್ಕು ಹೆಚ್ಚು ಸದಸ್ಯರಿದ್ದಾರೆ. 2023ರ ಅಕ್ಟೋಬರ್ /ನವೆಂಬರ್ ತಿಂಗಳಲ್ಲಿ 100 ಜನ ಸದಸ್ಯರಿಗೆ ಪೇಪರ್ ಕಾಲ್ ಮಾಡಿ ಸದಸ್ಯತ್ವದ ಅರ್ಜಿ ತೆಗೆದುಕೊಂಡು ಸದಸ್ಯರನ್ನು ಭರ್ತಿ ಮಾಡಿದೆವೆ. ಇದೆಲ್ಲಾ ಡಿಆರ್ ಕಚೇರಿ ನಿರ್ದೇಶನ ಹಾಗೂ ಕಾನೂನಿನಂತೆ ಸದಸ್ಯತ್ವ ಕೊಡಲಾಗಿದೆ. ಬೈಲಾ ಪ್ರಕಾರ 1000 ರೂಪಾಯಿಗೆ ಒಂದು ವರ್ಷ, 5000 ಸಾವಿರ ರೂ.ಗಳಿಗೆ ಬೈಲಾ ಪ್ರಕಾರ ಆಜೀವ ಸದಸ್ಯತ್ವ ಇದೆ. ಪ್ರಿಲಿಮ್‌ನರಿ ಮೆಂಬರ್ ಶಿಪ್ ಪಡೆಯಲು 1 ಸಾವಿರ ರೂಪಾಯಿ ಬೈಲಾ ಪ್ರಕಾರ ಇದೆ. ಅದೇ ರೀತಿ ಸದಸ್ಯತ್ವ ನೀಡಲಾಗಿದೆ ಎಂದರು.

ಕೈಕಣಕ ಸಂಸ್ಥೆಯಲ್ಲಿ ಎಲ್ಲಿಯೂ ಸಹ ತೊಂದರೆ ಆಗದಂತೆ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಕಟ್ಟಡ ಒಡೆದಿರುವುದಿಲ್ಲ, ಮೂಲತಃ ಸಂಸ್ಥೆಯವರು ಸ್ಕೂಲ್ ಬಿಲ್ಡಿಂಗ್ ಪ್ಲಾನ್ ಮಾಡಿದ್ದಾರೆ, ಸ್ಕೂಲ್ ಬಿಲ್ಡಿಂಗ್ ಮಾಡಿದಾಗಲೇ ರಸ್ತೆ ಒಡಿ 20 ಅಡಿ ಜಾಗ ಬಿಟ್ಟು ಶಾಲಾ ಕಟ್ಟಡ ಕಾಮಗಾರಿ ಮಾಡಿದ್ದಾರೆ. ಅಂತಹ ಅನುಪಯುಕ್ತ ಶಾಲಾ ಜಾಗದಲ್ಲಿ ಹಾಸ್ಟೆಲ್ ಕಟ್ಟಡ ಹಾಗೂ ಮಳಿಗೆ ನಿರ್ಮಿಸಬೇಕೆಂದು ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧಾರ ತೆಗೆದುಕೊಂಡಿದ್ದರಿಂದ ಕೆಳಭಾಗದಲ್ಲಿ ಮಳಿಗೆ ಮೇಲ್ಭಾಗದಲ್ಲಿ ವಿದ್ಯಾರ್ಥಿಗಳ ಹಾಸ್ಟೆಲ್ ಕಟ್ಟಲಾಗಿದೆ. ಇದರಲ್ಲಿ ಏನು ? ಅಕ್ರಮ ಆಗಿದೆ ತಿಳಿಸಲಿ ಎಂದು ಅವರು ಈ ಸಂದರ್ಭದಲ್ಲಿ ಸವಾಲು ಹಾಕಿದರು.

ಬಿಲ್ಡಿಂಗ್ ಲೈಸೆನ್ಸ್‌ಗೆ ಸಂಬಂಧಿಸಿದಂತೆ ನಾವು ಯಾವುದೇ ಕಾನೂನು ಉಲಂಘಿಸಿಲ್ಲ, ಸಂಬಂಧಿಸಿದ ಇಲಾಖೆಯಿಂದ ಅಧಿಕೃತವಾಗಿ ಪರ್ಮಿಷನ್ ತಂದಿದ್ದೇವೆ. ಅದಕ್ಕೆ ಡಿ.ಎಸ್‌ನ್, ಹಾಗೂ ಮಾಜಿ ಸಚಿವ ಎಸ್‌ಎ ರವೀಂದ್ರನಾಥ ಅವರು 1 ಕೋಟಿ ಅನುದಾನ ನೀಡಿದ್ದರು ಅದರಲ್ಲಿ 50 ಲಕ್ಷ ಬಿಡುಗಡೆಯಾಗಿದೆ ಇನ್ನೂ 50 ಲಕ್ಷದ ಬಿಡುಗಡೆಯಾಗದ ಕಾರಣ ಎಸ್‌ಬಿಐ ಹಾಗೂ ಇತರೆ ಬ್ಯಾಂಕ್‌ನಿಂದ 81 ಲಕ್ಷ ಸಾಲ ಪಡೆದಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಸಂಸ್ಥೆಯಲ್ಲಿ ಒಟ್ಟು 336 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಬರೀ 60 ವಿದ್ಯಾರ್ಥಿ ಎಂದು ಇವರುಗಳು ಸುಳ್ಳು ಅಪಪ್ರಚಾರ ಮಾಡುತ್ತಿದ್ದಾರೆ. ಹೀಗೆ ಅವರ ಎಲ್ಲಾ ಆರೋಪಗಳನ್ನು ನಮ್ಮ ಬಳಿ ದಾಖಲೆ ಇದೆ. ಆದ್ದರಿಂದ ಮಾದಿಗ ಸಮಾಜದಲ್ಲಿ ಈ ಬಗ್ಗೆ ಜಾಗೃತಿ ಮಾಡಿಸಲು ಹಾಗೂ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜು.1 ರಂದು ಪ್ರತಿಭಟನೆ ಮೂಲಕ ಮನವಿ ಸಲ್ಲಿಸಲಿದ್ದೇವೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಪದಾಧಿಕಾರಿಗಳಾದ ಚಿನ್ನಗಿರಿ ಕೇಬಲಪ್ಪ, ಚಂದ್ರಪ್ಪ, ರುದ್ರಪ್ಪ, ಹೊನ್ನಾಳಿ ಮಂಜಣ್ಣ, ಹನುಮಂತ ಶಿವರಾಂ, ದೇವೇಂದ್ರಪ್ಪ ಹಾಗೂ ಮಾದಿಗ ಸಮಾಜದ ಮುಖಂಡರು, ಸಂಘದ ಸದಸ್ಯರು ಹಾಜರಿದ್ದರು.

ತುಮ್ಕೋಸ್ 42ನೇ ವಾರ್ಷಿಕ ಮಹಾಸಭೆ | ಅಧ್ಯಕ್ಷ ಶಿವಕುಮಾರ್ ಹೇಳಿಕೆ

25 ಕೋಟಿ ರೂ. ಲಾಭದ ಗುರಿ

• **ಚನ್ನಗಿರಿ:** ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಅಡಿಕೆ ಬೆಳೆಗಾರರ ಜೀವನಾಡಿಯಾಗಿರುವ ತುಮ್ಕೋಸ್ ಸಂಸ್ಥೆ ಪ್ರಸಕ್ತ ಸಾಲಿನಲ್ಲಿ ರೂ 15.84 ಕೋಟಿ ನಿವ್ವಳ ಲಾಭವನ್ನು ಗಳಿಸಿದ್ದು, 2026–27 ನೇ ಸಾಲಿನಲ್ಲಿ ರೂ 25 ಕೋಟಿ ಲಾಭವನ್ನು ಗಳಿಸುವ ನಿರೀಕ್ಷೆಯನ್ನು ಹೊಂದಿದೆ ಎಂದು ತುಮ್ಕೋಸ್ ಅಧ್ಯಕ್ಷ ಎಚ್. ಎಸ್. ಶಿವಕುಮಾರ್ ತಿಳಿಸಿದರು.

ಪಟ್ಟಣದ ಚನ್ನಮ್ಮಾಜಿ ಸಮುದಾಯ ಭವನದಲ್ಲಿ ಸೋಮವಾರ ನಡೆದ 42ನೇ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿ,

ಕಳೆದ ಸಾಲಿನಲ್ಲಿ 2.68 ಲಕ್ಷ ಮೂಟೆ ಅಡಿಕೆ ಆವಕವಾಗಿದ್ದು, ಪ್ರಸಕ್ತ ಸಾಲಿನಲ್ಲಿ 4.20 ಲಕ್ಷ ಮೂಟೆಗೆ ಹೆಚ್ಚಳವಾಗಿದೆ. ಹಾಗಾಗಿ ಅಡಿಕೆ ಮೂಟೆಗಳನ್ನು ಸಂಗ್ರಹಿಸಲು ಸಾಗರಟ್ಟೆ, ತಾವರೆಕೆರೆ, ಸಂತೇಬೆನ್ನೂರು ಗ್ರಾಮಗಳಲ್ಲಿ 30 ಕೋಟಿ ರೂ ವೆಚ್ಚದಲ್ಲಿ ಅಡಿಕೆ ಗೋದಾಮುಗಳನ್ನು ನಿರ್ಮಾಣ ಮಾಡುವ ಅಗತ್ಯತೆಯನ್ನು ನೀಗಲಾಗಿದೆ. ಸಂಸ್ಥೆಯಿಂದ 250 ಕಿಲೋ ವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಹಾಗೆಯೇ ಪಟ್ಟಣದ ಸೂಪರ್ ಮಾರ್ಕೆಟ್‌ನಲ್ಲಿ ಬಾಟಾ ಶೋ ರೂಂ ಕೂಡಾ ತೆರೆಯಲಾಗುವುದು. ಮುಂದಿನ



ದಿನಗಳಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಅಗ್ರಿ ಮಾರ್ಟ್ ಕೂಡಾ ಸ್ಥಾಪಿಸಲಾಗುವುದು ಎಂದರು.

ಒಟ್ಟು 34,846 ಸಂಖ್ಯೆಯಲ್ಲಿ ಸದಸ್ಯರಿದ್ದು, ಸಂಘದ ಆಡಳಿತ ಮತ್ತು ದಿನ ನಿತ್ಯದ ಕಾರ್ಯಾಚರಣೆಗಳು ಶಿಸ್ತುಬದ್ಧ, ಪಾರದರ್ಶಕ ಹಾಗೂ ಪರಿಣಾಮಕಾರಿ ರೀತಿಯಲ್ಲಿ ನಡೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಂಘದ ಸದಸ್ಯರು ಹಾಗೂ ಆಡಳಿತ ಮಂಡಳಿಯ ಸಹಕಾರದಿಂದಾಗಿ ಈ ವರ್ಷದ ಹಿಂದೆ ಬಿ ದರ್ಜೆಯಾಗಿದ್ದ ಸಂಘ, ಇಂದು ಹೊಸ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ಒಂದೇ ವರ್ಷದಲ್ಲಿ ಎ ದರ್ಜೆಗೆ ಮರಳಿದೆ ಎಂದು ಹೇಳಿದರು.

ವ್ಯವಸ್ಥಾಪಕ ನಿರ್ದೇಶಕ ಎಸ್.ಪಿ. ಮಧು, ನಿರ್ದೇಶಕರಾದ ಜಿ.ಎಂ. ತಿಪ್ಪೇಸ್ವಾಮಿ, ಸಿದ್ದಯ್ಯ, ಡಿ.ಎಸ್. ಪ್ರಸನ್ನ, ಓಂಕಾರ ಮೂರ್ತಿ, ಟಿ.ವಿ. ರಾಜು, ಜಿ.ಆರ್. ಶಿವಕುಮಾರ, ವಿಜಯ್ ಕುಮಾರ, ಲೋಕೇಶ್ವರ, ಬಿ. ಚನ್ನಬಸಪ್ಪ, ಕೆ.ಎನ್. ಪ್ರಭುಲಿಂಗಪ್ಪ, ಗಂಗಾಧರಪ್ಪ, ರಘು ಉಪಸ್ಥಿತರಿದ್ದರು.

» **ತುಮ್ಕೋಸ್‌ಗೆ ಕಳೆದ ಸಾಲಿನಲ್ಲಿ 2.68 ಲಕ್ಷ ಮೂಟೆ ಅಡಿಕೆ ಆವಕವಾಗಿದ್ದು ಪ್ರಸಕ್ತ ಸಾಲಿನಲ್ಲಿ 4.20 ಲಕ್ಷ ಮೂಟೆಗೆ ಹೆಚ್ಚಳ**

» **ಅಡಿಕೆ ಮೂಟೆಗಳನ್ನು ಸಂಗ್ರಹಿಸಲು ಸಾಗರಪೇಟೆ, ತಾವರೆಕೆರೆ, ಸಂತೇಬೆನ್ನೂರು ಗ್ರಾಮಗಳಲ್ಲಿ 30 ಕೋಟಿ ರೂ ವೆಚ್ಚದಲ್ಲಿ ಅಡಿಕೆ ಗೋದಾಮು ನಿರ್ಮಾಣ**

ಮಾದಾರ ಚೆನ್ನಯ್ಯ ಶ್ರೀಗಳಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ

• **ಚಿತ್ರದುರ್ಗ:** ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಕೆಂಪೇಗೌಡರ 517ನೇ ಜನ್ಮ ದಿನಾಚರಣೆ ಪ್ರಯುಕ್ತ ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ನೀಡುವ ವಾರ್ಷಿಕ ಪ್ರಶಸ್ತಿಗೆ ಭಾಜನರಾದ ಚಿತ್ರದುರ್ಗದ ಶ್ರೀಗುರು ಮಾದಾರ ಚೆನ್ನಯ್ಯ ಗುರುಪೀಠದ ಶ್ರೀಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರಿಗೆ ಬೆಂಗಳೂರಿನ ಜ್ಞಾನಜ್ಯೋತಿ ಆಡಿಟೋರಿಯಂ ನಡೆದ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಪ್ರದಾನ ಮಾಡಿದರು. ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಿಗೆ 2 ಲಕ್ಷ ರೂ. ನಗದು ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಇನ್ಫೋಸಿಸ್ ಸಂಸ್ಥೆಯ ಹಣಕಾಸು ವಿಭಾಗದ ಮಾಜಿ ಮುಖ್ಯಸ್ಥರು ಹಾಗೂ ಅಕ್ಷಯಪಾತ್ರೆ ಯೋಜನೆಯ ಸಹ ಸಂಸ್ಥಾಪಕ ಟಿ.ವಿ.ಮೋಹನದಾಸ್ ಪೈ, ರಾಜ್ಯದ ಆರ್ಥಿಕ ಇಲಾಖೆಯ ನಿವೃತ್ತ ಕಾರ್ಯದರ್ಶಿ ಎ.ಕೆ. ಲಕ್ಷ್ಮಣ್ ಅವರಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಲಾಯಿತು.

ಉಳಿದಂತೆ ನಾಡಪ್ರಭು ಕೆಂಪೇಗೌಡ ರಾಜ್ಯ ಮಟ್ಟದ ಪ್ರಶಸ್ತಿಗೆ ಆಡಳಿತ, ಶಿಕ್ಷಣ, ಸಂಸ್ಕೃತಿ, ಕೃಷಿ, ಪತ್ರಿಕೋದ್ಯಮ, ಸಾಹಿತ್ಯ, ಸಂಶೋಧನೆ, ಮಹಿಳಾ ಸಬಲೀಕರಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆ ಮಾಡಿರುವ 15 ಮಂದಿ ಅರ್ಹರನ್ನು ಆಯ್ಕೆ ಸಮಿತಿಯು ಆಯ್ಕೆ



ಮಾಡಿದೆ. ಅದರಂತೆ ಎಸ್.ವಿ. ರಂಗನಾಥ್, ಎಚ್.ಎ.ರಂಗನಾಥ್, ಎಂ.ಆರ್. ಜೈಶಂಕರ್, ಬಿ.ಎಂ. ಕೊಣೆರಿ, ಡಾ. ವಾಮದೇವಪ್ಪ, ಕೇಶವ ಅಯ್ಯ ವಿಕ್ರಮ್ ಮುತ್ತಣ್ಣ, ಜಯಪ್ರಕಾಶ್ ಗೌಡ, ರವಿಕುಮಾರ್, ಯಶಸ್ವಿನಿ ಶರ್ಮ, ಪ್ರೇಮಾ ಗಣೇಶ್, ರಶ್ಮಿ ಸಾವಂತ್, ಶ್ರೀವಿದ್ಯಾ ರಾಮಮೂರ್ತಿ, ಧರ್ಮೇಂದ್ರ, ಮಹೇಶ್ ಗೌಡ ಅವರು ರಾಜ್ಯ ಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ವಿ.ಸೋಮಣ್ಣ, ವಿಪಕ್ಷ ನಾಯಕ ಆರ್. ಅಶೋಕ್, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಎಂ.ಕೃಷ್ಣೇಗೌಡ, ಶಾಸಕ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಭಾಗವಹಿಸಿದ್ದರು.

ಗ್ರಂಥಪಾಲಕರ ರಾಜ್ಯ ಸಂಘದ ಅಧ್ಯಕ್ಷ ಪಂಪನಗೌಡ

ಗ್ರಾಮೀಣ ಗ್ರಂಥಾಲಯಗಳು ಶ್ರೀಸಾಮಾನ್ಯನ ವಿವಿ

• **ಹಿರಿಯೂರು:** ಗ್ರಾಮೀಣ ಗ್ರಂಥಾಲಯಗಳು ಶ್ರೀಸಾಮಾನ್ಯನ ವಿಶ್ವವಿದ್ಯಾಲಯಗಳು. ಆಧುನಿಕ ಸರ್ಕಾರದಿಂದ ಗ್ರಂಥಾಲಯಗಳು ಜ್ಞಾನಭಂಡಾರಗಳಾಗಿ ಪರಿವರ್ತನೆಗೊಂಡಿವೆ. ಎಲ್ಲಾ ವಯೋಮಾನದವರಿಗೂ ಉಪಯುಕ್ತ ಮಾಹಿತಿ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಉಪಯೋಗವನ್ನು ಪ್ರತಿಯೊಬ್ಬ ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದು ರಾಜ್ಯ ಸಂಘದ ಅಧ್ಯಕ್ಷ ಪಂಪನಗೌಡ ಕರೆ ನೀಡಿದರು.

ಇತ್ತೀಚೆಗೆ ಚಿತ್ರದುರ್ಗ ಜಿಲ್ಲಾ ಅರಿವು ಕೇಂದ್ರ, ಗ್ರಂಥಪಾಲಕರ ಜಿಲ್ಲಾ ಸಂಘದ ವತಿಯಿಂದ ತಾಲೂಕಿನ ವಾಣಿ ವಿಲಾಸಪುರದಲ್ಲಿ ಜರುಗಿದ ನಿವೃತ್ತ ಗ್ರಂಥಪಾಲಕಿ ಗೀತಮ್ಮ ಅವರ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಘದ ಕಾರ್ಯದರ್ಶಿ ನರಸಿಂಹಪ್ಪ, ಉಪಾಧ್ಯಕ್ಷ



ಶಿವಮೂರ್ತಿ, ಮಹಿಳಾ ಉಪಾಧ್ಯಕ್ಷರಾದ ಶಾರದಮ್ಮ, ಸುಶೀಲಮ್ಮ, ಚಿತ್ರದುರ್ಗ ಜಿಲ್ಲಾ ಸಂಘದ ಗೌರವಾಧ್ಯಕ್ಷ ಅಂಜನ್ ಮೂರ್ತಿ, ಅಧ್ಯಕ್ಷ ಎಂ.ಡಿ. ಕೋಟಿ ಎನ್. ಕುಮಾರ್, ಉಪಾಧ್ಯಕ್ಷ ಆರ್. ಗಾದ್ರಿಪಾಲಯ್ಯ, ಮಹಿಳಾ ಅಧ್ಯಕ್ಷೆ ಎಚ್. ಎಸ್. ತ್ರಿವೇಣಿ, ಪ್ರಧಾನ ಕಾರ್ಯದರ್ಶಿ ಎಚ್. ರಂಗಯ್ಯ, ಸಹ ಕಾರ್ಯದರ್ಶಿ ಜಿ. ಹನುಮಂತಪ್ಪ, ಮಹಿಳಾ ಸಹಕಾರ್ಯದರ್ಶಿ ಬಿ. ಭವಾನಿ, ಉಮಕ್ಕ, ಸಾಗಣೆಕೆರೆ ರಘು, ಲೋಕೇಶ್, ಹನುಮಂತರಾಜು, ಸುರೇಶ್ ಇದ್ದರು.

ಎಲ್ಲರಿಗೂ ಒಳ್ಳೆಯದಾಗಲಿ ಎಂಬುದೇ ಹಿಂದು ವಿಚಾರಧಾರೆ: ಕೃಷ್ಣಪ್ರಸಾದ್



• ಶಿವಮೊಗ್ಗ: ಎಲ್ಲರಿಗೂ ಒಳ್ಳೆಯದಾಗಲಿ ಎಂಬುದೇ ಹಿಂದು ವಿಚಾರಧಾರೆ, ಭಾರತದ ಆತ್ಮವಿದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಬೌದ್ಧಿಕ್ ಪ್ರಮುಖ್ ಕೃಷ್ಣಪ್ರಸಾದ್ ಹೇಳಿದರು.

ಸಾಗರ ನಗರದ ಕುಡುವಳ್ಳಿ ಸದಾನಂದ ಸ್ವರಾಲಯದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿ ವರ್ಷದ ಹಿನ್ನೆಲೆ ನಡೆದ ಪ್ರಮುಖ ನಾಗರಿಕರ ಗೋಷ್ಠಿಯಲ್ಲಿ ಮಾತನಾಡಿ, ದೇಶ ಉಳಿಯಬೇಕಾದರೆ ಹಿಂದುತ್ವ ಉಳಿಯಬೇಕು, ಹಿಂದುತ್ವ ಉಳಿಯಬೇಕಾದರೆ ದೇಶ ಉಳಿಯಬೇಕೆಂಬ ವಿಚಾರದಿಂದ ಸಂಘದ ನಡೆದು ಬಂದಿದೆ. ಸಂಘದ ಶಾಖೆಗೆ ಬಂದವರಿಗೆ ನಾನೊಬ್ಬನಲ್ಲ, ನಾವೆಲ್ಲರೂ ಅನಿಸುತ್ತದೆ. ಆ ಮೂಲಕ ಸಮಾಜ ಪರಿವರ್ತನೆ ಕಾರ್ಯ ಆಗುತ್ತಿದೆ ಎಂದರು.

ಪರಕೀಯರ ದಾಸ್ಯಕ್ಕೆ ಒಳಗಾಗಲು ಕಾರಣವೇನೆಂದು ಚಿಂತಿಸಿದವರು ಡಾಕ್ಟರ್ ಜೀ. ಪರಸ್ಪರ ಕಿತ್ತಾಟದಿಂದ ವೈಮನಸ್ಸು ಕೀಳರಿಮೆ ಬೆಳೆಯಿತು. ಆತ್ಮಹೀನಾಯತೆ, ಆತ್ಮವಿಸ್ಮೃತಿಯಿಂದ ದೇಶವನ್ನು ಆಚೆಗೆ ತರುವ ಬಗ್ಗೆ ಯೋಚಿಸಿ ಸಂಘವನ್ನು ಆರಂಭಿಸಿದರು ಎಂದರು.

ಭಾರತದ ರಾಷ್ಟ್ರೀಯತೆಯ ಸತ್ವ ಹಿಂದುತ್ವ. ಅನೇಕ ಮತಗಳಿವೆ, ಸಂಪ್ರದಾಯ, ಆಚರಣೆಗಳಿವೆ ಅವ್ಯಾವು ಕಟ್ಟುಪ್ರಶ್ನೆಗಳಲ್ಲ, ಅರ್ಥೈಸಿಕೊಂಡ ರೀತಿ ತಪ್ಪಾಗಿರಬಹುದು. ಭಾರತವನ್ನು ತಿಳಿಯಲು ಮಾತೃದೇವೋ ಭವ, ಪಿತೃದೇವೋ ಭವ, ರಾಷ್ಟ್ರದೇವೋ ಭವ ಎಂಬ ವಿಚಾರವನ್ನು ಜೀವನದಲ್ಲಿ ಜೋಡಿಸಿಕೊಳ್ಳಬೇಕು. ಬುದ್ಧ, ಬಸವ, ವಿವೇಕಾನಂದ ಬೋಧನೆಗಳನ್ನು ಅನುಸರಿಸುವುದು ರಾಷ್ಟ್ರೀಯತೆ ಎಂದರು.

ಈ ಸಂದರ್ಭದಲ್ಲಿ ಸಾಗರ ಜಿಲ್ಲಾ ಸಂಘಚಾಲಕ ಕೇಶವ ಸಂಪೆಕ್ಕೆ ಉಪಸ್ಥಿತರಿದ್ದರು.

ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಿ: ಅಧಿಕಾರಿಗಳಿಗೆ ಶಾಸಕ ಎಸ್.ಎನ್. ಚನ್ನಬಸಪ್ಪ ಸೂಚನೆ

ನಾಗರಿಕ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ; ಸೂಕ್ತ ಪರಿಹಾರ ಒದಗಿಸಿ



• ಶಿವಮೊಗ್ಗ: ಉದ್ಯಮಿಗಳು ಮತ್ತು ಕಾರ್ಮಿಕರು ಎದುರಿಸುತ್ತಿರುವ ವಿದ್ಯುತ್ ಸೇರಿದಂತೆ ಯಾವುದೇ ನಾಗರಿಕ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ಸೂಕ್ತ ಪರಿಹಾರ ಒದಗಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಅಧಿಕಾರಿಗಳಿಗೆ ತಿಳಿಸಿದರು.

ಶಾಸಕರ ಕಚೇರಿ ಕರ್ತವ್ಯ ಭವನದಲ್ಲಿ ಮಾಚೇನಹಳ್ಳಿ ಕೈಗಾರಿಕಾ ಘಟಕದ ನಿಯೋಗದೊಂದಿಗೆ ಆಯೋಜಿಸಲಾಗಿದ್ದ ಸಭೆಯಲ್ಲಿ ಪಾಲ್ಗೊಂಡು, ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಆಗಾಗ ಉಂಟಾಗುತ್ತಿರುವ ವಿದ್ಯುತ್ ಹಾಗೂ ತಾಂತ್ರಿಕ ಅಡಚಣೆಗಳಿಂದ ಉದ್ಯಮಗಳಿಗೆ ಆಗುತ್ತಿರುವ ನಷ್ಟದ ಕುರಿತು ಕೈಗಾರಿಕಾ ಸಂಘದ ಪದಾಧಿಕಾರಿಗಳು ಶಾಸಕರ ಗಮನಕ್ಕೆ ತಂದರು.

ಮನವಿ ಆಲಿಸಿದ ಶಾಸಕರು, ಸ್ಥಳದಲ್ಲೇ ಮೆಸ್ಕಾಂ ಉನ್ನತಾಧಿಕಾರಿಗಳೊಂದಿಗೆ ಚರ್ಚಿಸಿ, ಕೈಗಾರಿಕಾ ವಲಯಕ್ಕೆ ಯಾವುದೇ ಅಡೆತಡೆಯಿಲ್ಲದೆ ವಿದ್ಯುತ್ ಪೂರೈಸಲು ಅಗತ್ಯವಿರುವ ತಾಂತ್ರಿಕ ನವೀಕರಣಗಳನ್ನು ತಕ್ಷಣವೇ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯ ರುದ್ರೇಗೌಡರು, ಮಾಚೇನಹಳ್ಳಿ ಕೈಗಾರಿಕಾ ಘಟಕ ಸಂಘದ ಪ್ರಮುಖ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಚಾನಲ್‌ಗಳನ್ನು ಸ್ವಚ್ಛವಾಗಿಡುವುದು ಇಲಾಖೆಗಳ ಜವಾಬ್ದಾರಿ

• ಶಿವಮೊಗ್ಗ: ಈ ಬಾರಿ ಮುಂಗಾರು ಮಳೆ ನಿರೀಕ್ಷಿತ ಮಟ್ಟದಲ್ಲಿ ಬರದೇ ಇರುವುದರಿಂದ ಭವಿಷ್ಯದಲ್ಲಿ ನಗರದ ಜನತೆಗೆ ಕುಡಿಯುವ ನೀರಿನ ಯಾವುದೇ ತೊಂದರೆಯಾಗದಂತೆ ತಕ್ಷಣದಿಂದಲೇ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ನಗರದ ಜಲಮೂಲಗಳಾದ ಚಾನಲ್‌ಗಳನ್ನು ಸ್ವಚ್ಛವಾಗಿಡುವುದು ಇಲಾಖೆಗಳ ಜವಾಬ್ದಾರಿ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಸೂಚಿಸಿದರು.

ಕರ್ತವ್ಯ ಭವನದಲ್ಲಿ ಮಹಾನಗರ ಪಾಲಿಕೆ ಹಾಗೂ ತುಂಗಾ ಮೇಲ್ದಂಡೆ ಯೋಜನೆ ಅಧಿಕಾರಿಗಳೊಂದಿಗೆ ಆಯೋಜಿಸಲಾಗಿದ್ದ ಜಂಟಿ ಪರಿಶೀಲನಾ ಸಭೆ ನಡೆಸಿ, ಮಹಾನಗರ ಪಾಲಿಕೆ ಹಾಗೂ ತುಂಗಾ ಮೇಲ್ದಂಡೆ ಯೋಜನಾ ಮಂಡಳಿಯ ನಡುವೆ ಸಮನ್ವಯತೆ ಕೊರತೆಯಿಂದ ಸಾರ್ವಜನಿಕ ಕಾಮಗಾರಿಗಳಿಗೆ ಅಡ್ಡಿಯಾಗಬಾರದು. ಅಧಿಕಾರಿಗಳು ಪರಸ್ಪರ ಸಹಕಾರದೊಂದಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.

ನಗರದ ವ್ಯಾಪ್ತಿಯಲ್ಲಿ ಹಾದುಹೋಗುವ ಚಾನಲ್‌ಗಳ ಅಭಿವೃದ್ಧಿ ಹಾಗೂ ಅವುಗಳ ನಿರಂತರ ಸ್ವಚ್ಛತೆಯ ಕುರಿತು ಸಭೆಯಲ್ಲಿ ಚರ್ಚೆ ನಡೆಸಿ, ಅಗತ್ಯ ಕ್ರಮಗಳಿಗೆ ಸೂಚಿಸಿದರು.

ಗಾಜನೂರಿನ ತುಂಗಾ ಜಲಾಶಯದಲ್ಲಿ ಸದ್ಯ ಲಭ್ಯವಿರುವ ನೀರಿನ ಪ್ರಮಾಣ ಹಾಗೂ ನಗರದ ದೈನಂದಿನ ಪೂರೈಕೆಯ ಸ್ಥಿತಿಗತಿಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು, ಮಳೆಯ ಕೊರತೆ ಇರುವುದರಿಂದ ಮುಂದಿನ ದಿನಗಳಲ್ಲಿ ಉದ್ಭವಿಸಬಹುದಾದ ಜಲಕ್ಷಾಮವನ್ನು ಎದುರಿಸಲು ಈಗಿನಿಂದಲೇ ವೈಜ್ಞಾನಿಕ ನೀರಿನ ಪೂರೈಕೆ ಯೋಜನೆ ಹಾಗೂ ತುರ್ತು ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ಪಾಲಿಕೆ ಆಯುಕ್ತರಿಗೆ ತಿಳಿಸಿದರು.

ಆಯುಕ್ತ ಮಾಯಣ್ಣ ಗೌಡ, ಮುಖ್ಯ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನೆ ಅಧಿಕಾರಿಗಳು ಇದ್ದರು.

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಜನಜಾಗೃತಿ ಅಭಿಯಾನದಲ್ಲಿ ಕಿಮ್ಮನೆ ರತ್ನಾಕರ್ ಆಕ್ಷೇಪ

ಕೇವಲ 30 ದಿನದೊಳಗೆ ದಾಖಲೆ ಸಲ್ಲಿಸುವ ಸೂಚನೆ ಸರಿಯಲ್ಲ



• ಶಿವಮೊಗ್ಗ : ಆರ್‌ಟಿಸಿ ಬದಲಾವಣೆಗೂ ಮೂರು ತಿಂಗಳು ಸಮಯ ತೆಗೆದುಕೊಳ್ಳುವ ಸರ್ಕಾರದ ವ್ಯವಸ್ಥೆಯಲ್ಲಿ, ಮತದಾರರ ದಾಖಲೆಗಳನ್ನು ಕೇವಲ 30 ದಿನಗಳಲ್ಲಿ ಪೂರ್ಣಗೊಳಿಸುವಂತೆ ಹೇಳುವುದು ವಾಸ್ತವಿಕವಾಗಿ ಸರಿಯಲ್ಲ ಎಂದು ಮಾಜಿ ಸಚಿವ ಕಿಮ್ಮನೆ ರತ್ನಾಕರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ವಿಶೇಷ ಮತದಾರರ ಪಟ್ಟಿಯ ಪರಿಷ್ಕರಣೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಸೋಮವಾರ ಶಿವಪ್ಪ ನಾಯಕ ವೃತ್ತದಲ್ಲಿ ಆಯೋಜಿಸಲಾಗಿದ್ದ ಜನಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು.

ವಿವಿಧ ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆಯಿಂದ ಲಕ್ಷಾಂತರ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿದಿವೆ. ಪಶ್ಚಿಮ ಬಂಗಾಳದಲ್ಲಿ ಸುಮಾರು 91 ಲಕ್ಷ ಜನರ ಹೆಸರು ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ ಬಗ್ಗೆ ಉಲ್ಲೇಖಿಸಿದರು. ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳ್ಳಲು ಕನಿಷ್ಠ ಎರಡು ವರ್ಷಗಳ ಕಾಲಾವಕಾಶ ಬೇಕು. ಆದರೆ ಕೇವಲ 30 ದಿನಗಳೊಳಗೆ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿರುವುದು ಸಾಮಾನ್ಯ ಜನರಿಗೆ ಸಾಧ್ಯವಾಗದ ಕೆಲಸ ಎಂದು ಟೀಕಿಸಿದರು.

ಒಂದೇ ವ್ಯಕ್ತಿಯ ಹೆಸರು ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಸೇರಿದಂತೆ ವಿವಿಧ ದಾಖಲೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ದಾಖಲಾಗಿರುವ ಕಾರಣ ಸಣ್ಣ ಅಕ್ಷರ ವ್ಯತ್ಯಾಸವೂ ಅರ್ಜಿ ತಿರಸ್ಕಾರಕ್ಕೆ ಕಾರಣವಾಗಬಹುದು. ತಮ್ಮ ಹೆಸರೇ ವಿವಿಧ ದಾಖಲೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ದಾಖಲಾಗಿರುವ ಉದಾಹರಣೆಯನ್ನು ನೀಡಿ, ಇದನ್ನು ಸರಿಪಡಿಸಲು ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾದ ಪರಿಸ್ಥಿತಿ ಇದೆ ಎಂದರು.

ಪಾಸ್ ಪೋರ್ಟ್ ಹೊಂದಿರುವ ರಾಜ್ಯಗಳಾದ ಕೇರಳ ಹಾಗೂ ಪಂಜಾಬ್‌ನಲ್ಲಿ ಸಮಸ್ಯೆ ಕಡಿಮೆ ಇದೆ. ಆದರೆ ಪಾಸ್ ಪೋರ್ಟ್ ಇಲ್ಲದವರು ಪ್ರತಿಯೊಂದು ದಾಖಲೆ ವ್ಯತ್ಯಾಸಕ್ಕೂ ಪ್ರತ್ಯೇಕ ವಿವರಣೆ ನೀಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ತಿಳಿಸಿದರು.

ಮದುವೆಯಾದ ಮಹಿಳೆಯರು ತಂದೆಯ ಹಾಗೂ ಗಂಡನ ಹೆಸರಿನ ಬದಲಾವಣೆ, ವಿವಿಧ ಜಿಲ್ಲೆಗಳಿಂದ ದುಡಿಮೆಗಾಗಿ ವಲಸೆ ಬಂದ ಕಾರ್ಮಿಕರು, ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಜನರು, ಅನಾಥ ಮಕ್ಕಳು ಸೇರಿದಂತೆ ಹಲವು ವರ್ಗದ ಜನರಿಗೆ 30 ದಿನಗಳಲ್ಲಿ ದಾಖಲೆಗಳನ್ನು ಒದಗಿಸುವುದು ಅಸಾಧ್ಯ ಎಂದರು.

ದೇಶದಲ್ಲಿ ಇನ್ನೂ ಸುಮಾರು ಶೇ. 20 ಜನರಿಗೆ ಸಮರ್ಪಕ ಸಾಕ್ಷರತೆ ಇಲ್ಲ, ದಿನಗೂಲಿ ಕಾರ್ಮಿಕರು, ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ದಿನದ ಕೂಲಿಯನ್ನೇ ಅವಲಂಬಿಸಿರುವ ಕಾರಣ ದಾಖಲೆಗಳಿಗಾಗಿ ಕಚೇರಿಗಳಿಗೆ ಅಲೆದಾಡಲು ಸಾಧ್ಯವಾಗುವುದಿಲ್ಲ, ಇವರೆಲ್ಲ ಮತದಾನದಿಂದ ವಂಚಿತರಾಗುವ ಸಾಧ್ಯತೆ ಇದೆ. ಅದರ ಮೇಲೆ ನಿಗಾ ವಹಿಸಬೇಕು ಎಂದು ಸಲಹೆ ನೀಡಿದರು.

ಮಾಜಿ ಸಚಿವ ಮಧು ಬಂಗಾರಪ್ಪ ಸಭೆಯನ್ನುದ್ದೇಶಿಸಿ ಮಾತನಾಡಿ, ದೇಶದ ಪ್ರತಿಯೊಬ್ಬ ಪ್ರಜೆಯೂ ಮತದಾನದ ಹಕ್ಕು ಪಡೆದಿರುವುದು ಬಿಜೆಪಿ ಸರ್ಕಾರದಿಂದ ಅಲ್ಲ, ಅದು ಸಿಕ್ಕಿದ್ದು ಸಂವಿಧಾನದ ಮೂಲಕ. ಹಾಗಾಗಿ ನಮಗೆ ಸಂವಿಧಾನವೇ ದೇವರು. ಆ ಮೂಲಕವೇ ನಾವು ನಮ್ಮ ಹಕ್ಕನ್ನು ಉಳಿಸಿಕೊಳ್ಳಬೇಕಿದೆ. ಕೇಂದ್ರದ ಬಿಜೆಪಿ ಸರ್ಕಾರದ ದುರುದ್ದೇಶವನ್ನು ಆ ಮೂಲಕವೇ ತಡೆಯಬೇಕಿದೆ ಎಂದರು.

ನಾಳೆಯಿಂದಲೇ ನಾವು ನಮ್ಮ ಕರ್ತವ್ಯಗಳಲ್ಲಿ ತೊಡಗಿಸಿಕೊಳ್ಳಬೇಕಿದೆ. ಸಂವಿಧಾನ ಪ್ರಕಾರ ನಾವು ಏನು ಮಾಡಬೇಕೋ ಅದನ್ನು ಮಾಡೋಣ. ನಿವಾಸಿ ದೃಢೀಕರಣ ಸಮಸ್ಯೆ ಇದ್ದಲ್ಲಿ ನಾವೇ ಮುಂದೆ ನಿಂತು ಮಾಡಿಸೋಣ. ಪ್ರತಿಯೊಬ್ಬರಿಗೂ ಮತದಾನದ ಹಕ್ಕು ಇರುವಂತೆ ನೋಡಿಕೊಳ್ಳೋಣ ಎಂದು ಕರೆ ನೀಡಿದರು.

ವಿಪ ಸದಸ್ಯೆ ಬಲ್ಕೀಶ್ ಬಾನು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್.ಪ್ರಸನ್ನಕುಮಾರ್, ಮುಖಂಡರಾದ ಆಯನೂರು ಮಂಜುನಾಥ್, ಎನ್.ರಮೇಶ್, ಹೆಚ್.ಎಸ್ ಸುಂದರೇಶ್, ಹೆಚ್. ಸಿ. ಯೋಗೀಶ್, ಕಲಗೋಡು ರತ್ನಾಕರ್, ಇಸ್ಮಾಯಿಲ್ ಖಾನ್, ಜಿ.ಪಲ್ಲವಿ, ಎಂ. ಶ್ರೀಕಾಂತ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ವೇತಾ ಬಂಡಿ ಇನ್ನಿತರರು ಇದ್ದರು.

ನೀಟ್ ಪರೀಕ್ಷೆ ರದ್ದುಗೊಳಿಸಲಿ: ಮಧು ಬಂಗಾರಪ್ಪ



• ಶಿವಮೊಗ್ಗ: ಶಿಕ್ಷಣದ ಮೇಲೆ ರಾಜ್ಯಗಳಿಗೆ ಸಂಪೂರ್ಣ ಹಕ್ಕು ಇರಬೇಕು ಹಾಗೂ ನೀಟ್ ಪರೀಕ್ಷೆ ರದ್ದುಗೊಳಿಸಬೇಕು ಎಂದು ಮಾಜಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ಬಲವಂತದ ಅನುಷ್ಠಾನವನ್ನು ತೀವ್ರವಾಗಿ ವಿರೋಧಿಸುತ್ತೇವೆ. ಇದು ಗ್ರಾಮೀಣ ಭಾಗದ ಅಭಿವೃದ್ಧಿಗೆ ಅಡ್ಡಿಯಾಗುವ ಜೊತೆಗೆ ರಾಜ್ಯಗಳ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಹಾಕುತ್ತದೆ. ಕೇಂದ್ರ ಹಾಗೂ ರಾಜ್ಯದಲ್ಲಿ ವಿಭಿನ್ನ ಸರ್ಕಾರಗಳಿದ್ದರೆ, ಕೇಂದ್ರವು ರಾಜ್ಯಗಳಿಗೆ ಅನುದಾನ ನೀಡದೆ ರಾಜ್ಯದ ಆರ್ಥಿಕತೆಗೆ ಹೊರೆ ಉಂಟುಮಾಡುತ್ತಿದೆ ಎಂದು ಆರೋಪಿಸಿದರು.

ಮಹಾರಾಷ್ಟ್ರದಲ್ಲಿ ನಡೆದಿರುವ ನೀಟ್ ಹಾಗೂ ಟಿಇಟಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳ ಕುರಿತು ಪ್ರತಿಕ್ರಿಯಿಸಿ, ಡಬಲ್ ಇಂಜಿನ್ ಸರ್ಕಾರ ಡಬಲ್ ಕೊಳ್ಳೆ ಹೊಡೆಯುತ್ತಿದೆ ಎಂದು ಆರೋಪಿಸಿದರು. ಬಿಜೆಪಿ ಮುಖಂಡರೇ ಈ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇಂತಹ ಘಟನೆಗಳು ಮಕ್ಕಳ ಭವಿಷ್ಯ ಹಾಳು ಮಾಡುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು.

ವಿಶೇಷ ಮತದಾರ ಪಟ್ಟಿ ಪರಿಷ್ಕರಣೆ ಕುರಿತು ಮಾತನಾಡಿದ ಅವರು, ಕಾಂಗ್ರೆಸ್ ಎಸ್‌ಐಆರ್ ಪ್ರಕ್ರಿಯೆ ಸ್ವಾಗತಿಸುತ್ತದೆ. ಆದರೆ ಪಶ್ಚಿಮ ಬಂಗಾಳ ಮತ್ತು ಬಿಹಾರದಂತೆ ಒಂದು ಸಮುದಾಯವನ್ನು ಗುರಿಯಾಗಿಸಿಕೊಂಡು ಹಾಳು ಮಾಡುವ ರಾಜಕೀಯ ಸರಿಯಲ್ಲ, ಪ್ರಜಾಪ್ರಭುತ್ವದಲ್ಲಿ ಪರ-ವಿರೋಧ ಇರಬೇಕು. ಆದರೆ ಅದು ಪ್ರಾಮಾಣಿಕವಾಗಿರಬೇಕು. ಕೆಟ್ಟ ಉದ್ದೇಶದಿಂದ ಕೂಡಿರಬಾರದು ಎಂದರು.

ಜಿಲ್ಲೆಗೆ ಸಚಿವ ಜಾರ್ಜ್ ಭೇಟಿ

ಜಿಲ್ಲಾ ಉಸ್ತುವಾರಿ ಸಚಿವರಾಗಿ ನಿಯೋಜನೆ ಆಗಿರುವ ಕೆ.ಜೆ.ಜಾರ್ಜ್ ಜಿಲ್ಲೆಯ ಮಳೆ ಕೊರತೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಕುರಿತು ಪರಿಶೀಲನೆ ನಡೆಸಲು ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಜಾರ್ಜ್ ಅವರು ಜಿಲ್ಲೆಯ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಜನರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಲ್ಪಿಸುವ ವಿಶ್ವಾಸವಿದೆ ಎಂದು ಅವರು ಹೇಳಿದರು.

ಅಧಿಕಾರ ಮುಖ್ಯವಲ್ಲ

ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಪ್ರತಿಕ್ರಿಯಿಸಿದ ಅವರು, ರಾಹುಲ್ ಗಾಂಧಿ ವಿದೇಶದಿಂದ ಮರಳಿದ ಬಳಿಕ 10 ರಿಂದ 15 ದಿನಗಳಲ್ಲಿ ಸಂಪುಟ ವಿಸ್ತರಣೆ ನಡೆಯುವ ಸಾಧ್ಯತೆ ಇದೆ. ಸಚಿವ ಸ್ಥಾನದಲ್ಲಿ ನೀವು ಮುಂದುವರೆಯುವಿರಾ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿ, ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧ. ಪಕ್ಷವೇ ಮುಖ್ಯ, ವೈಯಕ್ತಿಕ ಅಧಿಕಾರ ಮುಖ್ಯವಲ್ಲ ಎಂದು ಹೇಳಿದರು.

ಕಾನೂನುಬದ್ಧ ಉತ್ತರ

ಪ್ರಿಯಾಂಕಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನ್ಯಾಷನಲ್ ಹೆರಾಲ್ಡ್ ಟ್ರಸ್ಟ್ ಸಂಬಂಧ ಹೈಕೋರ್ಟ್ ನೋಟಿಸ್ ನೀಡಿರುವ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಕಾನೂನುಬದ್ಧವಾಗಿ ಉತ್ತರ ನೀಡಲಾಗುವುದು ಎಂದು ತಿಳಿಸಿದರು.

ಗಾಂಜಾ ಮಾರಾಟ: ಓರ್ವನ ಬಂಧನ

• ಶಿವಮೊಗ್ಗ : ಮಂಡ್ಲಿ ಬಳಿಯ 100 ಅಡಿ ರಸ್ತೆಯಿಂದ ಆಲ್ಕೊಳದ ಕಡೆಗೆ ಬರುವ ತುಂಗಾ ಚಾನಲ್ ಏರಿ ರಸ್ತೆ ಬದಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಓರ್ವನನ್ನು ಖಚಿತ ಮಾಹಿತಿ ಮೇರೆಗೆ ದೊಡ್ಡಪೇಟೆ ಪೊಲೀಸರು ಬಂಧಿಸಿದ್ದಾರೆ. ಶಾಹಿದ್ ಖಾನ್ (40) ಬಂಧಿತ ಆರೋಪಿಯಾಗಿದ್ದು, ಈತನಿಂದ ಸುಮಾರು 1,52,000 ರೂ. ಮೌಲ್ಯದ 15.21 ಗ್ರಾಂ ತೂಕದ ಗಾಂಜಾ, ಮಾರಾಟ ಮಾಡಲು ಬಳಸಿದ ಸುಮಾರು 40,000 ರೂ. ಮೌಲ್ಯದ ಮೋಟಾರ್ ಬೈಕ್ ಅಮಾನತುಪಡಿಸಿಕೊಳ್ಳಲಾಗಿದೆ. ದೊಡ್ಡಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಾರಿ ಟೈರ್ ಸ್ಫೋಟಗೊಂಡು ಪಾದಚಾರಿಗೆ ಡಿಕ್ಕಿ : ಸಾವು

• ಭದ್ರಾವತಿ: ನಗರದ ತರೀಕೆರೆ ರಸ್ತೆ ಶಿವಾನಿ ಕ್ರಾಸ್ ಸಮೀಪ ಲಾರಿಯೊಂದರ ಟೈರ್ ಸ್ಫೋಟಗೊಂಡ ಪರಿಣಾಮ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯಲ್ಲಿ ಸಂಚರಿಸುತ್ತಿದ್ದ ಪಾದಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಅತಿ ತೀವ್ರ ಗಾಯಗೊಂಡು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ನಡೆದಿದೆ.

ಮೃತನನ್ನು ಇಸ್ಮಾಯಿಲ್ ಜಬೀವುಲ್ಲಾ (25) ಎಂದು ಗುರುತಿಸಲಾಗಿದೆ. ತಾಲೂಕಿನ ತಿಪ್ಪಾಪುರ ಗ್ರಾಮದ ನಿವಾಸಿಯಾಗಿದ್ದು, ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಜೂನ್ 27ರಂದು ಮಧ್ಯಾಹ್ನ ಸುಮಾರು 1.30ರ ವೇಳೆಗೆ ಕೆಲಸದ ನಿಮಿತ್ತ ಶಿವಾನಿ ಕ್ರಾಸ್ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಭಾರತ್ ಬೆಂಜ್ ಲಾರಿಯ ಹಿಂಭಾಗದ ಟೈರ್ ಸ್ಫೋಟಗೊಂಡ ಪರಿಣಾಮ ಚಾಲಕನ ನಿಯಂತ್ರಣ ಕಳೆದುಕೊಂಡು ಡಿಕ್ಕಿ ಹೊಡೆದಿದೆ. ಇಸ್ಮಾಯಿಲ್ ತಲೆ ಮೇಲೆ ಲಾರಿಚಕ್ರ ಹರಿದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದು, ತಕ್ಷಣ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗೆ ಮೆಗ್ಗಾನ್ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಗಣತಿ ನಮೂನೆಯಲ್ಲಿ ನಿಖರ ಮಾಹಿತಿ ಭರ್ತಿ ಮಾಡಿ

ಜೂ.30ರಿಂದ ಮತದಾರರ ಪಟ್ಟಿ ಪರಿಷ್ಕರಣೆ



• ಚಿಕ್ಕಮಗಳೂರು: ಮತದಾರರ ಪಟ್ಟಿಯನ್ನು ಅತ್ಯಂತ ನಿಖರವಾಗಿ ಹಾಗೂ ದೋಷ ರಹಿತವಾಗಿ ರೂಪಿಸುವ ನಿಟ್ಟಿನಲ್ಲಿ ಜೂನ್ 30ರಿಂದ ಜುಲೈ 29ರವರೆಗೆ ಜಿಲ್ಲಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ-ಎಸ್‌ಐಆರ್-2026 ಹಮ್ಮಿಕೊಳ್ಳಲಾಗಿದೆ ಎಂದು ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹೆಚ್.ಎಸ್. ಕೀರ್ತನಾ ತಿಳಿಸಿದರು.

ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ನಗರದ ಹನುಮಂತಪ್ಪ ವೃತ್ತದಲ್ಲಿ ಸೋಮವಾರ ಆಯೋಜಿಸಲಾಗಿದ್ದ ವಿಶೇಷ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇದೇ ಜೂನ್ 30ರಿಂದ ಜುಲೈ 29ರವರೆಗೆ ನಮ್ಮ ಬೂತ್ ಮಟ್ಟದ ಅಧಿಕಾರಿಗಳು ಪ್ರತಿ ಮನೆಗೂ ಖುದ್ದಾಗಿ ಭೇಟಿ ನೀಡಲಿದ್ದಾರೆ. 2025ರ ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ಮತದಾರರ ಮನೆಗೆ ತೆರಳಿ ಎರಡು 'ಗಣತಿ ನಮೂನೆ' ನೀಡಲಿದ್ದಾರೆ. ಸಾರ್ವಜನಿಕರು ಈ ನಮೂನೆಯಲ್ಲಿ ತಮ್ಮ ನಿಖರ ಮಾಹಿತಿಯನ್ನು ಭರ್ತಿ ಮಾಡಬೇಕು ಎಂದು ತಿಳಿಸಿದರು.

ಗಣತಿ ನಮೂನೆಯನ್ನು ಭರ್ತಿ ಮಾಡುವ ಈ ಹಂತದಲ್ಲಿ ಸಾರ್ವಜನಿಕರು ಯಾವುದೇ ಪೂರಕ ದಾಖಲಾತಿಗಳನ್ನು ನೀಡುವ ಅಗತ್ಯವಿರುವುದಿಲ್ಲ, ಕೇವಲ ಮಾಹಿತಿಯನ್ನು ಭರ್ತಿ ಮಾಡಿ, ಅದರಲ್ಲಿ ಸಹಿ ಮಾಡಿ ಒಂದು ಪ್ರತಿಯನ್ನು ಬಿಎಲ್‌ಒಗೆ ಹಿಂದಿರುಗಿಸಬೇಕು. ಮತ್ತೊಂದು ಪ್ರತಿಯನ್ನು ನಿಮ್ಮ ಬಳಿಯೇ ಸುರಕ್ಷಿತವಾಗಿಟ್ಟುಕೊಳ್ಳಬೇಕು. ಈ ಮಹತ್ವದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಯಾವುದೇ ಕಾರಣಕ್ಕೂ ಅರ್ಹ ಮತದಾರನು ಮತದಾನದ ಹಕ್ಕಿನಿಂದ ವಂಚಿತರಾಗಬಾರದು ಎಂದು ಮನವಿ ಮಾಡಿದರು.

ಯಾವುದಾದರೂ ಕುಟುಂಬದ ಸದಸ್ಯರು ಉದ್ಯೋಗ ಅಥವಾ ಇತರೆ ಕೆಲಸದ ನಿಮಿತ್ತ ತಾತ್ಕಾಲಿಕವಾಗಿ ಊರಿನಿಂದ ಹೊರಗಿದ್ದರೆ, ಮನೆಯಲ್ಲಿರುವ ಅವರ ಸಹೋದರ, ಸಹೋದರಿ ಅಥವಾ ಪೋಷಕರು ಆ ವ್ಯಕ್ತಿಯೊಂದಿಗಿನ ತಮ್ಮ ಸಂಬಂಧವನ್ನು ನಮೂದಿಸಿ, ಸಹಿ ಮಾಡುವ ಮೂಲಕ ಮಾಹಿತಿ ನೀಡಬಹುದು. ಸಾರ್ವಜನಿಕರಿಗೆ ಯಾವುದೇ ಗೊಂದಲ ಅಥವಾ ಮಾಹಿತಿ ಅಗತ್ಯವಿದ್ದಲ್ಲಿ ಬಿಎಲ್‌ಒಗಳನ್ನು ಸಂಪರ್ಕಿಸಬಹುದು. ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕಚೇರಿಗಳಲ್ಲಿ 'ಮತದಾರರ ಸಹಾಯ ಕೇಂದ್ರ' ಸ್ಥಾಪಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದು. ಬೂತ್ ಮಟ್ಟದ ಏಜೆಂಟರುಗಳು ಕೂಡ ಈ ನಿಟ್ಟಿನಲ್ಲಿ ನೆರವಾಗಲಿದ್ದಾರೆ ಎಂದು ತಿಳಿಸಿದರು.

ಜಾಥಾದಲ್ಲಿ ತಹಸೀಲ್ದಾರ್ ರೇಷ್ಮಾ ಶೆಟ್ಟಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ತಿಮ್ಮರಾಜು, ಜಿಪಂ (ಆಡಳಿತ) ಸಹಾಯಕ ಕಾರ್ಯದರ್ಶಿ ನಯನ, ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕ ಕಾಂತರಾಜು, ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಇದ್ದರು.

ಕನ್ನಡ ಸರ್ಕಾರಿ ಶಾಲೆಯಲ್ಲಿ ಶೌಚಾಲಯ ಉದ್ಘಾಟನೆ

ಶುಚಿತ್ವದ ಶೌಚಾಲಯ ಅತಿಮುಖ್ಯ



• ಚಿಕ್ಕಮಗಳೂರು: ಪ್ರತಿ ಶಾಲೆ ಅಥವಾ ಮನೆಗಳಲ್ಲಿ ಶುಚಿತ್ವದ ಶೌಚಾಲಯ ಹೊಂದುವುದು ಅತಿಮುಖ್ಯ. ವಿಶೇಷವಾಗಿ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿರುವ ಶಾಲೆಗೆ ಶೌಚಾಲಯ ಕಲ್ಪಿಸುವುದು ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಸಹಕಾರಿ ಎಂದು ಶಾಸಕ ಹೆಚ್.ಡಿ. ತಮ್ಮಯ್ಯ ಹೇಳಿದರು.

ನಗರದ ಉಪ್ಪಳ್ಳಿ ಸಮೀಪದ ಕನ್ನಡ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ನಿರ್ಮಿಸಿರುವ ಶೌಚಾಲಯವನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿ, ಶೌಚಾಲಯಗಳು ಸ್ವಚ್ಛ ಮತ್ತು ಆರೋಗ್ಯಕರವಾಗಿರುವುದನ್ನು ಖಚಿತಪಡಿಸಿಕೊಳ್ಳಲು ನಿಯಮಿತವಾಗಿ ಸ್ವಚ್ಛಗೊಳಿಸುವ ಮತ್ತು ನಿರ್ವಹಿಸುವ ದಕ್ಷ ಕೆಲಸವನ್ನು ಶಾಲಾ ಆಡಳಿತ ಮುತುವರ್ಜಿ ವಹಿಸಿ ಮಾಡಬೇಕಿದೆ ಎಂದರು.

ಶಾಲೆಗೆ ಮೂಲಭೂತ ಸೌಲಭ್ಯ ಸೇರಿದಂತೆ ಇದೀಗ ಹೈಟೆಕ್ ಶೌಚಾಲಯವನ್ನು ನಿರ್ಮಾಣ ಮಾಡಲಾಗಿದೆ. ಹಿಂದೆ ಶಾಲೆಯಲ್ಲಿ ಶೌಚಾಲಯ ಸಮಸ್ಯೆ ಕಂಡುಬಂದಿದ್ದು ಈ ಪೈಕಿ ಶಾಲಾಡಳಿತ, ಎಸ್‌ಡಿಎಂಸಿ ಹಾಗೂ ಈ ಭಾಗದ ನಗರಸಭೆ ಸದಸ್ಯರ ಒತ್ತಾಯದಂತೆ 14.5 ಲಕ್ಷ ರೂ. ವೆಚ್ಚದಲ್ಲಿ ನೂತನ ಶೌಚಾಲಯ ನಿರ್ಮಿಸಲಾಗಿದೆ ಎಂದರು.

ವಿಶೇಷವಾಗಿ ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಶೌಚಾಲಯದ ವ್ಯವಸ್ಥೆ ಕಲ್ಪಿಸುವುದಕ್ಕಾಗಿ ಆದ್ಯತೆ ನೀಡಲಾಗಿದೆ. ಅದರಂತೆ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಶೌಚಾಲಯ ನಿರ್ಮಿಸುವ ಮುಖೇನ ಆರೋಗ್ಯಕರ ಬೆಳವಣಿಗೆಗೆ ಒತ್ತು ನೀಡಲಾಗುತ್ತಿದೆ. ಅಲ್ಲದೇ ಕಳೆದ ವರ್ಷ ಸುಮಾರು 78 ಲಕ್ಷ ರೂ. ವೆಚ್ಚದಲ್ಲಿ ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಓದಿಗೆ ಅವಕಾಶ ಕಲ್ಪಿಸಿದೆ ಎಂದರು.

ಪಾಲಕರು ಸರ್ಕಾರಿ ಶಾಲೆಯೆಂಬ ಕೀಳರಿಮೆ ಹೊಂದದೇ ಇದೀಗ 1 ರಿಂದ 7ನೇ ತರಗತಿವರೆಗೂ ಆಂಗ್ಲಭಾಷೆ ಬೋಧನೆ ನಡೆಯುತ್ತಿದೆ. ಈ ಸೌಲಭ್ಯವನ್ನು ಮಕ್ಕಳ ಪಾಲಕರು ಸದ್ಬಳಕೆ ಮಾಡಿಕೊಳ್ಳಬೇಕು. ಖಾಸಗಿ ಶಾಲೆಗಳ ವ್ಯಾಮೋಹ ತೊರೆದು, ಸಕಲ ಸವಲತ್ತು ಕಲ್ಪಿಸುವ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಮುನೀರ್ ಅಹ್ಮದ್ ಮಾತನಾಡಿ ಅತಿಹೆಚ್ಚು ಬಡತನ ರೇಖೆಗಿಂತ ಕಡಿಮೆಯಲ್ಲಿರುವ ಮಕ್ಕಳೇ ಸರ್ಕಾರಿ ಶಾಲೆಗಳಿಗೆ ಆಗಮಿಸುತ್ತಾರೆ. ಈ ಮಕ್ಕಳ ಆರೋಗ್ಯಕ್ಕೆ ಒತ್ತು ನೀಡುವುದು ಜನಪ್ರತಿನಿಧಿಗಳ ಹಕ್ಕು. ಹಾಗಾಗಿ ಗುಣಮಟ್ಟತೆಯುಳ್ಳ ಶೌಚಾಲಯ ಕೊಠಡಿಗಳನ್ನು ಶಾಸಕರ ಸಹಕಾರದಲ್ಲಿ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಖಲಂದರ್ ಮೇಲು, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಂ.ಸಿ. ಶಿವಾನಂದಸ್ವಾಮಿ, ಸಿಡಿಎ ಅಧ್ಯಕ್ಷ ಹೆಚ್.ಪಿ.ಮಂಜೇಗೌಡ, ಮಾಜಿ ಅಧ್ಯಕ್ಷ ಮೊಹಮ್ಮದ್ ನಯಾಜ್, ಸದಸ್ಯ ರಾದ ಸುದೀಪ್, ಗುಣಪತಿ, ಕಾಂಗ್ರೆಸ್ ಮುಖಂಡರಾದ ತಾರೋಜ್ ನಾಯ್ಡು, ಸಂದೀಪ್, ಉಮರ್, ಶೈಫ್, ಸಾದಿಕ್ ಇದ್ದರು.

ಕೆಂಪೇಗೌಡರದ್ದು ಆದರ್ಶಮಯ ವ್ಯಕ್ತಿತ್ವ



• ಬಾಳೆಹೊನ್ನೂರು: ಇತಿಹಾಸದ ಪುಟದಲ್ಲಿ ರಾರಾಜಿಸುವ ವ್ಯಕ್ತಿ ಕೆಂಪೇಗೌಡರಾಗಿದ್ದು, ಆದರ್ಶಮಯ ವ್ಯಕ್ತಿತ್ವ ಅವರದ್ದು ಎಂದು ಸಂಗಮೇಶ್ವರಪೇಟೆ ಪೂರ್ಣಪ್ರಜ್ಞಾ ಕಾಲೇಜು ಉಪನ್ಯಾಸಕ ರಜತ್ ಹೇಳಿದರು.

ಪಟ್ಟಣದ ಲಯನ್ಸ್ ಕ್ಲಬ್‌ನಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒಬ್ಬ ವ್ಯಕ್ತಿ ಕಟ್ಟಿದ ನಗರವಿಂದು ಪ್ರತಿಯೊಬ್ಬರನ್ನು ಕೈಬೀಸಿ ಕರೆದು ಜೀವನ ನೀಡುತ್ತಿದ್ದು, ಒಬ್ಬ ವ್ಯಕ್ತಿಯಿಂದ ನಿರ್ಮಾಣವಾದ ನಗರ ವಿಶ್ವದ ಪ್ರತಿಷ್ಠಿತ ಐಟಿ ಹಬ್ ಆಗಿ ಪರಿವರ್ತನೆಯಾಗಿದೆ. ಕೆಂಪೇಗೌಡರು ಕಿರಿಯ ವಯಸ್ಸಿನಲ್ಲಿಯೇ ದೂರದೃಷ್ಟಿತ್ವದ ಯೋಜನೆಗಳನ್ನು ಇಟ್ಟುಕೊಂಡು ಕಾರ್ಯನಿರ್ವಹಿಸಿ ಬೆಂಗಳೂರು ನಗರವನ್ನು ಕಟ್ಟಿದ್ದಾರೆ.

ಬೆಂಗಳೂರಿನಲ್ಲಿ ಜಾತಿ, ವೃತ್ತಿ ಆಧಾರಿತವಾಗಿ ಪೇಟೆಗಳನ್ನು ಕಟ್ಟಿದ ಕೆಂಪೇಗೌಡರ ಕಾರ್ಯ ಸವಾಲಿನ ಕೆಲಸವಾಗಿದ್ದು, ಇದು ಅವರು ಕಟ್ಟಿದ ಪೇಟೆಗಳು ವಿಶೇಷ ಕೆಲಸಗಳಿಂದ ಗುರುತಿಸಿಕೊಂಡಿವೆ. ನೂರಾರು ವರ್ಷಗಳ ಹಿಂದೆಯೇ ಇಂದಿಗೆ ಸರಿ ಸಮಾನಾಗುವಂತಹ ಎಂಜಿನಿಯರ್ ತಂತ್ರಜ್ಞಾನವನ್ನು ಬಳಸಿ ಬೆಂಗಳೂರನ್ನು ನಿರ್ಮಾಣ ಮಾಡಿದ್ದರು.

ಅನೇಕ ಮೌಲ್ಯದ ಆಚರಣೆಗಳನ್ನು ನಿಲ್ಲಿಸಿದ ಶ್ರೇಯಸ್ಸು ಕೆಂಪೇಗೌಡರಿಗೆ ಸಲ್ಲಲಿದ್ದು, ಅವರು ಅದ್ಭುತವಾದ ವ್ಯವಹಾರ ಚಾತುರ್ಯತೆಯನ್ನು ಹೊಂದಿದ್ದರು. ಇಂದಿನ ಪೀಳಿಗೆ ಕೆಂಪೇಗೌಡರನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕಿದ್ದು, ಜೀವನದ ಕನಸು ಹೊತ್ತು ಬೆಂಗಳೂರಿಗೆ ಬರುವ ಯುವ ಜನರು ಕೆಂಪೇಗೌಡರ ಜೀವನದ ಆದರ್ಶಗಳನ್ನು ನೆನೆದುಕೊಳ್ಳಬೇಕಿದೆ ಎಂದರು.

ಲಯನ್ಸ್ ಕ್ಲಬ್ ಪೂರ್ವಾಧ್ಯಕ್ಷ ಮಂಜುನಾಥ್ ತುಪ್ಪೂರು ಮಾತನಾಡಿ, ನಾಡಪ್ರಭು ಕೆಂಪೇಗೌಡರು ರಾಜ್ಯ ಕಂಡ ಶ್ರೇಷ್ಠ ನಾಯಕರಾಗಿದ್ದು, ಕೆಂಪೇಗೌಡರಿಂದ ಇಂದು ಬೆಂಗಳೂರು ವಿಶ್ವದ ಪ್ರಖ್ಯಾತಿ ಗಳಿಸಿದೆ. ಬೆಂಗಳೂರು ನಿರ್ಮಾಣ ಮಾಡುವಲ್ಲಿ ತನ್ನದೇ ಆದ ಚಾತುರ್ಯತೆಯನ್ನು ಕೆಂಪೇಗೌಡರು ಬಳಸಿದ್ದು, ಅವರ ಹೆಸರು ಇಂದು ಚಿರಸ್ಥಾಯಿಯಾಗಿ ಉಳಿದಿದೆ.

ಲಯನ್ಸ್ ಕ್ಲಬ್ ನಿಯೋಜಿತ ಅಧ್ಯಕ್ಷ ಯೋಗೀಶ್ ಬನ್ನೂರು, ನಿಯೋಜಿತ ಪ್ರಾಂತ್ಯ ಅಧ್ಯಕ್ಷ ಎಂ.ಡಿ.ಶಿವರಾಮ್, ಪೂರ್ವಾಧ್ಯಕ್ಷರಾದ ಎಂ.ವಿ. ಶ್ರೀನಿವಾಸಗೌಡ, ಕೆ.ಆರ್.ಎ.ಸಿ.ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಸದಸ್ಯರಾದ ಮಧುಕುಮಾರ್, ನಾರಾಯಣ ಮೇಲ್ಪಾಲ್, ಬಿ.ಎಸ್.ಶ್ರೀನಿವಾಸ್, ಎಚ್.ಉಮೇಶ್, ಜತೀಶ್, ಉಪೇಂದ್ರ ಮತ್ತಿತರರು ಹಾಜರಿದ್ದರು.

ಜು.1ರಂದು ರೋಟರಿ ಕ್ಲಬ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ



• ಶಿವಮೊಗ್ಗ : ರೋಟರಿ ಕ್ಲಬ್ ಶಿವಮೊಗ್ಗದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜು.1ರಂದು ಸಂಜೆ 7 ಗಂಟೆಗೆ ಸವಳಂಗ ರಸ್ತೆಯ ಎಲ್‌ಬಿಎಸ್ ನಗರದಲ್ಲಿರುವ ರೋಟರಿ ಯುವ ಕೇಂದ್ರದಲ್ಲಿ ನಡೆಯಲಿದೆ ಎಂದು ನಿಯೋಜಿತ ಅಧ್ಯಕ್ಷ ಎನ್. ಗೋಪಿನಾಥ್ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2026-27ನೇ ಸಾಲಿಗೆ ತಾವು ಅಧ್ಯಕ್ಷನಾಗಿ ನೇಮಕವಾಗಿದ್ದು, ಶೈಲೇಶ್ ಬಾಬು ಕೆ.ಎಸ್. ಕಾರ್ಯದರ್ಶಿಯಾಗಿದ್ದಾರೆ. ಪಿಡಿಜಿ ರೋ. ಕೇಶವ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಜಿಲ್ಲಾ ಗೌರ್ನರ್ ವಸಂತ್ ಹೋಬಳಿದಾರ್, ಸಹಾಯಕ ಗೌರ್ನರ್, ತೀರ್ಥಯ್ಯ, ಲೆಫ್ಟಿನೆಂಟ್ ರೇಣುಕಾರಾಧ್ಯ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ ಎಂದರು.

ಶಾಶ್ವತ ಪರಿಣಾಮ ಸೃಷ್ಟಿಸೋಣ ಎಂಬುದು ಈ ಬಾರಿಯ ಧ್ಯೇಯವಾಕ್ಯವಾಗಿದೆ. ಮುಂದಿನ ಒಂದು ವರ್ಷದ ಅವಧಿಗೆ ಹಲವು ಕಾರ್ಯಕ್ರಮ ರೂಪಿಸಲಾಗಿದ್ದು, ಅವುಗಳಲ್ಲಿ ಹಸಿರು ಸ್ವಚ್ಛ ವಾರ್ಡ್ ಆಯ್ಕೆ ಮಾಡಿಕೊಂಡು ಅಲ್ಲಿ ಸ್ವಚ್ಛ ವಿಂಗಡಣೆ, ಮರುಬಳಕೆ, ಗೊಬ್ಬರ ತಯಾರಿಕೆ, ಸ್ವಚ್ಛ ಪರಿಸರವನ್ನಾಗಿ ಮಾಡಲಾಗುವುದು. ಒಂದು ಮಾದರಿ ವಾರ್ಡ್ ಆಗಿ ರೂಪಿಸಿ ಅದನ್ನು ನಗರದ ಎಲ್ಲಾ ವಾರ್ಡ್‌ಗಳಿಗೆ ವಿಸ್ತರಿಸಲಾಗುವುದು ಎಂದರು.

ರೋಟರಿ ಟ್ರಾಫಿಕ್ ತರಬೇತಿ ಉದ್ಯಾನ, ವಾಟರ್ ಎಟಿಎಂ ಯೋಜನೆ, ಆಹಾರದ ಯೋಜನೆ, ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳು, ಯುವಜನ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಮುಂತಾದ ಹಲವು ಸಮಾಜಮುಖಿ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗುವುದು ಎಂದರು.

ಡಾ.ಪಿ. ನಾರಾಯಣ್ ಮಾತನಾಡಿ, ರೋಟರಿ ಕ್ಲಬ್‌ವತಿಯಿಂದ ಈ ಬಾರಿ ನ್ಯಾಮತಿ ತಾಲೂಕಿನ ಚೀಲೂರಿನ ನ್ಯಾಷನಲ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ ಗ್ಲೋಬಲ್ ಗ್ರ್ಯಾಂಟ್ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ಈ ಯೋಜನೆಯಡಿ ಶೌಚಾಲಯ ನಿರ್ಮಾಣ, ಕಂಪ್ಯೂಟರ್ ಲ್ಯಾಬ್ ಸೇರಿದಂತೆ ಸುಮಾರು 50 ಲಕ್ಷ ರೂ.ಗಳ ವೆಚ್ಚವಾಗಲಿದ್ದು, ಜುಲೈ 2026ರಲ್ಲಿ ಶಾಲೆಗೆ ಹಸ್ತಾಂತರಿಸಲಾಗುವುದು ಎಂದರು.

ರೋಟರಿ ಕ್ಲಬ್ ಶಿವಮೊಗ್ಗ ಕಳೆದ 60 ವರ್ಷಗಳಿಂದ ಶಿಕ್ಷಣ, ಆರೋಗ್ಯ, ಪರಿಸರ, ಯುವಜನ ಅಭಿವೃದ್ಧಿ, ಸಮುದಾಯ ಸೇವೆಗೆ ಅನೇಕ ಮಹತ್ವದ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಅದನ್ನು ಮುಂದೆಯೂ ಮುಂದುವರೆಸಲಾಗುವುದು. ಸರ್ಕಾರ, ಶಿಕ್ಷಣ ಸಂಸ್ಥೆಗಳು, ಕಾರ್ಪೊರೇಟ್ ಸಂಸ್ಥೆ ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ ಕ್ಲಬ್ ಕೆಲಸ ಮಾಡುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಿಯೋಜಿತ ಕಾರ್ಯದರ್ಶಿ ಕೆ.ಎಸ್. ಶೈಲೇಶ್‌ಬಾಬು, ಪದಾಧಿಕಾರಿಗಳಾದ ರಾಜೇಂದ್ರಪ್ರಸಾದ್ ಜಿ.ಇ., ವಿಜಯಕುಮಾರ್ ಸಿ., ಎಸ್.ಜಿ.ಗೋಪಾಲ್, ಆನಂದ್ ಆರ್., ಎಸ್.ಪಿ.ಭಟ್, ಸೂರ್ಯನಾರಾಯಣ ಉಡುಪ, ಲಕ್ಷ್ಮೀದೇವಿ ಗೋಪಿನಾಥ್, ಉಷಾ ಇದ್ದರು.

ಸಂಪಾದಕೀಯ

ಅಪಕ್ವ ನೀತಿಯ ಪ್ರತಿಪಾದನೆ

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿದೇಶಾಂಗ ನೀತಿಯಲ್ಲೂ ಅಲ್ಪಸಂಖ್ಯಾತ ತುಷ್ಟೀಕರಣ ನೀತಿಯನ್ನು ಅನುಸರಿಸಲು ಯತ್ನಿಸುತ್ತಿರುವಂತಿದೆ. ಕೆಲದಿನಗಳ ಹಿಂದೆ ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಲ್ಲಿ ಸೋನಿಯಾರವರು ''ಗಾಝಾ ಕುರಿತಂತೆ ಭಾರತವು ಮೌನ ತಳೆದಿರುವುದು ನೈತಿಕವಾಗಿ ಮತ್ತು ವ್ಯೂಹಾತ್ಮಕವಾಗಿ ದೇಶಕ್ಕೆ ಪ್ರತಿಕೂಲವಾಗಿದೆ. ಇದರಿಂದಾಗಿ ಮುಸ್ಲಿಂ ರಾಷ್ಟ್ರಗಳು ಭಾರತವನ್ನು ದೂರವಿಡುವಂತಾಗಿದೆ'' ಎಂಬುದಾಗಿ ಹೇಳಿರುವುದು ಅವರಿಗೆ ವಿದೇಶಾಂಗ ನೀತಿಯ ಕುರಿತಂತೆ ಇರುವ



ಅಪಕ್ವತೆಯನ್ನು ತೋರಿಸುವ ಜತೆಗೇ ಮುಸ್ಲಿಮರ ರಾಜಕೀಯ ಓಲೈಕೆಗಾಗಿ ಎಂತಹುದೇ ಗಿಮಿಕ್ ನಡೆಸಲು ಸಿದ್ಧ ಎಂಬುದನ್ನು ತೋರಿಸಿಕೊಟ್ಟಿದೆ. ಗಾಝಾ ಪರವಾಗಿ, ಪ್ಯಾಲೆಸ್ತೀನ್ ಪರವಾಗಿ ಹೇಳಿಕೆ ನೀಡಿದರೆ ದೇಶದಲ್ಲಿರುವ ಮುಸ್ಲಿಮರ ಮೆಚ್ಚುಗೆ ಗಳಿಸಬಹುದು ಎಂಬಂತಹ ಭ್ರಮೆಯೊಂದು ನಮ್ಮಲ್ಲಿನ ತಥಾಕಥಿತ ಜಾತ್ಯತೀತ ಪಕ್ಷಗಳ ಮುಖಂಡರಲ್ಲಿ ಮನೆಮಾಡಿದೆ. ಅದರಂಗವಾಗಿಯೇ ಸೋನಿಯಾರವರು ಈ ಲೇಖನ ಬರೆದಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಭಾರತವು ಪ್ಯಾಲೆಸ್ತೀನ್‌ನ ನ್ಯಾಯೋಚಿತ ಬೇಡಿಕೆಗೆ ಬೆಂಬಲವನ್ನು ನೀಡಿದೆ. ಮಾನವೀಯ ನೆಲೆಯಲ್ಲಿ ಗಾಝಾಕ್ಕೆ ಅವಶ್ಯ ನೆರವನ್ನು ನೀಡಿದೆ. ವಿಶ್ವಸಂಸ್ಥೆಯಲ್ಲಿ ಕದನವಿರಾಮ ನಿರ್ಣಯದ ಪರವಾಗಿ ಮತವನ್ನು ಚಲಾಯಿಸಿದೆ. ಭಾರತವು ತಮಗೆ ವಿರೋಧವಾಗಿದೆಯೆಂದು ಪ್ಯಾಲೆಸ್ತೀನಿಯನ್ನರು ಎಂದೂ ತಿಳಿದುಕೊಂಡಿಲ್ಲ. ಇದಕ್ಕೆ ಪ್ಯಾಲೆಸ್ತೀನ್‌ನ ಉನ್ನತ ನಾಗರಿಕ ಗೌರವವನ್ನು ಮೋದಿಯವರಿಗೆ ಪ್ರದಾನ ಮಾಡಿದ್ದಕ್ಕಿಂತ ಬೇರೆ ಪುರಾವೆ ಬೇಕಿಲ್ಲ. ಭಾರತದ ನಿಲುವಿನಿಂದಾಗಿ ಮುಸ್ಲಿಂ ರಾಷ್ಟ್ರಗಳು ಭಾರತವನ್ನು ದೂರ ಮಾಡಿವೆ ಎಂಬ ಸೋನಿಯಾ ಹೇಳಿಕೆಯೂ ನಿರಾಧಾರಿತ. ಮೋದಿಯವರಿಗೆ ತಮ್ಮ ದೇಶದ ಅತ್ಯುನ್ನತ ನಾಗರಿಕಪ್ರಶಸ್ತಿಗಳನ್ನು ನೀಡಿರುವದೇಶಗಳಲ್ಲಿ ಮುಸ್ಲಿಂ ರಾಷ್ಟ್ರಗಳೂ ಬಹಳಷ್ಟಿವೆ ಎಂಬುದನ್ನು ಮರೆಯಬಾರದು.

ನಿಜವಾಗಿ ಭಾರತದ ವಿದೇಶಾಂಗ ನೀತಿಯು ಈಗ ಹೆಚ್ಚೆಚ್ಚು ಗೆಳೆಯರನ್ನು ಸಂಪಾದಿಸಲು ಕಾರಣವಾಗಿದೆ. ಸಮರ ನಿರತ ರಾಷ್ಟ್ರಗಳೆರಡರ ಜತೆಗೂ ಸೌಹಾರ್ದ ಸಂಬಂಧ ಹೊಂದುವಂತಹ ಅತ್ಯಂತ ಸಮತೋಲಿತ ನಡೆಯನ್ನು ಭಾರತವೀಗ ಪ್ರದರ್ಶಿಸುತ್ತಿದೆ. ಉಕ್ರೇನ್ - ರಶ್ಯಾ, ಪ್ಯಾಲೆಸ್ತೀನ್ - ಇಸ್ರೇಲ್, ಅಮೆರಿಕ - ಇರಾನ್ ಮೊದಲಾಗಿ ಎಲ್ಲ ದೇಶಗಳ ಜತೆಗೂ ಭಾರತವು ಉತ್ತಮ ಬಾಂಧವ್ಯ ಹೊಂದಿರುವುದು ಇದಕ್ಕೆ ಸಾಕ್ಷಿ.

ಕೆಲವರು ತಿಳಿದುಕೊಂಡಂತೆ ಭಾರತದ್ದು 'ಅಲಿಪ್ತ ನೀತಿ'ಯಲ್ಲ, ಎಲ್ಲರೊಡನೆ ಬೆರೆಯುವಂತಹ ನೀತಿ. ಈ ನೀತಿಯ ಕಾರಣದಿಂದಾಗಿಯೇ ಭಾರತವು ಜಾಗತಿಕ ಬಿಕ್ಕಟ್ಟಿನ ಸಂದರ್ಭದಲ್ಲೂ ದೇಶದ ಹಿತ ಕಾಯುವಲ್ಲಿ ಸಫಲವಾಗಿದೆ. ಈ ನೀತಿಯನ್ನು ಶ್ಲಾಘಿಸಬೇಕೇ ಹೊರತು, ರಾಜಕೀಯ ಕಾರಣಕ್ಕಾಗಿ ವಿರೋಧಿಸುವುದು ವಿಹಿತವೆನಿಸದು.

ಹೆಸರಲ್ಲೇನಿದೆ..!? ಆದರೆ ಹೆಸರಲ್ಲೇ ಎಲ್ಲಾ ಇದೆ!



ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಜಾಗತೀಕರಣದ ಒಂದು ದೊಡ್ಡ ಅಡ್ಡಪರಿಣಾಮವೆಂದರೆ ಕೊಳ್ಳುಬಾಕ ಸಂಸ್ಕೃತಿಗೆ ಇಡೀ ಜಗತ್ತೇ ಸೇರಿಕೊಂಡಿದ್ದು. 1970ಕ್ಕೂ ಮೊದಲು ಜಾಗತಿಕ ಕಂಪನಿಗಳು ಎಂದರೆ ಕೆಲವು ಪೆಟ್ರೋಲಿಯಂ ಕಂಪನಿಗಳು, ಒಂದೆರಡು ಬ್ಯಾಂಕುಗಳು, ಕೆಲವಷ್ಟು ಗ್ರಾಹಕ ಬ್ರಾಂಡುಗಳು, ಅಲ್ಲೊಂದು ಇಲ್ಲೊಂದು ತಂತ್ರಜ್ಞಾನ ಕೇಂದ್ರಿತ ಕಂಪನಿಗಳಷ್ಟೇ ಇದ್ದವು. ಎಪ್ಪತ್ತರ ದಶಕಕ್ಕೂ ಮುನ್ನ ದಿನಕ್ಕೆ ಒಂದು ಅಥವಾ ಎರಡು ಬ್ರಾಂಡುಗಳ ಹೆಸರು ಕೇಳುತ್ತಿದ್ದ ಒಬ್ಬ ಸಾಮಾನ್ಯ ಗ್ರಾಹಕ ಇವತ್ತು ಒಬ್ಬ ಕೊಳ್ಳುಗನಾಗಿ ದಿನಕ್ಕೆ ಐನೂರಕ್ಕೂ ಬ್ರಾಂಡುಗಳ ಹೆಸರುಗಳನ್ನು ನೋಡುತ್ತಾನೆ, ನೂರಕ್ಕೂ ಹೆಚ್ಚು ಬ್ರಾಂಡುಗಳ ಬಳಕೆಯನ್ನು ಮಾಡುತ್ತಾನೆ.

ಆದರೆ ಈ ಪ್ರಸಿದ್ಧ ಬ್ರಾಂಡುಗಳ ಹೆಸರುಗಳು ಎಲ್ಲಿಂದ ಬಂದವು ಎಂದು ಯೋಚಿಸಿದ್ದೀರಾ? ಬ್ರಾಂಡುಗಳ ಹೆಸರನ್ನು ಜನಪ್ರಿಯಗೊಳಿಸಲಿಕ್ಕೆ ಕಂಪನಿಗಳು ಕೋಟ್ಯಂತರ ಡಾಲರ್ ಸುರಿಯುತ್ತವೆ. ಜನರಿಗೆ ಹತ್ತಿರವಾಗಿರಬೇಕು, ಅವರ ನೆನಪಿಗೆ ತಟ್ಟನೇ ಬರಬೇಕು, ಹೆಸರು ತೀರ ಉದ್ದವಾಗಿರಬಾರದು ಅಂತೆಲ್ಲಾ ನಿಯಮಾವಳಿಗಳನ್ನು ಪಾಲಿಸಿ ಹೆಸರನ್ನು ಆರಿಸುತ್ತವೆ. ಆದರೆ ಎಷ್ಟೋ ಸಲ ಈ ಹೆಸರುಗಳು ನಾವು ಊಹಿಸಿಯೇ ಇರದ ಹಿನ್ನೆಲೆಯಿಂದ ಬಂದಿರುತ್ತವೆ. ಇವುಗಳಲ್ಲಿ ಹಲವು ಹೆಸರುಗಳು ಸರಳವಾಗಿ ಕಂಡುಬಂದರೂ, ಅವುಗಳ ಮೂಲ ಯಾವುದೋ ಪುರಾಣದ ಕಥೆಗಳು, ಆಕಸ್ಮಿಕ ಆವಿಷ್ಕಾರಗಳು, ಕುಟುಂಬದ ಹೆಸರುಗಳು, ಸ್ಥಾಪಕರ ಹೆಸರುಗಳು ಅಥವಾ ಅಸ್ತಿತ್ವದಲ್ಲೇ ಇರದ ಯಾವುದೋ ಕಲ್ಪಿತ ಪದಗಳಿಂದ ಬಂದಿವೆ. ಕೆಲ ಜನಪ್ರಿಯ ಕಂಪನಿಗಳ ಹೆಸರುಗಳ ಹಿಂದಿನ ಆಕರ್ಷಕ ಕಥೆಗಳು ಹಾಗೂ ಆಶ್ಚರ್ಯಕರ ವಿವರಗಳು ನಿಮಗಾಗಿ ಇಲ್ಲಿವೆ.



ಆಪಲ್‌ಗೆ ಆ ಹೆಸರು ಬರಲು ಹಲವು ಕಥೆಗಳಿದ್ದರೂ, ಕಂಪನಿಯನ್ನು ಸ್ಥಾಪಿಸುವ ಕೆಲವೇ ದಿನಗಳ ಮುನ್ನ ಸ್ಟೀವ್ ಜಾಬ್ಸ್ ಸೇಬಿನ ತೋಟವೊಂದಕ್ಕೆ ಭೇಟಿ ನೀಡಿದ್ದೇ ಮುಖ್ಯ ಕಾರಣ ಎಂದು ಸ್ವತಃ ಜಾಬ್ಸ್ ಹೇಳಿಕೊಂಡಿದ್ದಾನೆ. ಕಂಪ್ಯೂಟರ್ ಉದ್ಯಮದಲ್ಲಿ ಸಾಮಾನ್ಯವಾಗಿ ಕಂಡುಬರುವ ತಾಂತ್ರಿಕ ಹೆಸರುಗಳಿಗಿಂತ ಬದಲಾಗಿ ಆಪಲ್ ಎಂಬ ಸ್ನೇಹಪರ, ಸುಲಭವಾಗಿ ಸಂಪರ್ಕಿಸಬಹುದಾದ ಮತ್ತು ಕಡಿಮೆ ಗಂಭೀರವಾದ ಹೆಸರನ್ನೇ ನೋಂದಾಯಿಸಿಕೊಂಡ. ಮಾತ್ರವಲ್ಲ, ಈ ಹೆಸರಿನಿಂದಾಗಿ ಟೆಲಿಫೋನ್ ಡೈರೆಕ್ಟರಿಯಲ್ಲಿ, ಅಂದಿನ ಜನಪ್ರಿಯ ಕಂಪನಿಯಾಗಿದ್ದ 'ಅಟಾರಿ'ಗಿಂತಾ 'ಆಪಲ್' ಮೊದಲು ಮುಂದೆ ಕಂಡುಬಂತು. ಇದು ಸ್ಟೀವ್ ಜಾಬ್ ಹೊಡೆದ ಒಂದು ಸಣ್ಣ ಸ್ಪರ್ಧಾತ್ಮಕ ಬೋನಸ್ ಕೂಡಾ ಹೌದು.

ಮೂಲತಃ ತಮ್ಮ ಸಂಶೋಧನಾ ಪ್ರಬಂಧದ ಹೆಸರಾಗಿದ್ದ ಬ್ಯಾಕ್‌ರಬ್ ಎಂಬ ಹೆಸರನ್ನೇ ಸ್ಥಾಪಕರಾದ ಲ್ಯಾರಿ ಪೇಜ್ ಮತ್ತು ಸೆರ್ಗೆ ಬ್ರಿನ್ ತಮ್ಮ ಕಂಪನಿಯ ಹೆಸರಾಗಿ ಅಂತಿಮಗೊಳಿಸಿದ್ದರೂ, ಅಷ್ಟೇನೂ ಗಾಢತೆಯಿಲ್ಲವೆಂಬ ಕಾರಣಕ್ಕೆ ಒಂದರ ನಂತರ ನೂರು ಸೊನ್ನೆಗಳನ್ನು ಬರೆದರೆ ಸಿಗುವ ಸಂಖ್ಯೆಯಾದ 'ಗೂಗೋಲ್' (Googol) ಎಂದು ಮರುನಾಮಕರಣ ಮಾಡಿದರು. ಬಳಕೆದಾರರು ಕೇಳಿದ ಪ್ರಶ್ನೆಗೆ ತಮ್ಮ ಸರ್ಚ್ ಎಂಜಿನ್ ಅಷ್ಟೊಂದು ಉತ್ತರಗಳನ್ನು ಕೊಡಬಹುದಾದ ಕಾರಣಕ್ಕೆ ಗೂಗೋಲ್ ಎಂಬುದೇ ಸರಿಯಾದ ಹೆಸರು ಎಂದು ಅವರ ಆಲೋಚನೆಯಾಗಿತ್ತು. ತಮಾಷೆಯೆಂದರೆ, ಕಂಪನಿಯ ಎಕ್ಸಿಕ್ಯುಟಿವ್ ಗಳೆಲ್ಲಾ ಚರ್ಚಿಸಿ ಹೆಸರನ್ನು ಅಂತಿಮಗೊಳಿಸುವ ಸಮಯದಲ್ಲಿ, ನೋಟ್ಸ್ ಬರೆದುಕೊಂಡವನಿಗೆ ಗೂಗೋಲ್ ಎಂಬ ಪದವೇ ಗೊತ್ತಿಲ್ಲದ ಕಾರಣಕ್ಕೋ ಅಥವಾ ಮೀಟಿಂಗಿನ ಮಂಕುಕವಿದಿತ್ತೋ ಗೊತ್ತಿಲ್ಲ, ಬರೆದ ಕಾಗುಣಿತ ತಪ್ಪಾಗಿ ಗೂಗಲ್ ಎಂದಾಯ್ತು. ಇದೇ ಚೆನ್ನಾಗಿದೆ ಎಂದುಕೊಂಡು ಗೂಗಲ್ ಅನ್ನೇ ಉಳಿಸಿಕೊಂಡರು.

ಮೈಕ್ರೋಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಎಂಬೆರಡು ಪದಗಳ ಸಂಕ್ಷಿಪ್ತರೂಪವಾಗಿ ಬಿಲ್ ಗೇಟ್ಸ್ ತನ್ನ ಕಂಪನಿಯನ್ನು ಮೈಕ್ರೋಸಾಫ್ಟ್ ಎಂದು ಕರೆದ. ಗೇಟ್ಸ್ ತನ್ನ ಕಂಪನಿಯನ್ನು ಮೈಕ್ರೋ-ಸಾಫ್ಟ್ ಎಂದು ರಿಜಿಸ್ಟರ್ ಮಾಡಿಕೊಳ್ಳಲು ಮುಂದಾಗಿದ್ದರೂ, ಹೈಫನ್ ಚಿಹ್ನೆಯನ್ನು ವೆಬ್ ವಿಳಾಸದಲ್ಲಿ ಸೇರಿಸಲು ಇಂಟರ್ನೆಟ್ ಆಗಿನ್ನೂ ತಯಾರಿರಲಿಲ್ಲವಾದ್ದರಿಂದ, ಹೈಫನ್ ಅನ್ನು ಕೈಬಿಟ್ಟು ಮೈಕ್ರೋಸಾಫ್ಟ್ ಎಂಬ ಹೆಸರೇ ಅಂತಿಮಗೊಳಿಸಲಾಯ್ತು. ಇಂಟೆಲ್ ಎಂಬುದು 'ಇಂಟಿಗ್ರೇಟೆಡ್ ಎಲೆಕ್ಟ್ರಾನಿಕ್ಸ್'ನ ಹ್ರಸ್ವರೂಪ. ಸಂಸ್ಥಾಪಕರಾದ ಗೋರ್ಡನ್ ಮೂರ್ ಮತ್ತು ರಾಬರ್ಟ್ ನಾಯ್ಸ್ ತಮ್ಮ ಕಂಪನಿಯನ್ನು 'ಮೂರ್ ನಾಯ್ಸ್' ಎಂದೇ ಕರೆಯಲು ಬಯಸಿದ್ದರು. ಆದರೆ ಆ ಹೆಸರನ್ನು ಆದಾಗಲೇ ಮತ್ತೊಂದು ಹೋಟೆಲ್ ಕಂಪನಿಯವರು ರಿಜಿಸ್ಟರ್ ಮಾಡಿಕೊಂಡಿದ್ದರಿಂದ ಇಂಟೆಲ್ ಎಂಬ ಹೆಸರೇ ಅಂತಿಮವಾಯ್ತು. ಅಡೋಬಿಯ ಸಹಸಂಸ್ಥಾಪಕ ಜಾನ್ ವಾರ್ನಾಕ್, ಕ್ಯಾಲಿಫೋರ್ನಿಯಾದ ಸಾಂಟಾಕ್ಲಾರಾ ನಗರದಲ್ಲಿದ್ದ ತನ್ನ ಮನೆಯ ಹಿಂದೆ ಹರಿಯುವ ಅಡೋಬಿ ಕ್ರೀಕ್‌ನ ಹೆಸರನ್ನೇ ತನ್ನ ಕಂಪನಿಗಿಟ್ಟ.

ಟೊಯೋಡಾ ಕುಟುಂಬ ಪ್ರಾರಂಭಿಸಿದ ತಮ್ಮ ವಾಹನ ತಯಾರಿಕಾ ಕಂಪನಿಗೆ ತಮ್ಮದೇ ಹೆಸರಿಟ್ಟುಕೊಳ್ಳೋಣ ಎಂಬ ಮನಸ್ಸಿತ್ತು. ಆದರೆ ಜಪಾನೀಸ್ ಭಾಷೆಯಲ್ಲಿ ಬರೆಯುವಾಗ ಟೊಯೋಡಾ ಎಂದು ಬರೆಯಲು ಹತ್ತು ಗೆರೆಗಳೂ, ಟೊಯೋಟಾ ಎಂದು ಬರೆಯಲು ಎಂಟು ಗೆರೆಗಳೂ ಬೇಕಾಗುತ್ತವೆ. ಜಪಾನೀಸ್ ಸಂಸ್ಕೃತಿಯಲ್ಲಿ ಎಂಟು ಸಮೃದ್ಧಿ ಮತ್ತು ಅದೃಷ್ಟದೊಂದಿಗೆ ಸಂಬಂಧಿಸಿದ ಸಂಖ್ಯೆಯಾದ್ದರಿಂದ ಟೊಯೋಟಾ ಹೆಸರಿಗೆ ಪ್ರಾಶಸ್ತ್ಯ ಸಿಕ್ಕಿತು! ಜರ್ಮನ್ ಕಾರು ಕಂಪನಿ 'ಆಡಿ'ಯ ನಿರ್ಮಾತೃ ಆಗಸ್ಟ್ ಹಾರ್ಚ್ ತನ್ನ ಮೊದಲ ಕಂಪನಿಗೆ ತನ್ನ ಹಾರ್ಚ್ ಉಪನಾಮವನ್ನು ಬಳಸಿಯಾಗಿತ್ತು. 'ಹಾರ್ಚ್' ಎಂದರೆ ಜರ್ಮನ್ ಭಾಷೆಯಲ್ಲಿ 'ಕೇಳಿರಿ' ಎಂದಾಗಿರುವುದರಿಂದ, ಸ್ನೇಹಿತರೊಬ್ಬರು ಅದೇ ಪದದ ಲ್ಯಾಟಿನ್ ಅನುವಾದವನ್ನು ಬಳಸಲು ಸೂಚಿಸಿದರು. 'ಆಡಿ' ಎಂದರೆ ಲ್ಯಾಟಿನ್ನಿನಲ್ಲಿ 'ಕೇಳಿರಿ' ಎಂದಾದ್ದರಿಂದ, ಸಂಸ್ಥಾಪಕ ತನ್ನದೇ ಹೆಸರನ್ನು ಬೇರೆ ಬೇರೆ ರೀತಿಯಲ್ಲಿ ಎರಡೂ ಕಂಪನಿಗಳಿಗಿಟ್ಟ.

ಇದೇ ಲ್ಯಾಟಿನ್ ಭಾಷೆಯ ಸಂಬಂಧಿತ ಇನ್ನೊಂದು ಕಥೆ ವೋಲ್ವೋ ಕಂಪನಿಯದ್ದು ಕೂಡಾ. ಲ್ಯಾಟಿನ್ನಿನಲ್ಲಿ ವೋಲ್ವೋ ಎಂದರೆ ನಾನು ಉರುಳುತ್ತೇನೆ. ಸ್ವೀಡನ್ನಿನ ಬಾಲ್-ಬೇರಿಂಗ್ ತಯಾರಕ ಕಂಪನಿಯಾಗಿದ್ದ ಎಸ್.ಕೆ.ಎಫ್, ವೋಲ್ವೋ ಎಂಬ ಹೆಸರನ್ನು ಆದಾಗಲೇ ನೋಂದಾಯಿಸಿಕೊಂಡಿತ್ತು. ಇಲ್ಲಿ ಕೆಲಸ ಮಾಡುತ್ತಿದ್ದ ಅಸ್ಸಾರ್ ಗೇಬ್ರಿಯಲ್ಸನ್ ಮತ್ತು ಗುಸ್ತಾಫ್ ಲಾರ್ಸನ್, ತಮ್ಮ ಹೊಸಕಂಪನಿಯ ಹೆಸರಾಗಿ ವೋಲ್ವೋ ಎಂಬ ಬ್ರಾಂಡ್ ಅನ್ನು ಬಳಸಲಿಕ್ಕೆ ಎಸ್.ಕೆ.ಎಫ್‌ನ ಆಡಳಿತ ಮಂಡಳಿಯನ್ನು ಒಪ್ಪಿಸಿದ್ದು ಅಲ್ಲದೇ, ತಮ್ಮ ಕಂಪನಿಯಲ್ಲಿ ಹಣ ಹೂಡುವಂತೆಯೂ ಒಪ್ಪಿಸುವಲ್ಲಿ ಯಶಸ್ವಿಯಾದರು. 1927ರಲ್ಲಿ ಸ್ಥಾಪನೆಯಾದ ವರ್ಷದಿಂದ, 1935ರಲ್ಲಿ ಸ್ವತಂತ್ರವಾಗುವವರೆಗೆ ವೋಲ್ವೋ ಅಧಿಕೃತವಾಗಿ ಎಸ್.ಕೆ.ಎಫ್‌ನ ಹಿಡಿತದಲ್ಲೇ ಇತ್ತು.

'ನಿಪ್ಪಾನ್ ಸಾಂಗ್ಯೋ' ಅಂದರೆ 'ಜಪಾನ್ ಇಂಡಸ್ಟ್ರೀಸ್' ಎಂಬ ಪದದ ಸಂಕ್ಷಿಪ್ತ ರೂಪವಾಗಿ ಹುಟ್ಟಿಕೊಂಡಿದ್ದು ನಿಸ್ಸಾನ್. ಜರ್ಮನಿಯ ಪ್ರಭಾವಿ ಆಟೋಮೊಬೈಲ್ ಡೀಲರ್ ಎಮಿಲ್ ಜೆಲ್ಲಿನೆಕ್‌ನ ಮಗಳ ಹೆಸರು ಮರ್ಸಿಡಿಸ್ ಜೆಲ್ಲಿನೆಕ್. ಗೊಟ್ಲೀಬ್ ಡೈಮ್ಲರ್‌ನ ಕಂಪನಿಯ ಪಾಲುದಾರರಲ್ಲೊಬ್ಬನಾದ ಎಮಿಲ್, ಡೈಮ್ಲರ್‌ನ ಪ್ರತಿಭಾವಂತ ಎಂಜಿನಿಯರ್ ವಿಲ್ಹೆಲ್ಮ್ ಮೇಬಾಕ್ ನೇತೃತ್ವದಲ್ಲಿ ಹೊಸದೊಂದು ಕಾರು ವಿನ್ಯಾಸವಾಗಬೇಕೆಂದು ಹಣ ಹೂಡಿದವ. ಮಾತ್ರವಲ್ಲ, ತನ್ನ ಮಗಳ ಹೆಸರನ್ನೇ ಆ ಕಾರಿಗೆ ಇಡಬೇಕೆಂದು ಹಠ ಹಿಡಿದವ. ಇಲ್ಲಿ ಎರಡು ತಮಾಷೆಯ ವಿಷಯಗಳನ್ನು ಕೇಳಿ. ಮೊದಲನೆಯದು, ಮುಂದೆ ಮರ್ಸಿಡಿಸ್ ಕಾರುಗಳ ಜನಪ್ರಿಯವಾದಾಗ ಎಮಿಲ್ ತನ್ನ ಹೆಸರನ್ನೇ ಎಮಿಲ್ ಜೆಲ್ಲಿನೆಕ್-ಮರ್ಸಿಡೆಸ್ ಎಂದು ವಿದ್ಯುಕ್ತವಾಗಿ ಬದಲಾಯಿಸಿಕೊಂಡ. ಅಪ್ಪನೇ ಮಗಳ ಹೆಸರನ್ನು ಎರವಲು ಪಡೆದದ್ದು ಇಡೀ ಜಗತ್ತಿನಲ್ಲೇ ಮೊದಲ ಬಾರಿಯಿರಬೇಕು ಎಂದು ಹೇಳಿದ್ದಾರಂತೆ. ಎರಡು, ತನ್ನ ಹೆಸರು ಇಷ್ಟೆಲ್ಲಾ ಪ್ರಸಿದ್ಧ ಬ್ರಾಂಡ್ ಆದರೂ ಮರ್ಸಿಡಿಸ್ ಜೆಲ್ಲಿನೆಕ್‌ಗೆ ಕಾರುಗಳ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ, ಮಾತ್ರವಲ್ಲ, ತನ್ನಿಡೀ ಜೀವನದಲ್ಲಿ ಆಕೆ ಒಂದೇ ಒಂದು ಕಾರನ್ನು ಕೊಳ್ಳಲಿಲ್ಲ.

ಕೋಕಾ ಎಲೆಗಳು ಮತ್ತು ಕೋಲಾ ಬೀಜಗಳನ್ನು ಮೂಲ ಫಾರ್ಮ್ಯುಲಾದಲ್ಲಿ ಬಳಸಿದ್ದರಿಂದ, ಆ ಪಾನೀಯಕ್ಕೆ ಕೋಕಾ-ಕೋಲಾ ಎಂಬ ಹೆಸರು ಬಂದಿದ್ದು. ಇವತ್ತು ನಾವು ಕುಡಿಯುವ ಕೋಕಾಕೋಲಾದಲ್ಲಿ ಕೊಕೈನ್‌ನ ಮೂಲ ಪದಾರ್ಥವಾದ ಕೋಕಾವೂ ಇಲ್ಲ, ಕೋಲಾ ಬೀಜಗಳೂ ಇಲ್ಲ. ಆದರೆ ಒಂದು ಶತಮಾನಕ್ಕೂ ಹೆಚ್ಚು ಕಾಲ ಬದಲಾಗದೆ ಉಳಿದ ಈ ಕಂಪನಿಯ ವಿಶಿಷ್ಟ ಲೋಗೋ, ಜಗತ್ತಿನ ಅತ್ಯಂತ ಬೆಲೆಬಾಳುವ ಬ್ರಾಂಡುಗಳಲ್ಲೊಂದು ಹಾಗೂ ಅತ್ಯಂತ ಹೆಚ್ಚು ಹಾಗೂ ಸುಲಭವಾಗಿ ಗುರುತಿಸಲ್ಪಡುವ ಲೋಗೋ. 1893ರಲ್ಲಿ ಅಜೀರ್ಣವನ್ನು ಹೋಗಲಾಡಿಸಲು ಹೆಚ್ಚು ಸಹಾಯ ಮಾಡುತ್ತಿದ್ದ Brad's Drinkಎಂದು ಕರೆಯಲ್ಪಡುತ್ತಿದ್ದ ಪಾನೀಯವೊಂದು ಅಮೆರಿಕದ ಫಾರ್ಮಸಿಗಳಲ್ಲಿ ಮಾರಾಟವಾಗುತ್ತಿತ್ತು. ಅಜೀರ್ಣಕ್ಕೆ ಹಳೆಯ ಶೈಲಿಯ ವೈದ್ಯಕೀಯ ಪದವೆಂದರೆ 'ಡಿಸ್ಪೆಪ್ಸಿಯಾ'. ಡಿಸ್ಪೆಪ್ಸಿಯಾಕ್ಕೆ ಸಹಾಯ ಮಾಡುತ್ತಿದ್ದ ಈ ಪಾನೀಯವನ್ನು ಮುಂದೆ ಜನಪ್ರಿಯವಾದ ಬಳಿಕ 'ಪೆಪ್ಸಿ' ಎಂದು ಬದಲಾಯಿಸಿದ್ದು ಕಂಪನಿಯ ಮಾಲೀಕ ಕೇಲಬ್ ಬ್ರಾಡ್-ಹಾಮ್.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಸ್ಟಾರ್‌ಬಕ್ಸ್‌ನ ಹೆಸರು ಮೊಬಿ-ಡಿಕ್ ಕಾದಂಬರಿಯಲ್ಲಿ ಬರುವ ಹಡಗೊಂದರ ಹೆಸರಾದ 'ಪೆಕ್ವಾಡ್' ಎಂದಾಗಬೇಕಿತ್ತು. ಆದರೆ ಸಂಸ್ಥಾಪಕರು ಕೊನೆಗಳಿಗೆಯಲ್ಲಿ, ಕಂಪನಿಯ ಹೆಸರನ್ನು ಮೊಬಿಯ ಸ್ನೇಹಿತನಾದ ಸ್ಟಾರ್‌ಬಕ್‌ನ ಹೆಸರಿಗೆ ಬದಲಾಯಿಸಿದರು. ಕಾಫಿಗೆ ಯಾವುದೇ ರೀತಿಯ ಸಂಬಂಧವಿಲ್ಲದ ಸ್ಟಾರ್‌ಬಕ್ ಸ್ಥಾಪಕರ ಓದಿನ ಹುಚ್ಚಿನಿಂದಾಗಿ ಕಥೆಯೊಂದರ ಹೆಸರಾಗಿ ಉಳಿದ. ಡ್ಯಾನಿಶ್ ಭಾಷೆಯ ಹೆಸರಿನಂತೆ ಕಂಡರೂ ಹಾಗನ್-ಡಾಜ್ಸ್ ಎಂಬುದಕ್ಕೆ ಯಾವ ಅರ್ಥವೂ ಇಲ್ಲ, ಇದೊಂದು ಸಂಪೂರ್ಣ ಅಮೇರಿಕನ್ ಕಂಪನಿ. ಇದರ ಮೂಲಮಾಲೀಕರು ಯುರೋಪಿಯನ್ ಕರಕುಶಲತೆ ಮತ್ತು ಗುಣಮಟ್ಟವನ್ನು ಗ್ರಾಹಕರ ಮನಸ್ಸಿನಲ್ಲಿ ಮೂಡಿಸಲು ಕಾಲ್ಪನಿಕವಾದ ಪದವೊಂದನ್ನು ಕಂಡುಹಿಡಿದದ್ದಷ್ಟೇ.

ಇನ್ನೂ ಕೆಲವು ಕುತೂಹಲಕಾರಿ ಕಂಪನಿಗಳ ಮಾಹಿತಿಗಳು ಮುಂದಿನವಾರಕ್ಕೆ. ಬೇರೆ ಯಾವುದಾದರೂ ಕಂಪನಿಗಳ ಹೆಸರಿನ ಮೂಲ ಬೇಕಿದ್ದಲ್ಲಿ ಮಿಂಚಂಚೆಯ ಮೂಲಕ ಸೂಚಿಸಿ.

ಹೆಂಡತಿ ತೀರಾ ಕೆಟ್ಟವಳಾದರೆ

ಅತಿಪ್ರಚಂಡಾಂ ಬಹುಪಾಕಶಾಲಿನೀಂ ವಿವಾದಶೀಲಾಂ ಸ್ವಯಮೇವ ಹಸ್ತಿನೀಮ್ ।
ಅಕ್ರೋಶಶೀಲಾಂ ಪರವೇಶ್ಮ ಗಾಮಿನೀಂ ತ್ಯಜೇಚ್ಚ ಭಾರ್ಯಾಂ ಛಿ, ದಶಪುತ್ರಸೂರಪಿ ॥

ತುಂಬಾ ಚಂಡಿ ಸ್ವಭಾವದವಳೂ, ಮಿಗುವ ಹಾಗೆ ಭಾರೀ ಖರ್ಚಿನ ಅಡುಗೆ ಮಾಡುವವಳೂ, ಮಾತಿಗೆ ಮಾತು ಬೆಳೆಸುವವಳೂ, ಕಂಡವರ ಮನೆಗೆ ತಿರುಗುವವಳೂ ಆದ ಹೆಂಡತಿಯನ್ನು, ಹತ್ತು ಮಕ್ಕಳನ್ನು ಹಡೆದವಳಾಗಿದ್ದಾಗ್ಯೂ ಬಿಟ್ಟು ಬಿಡತಕ್ಕದ್ದು - ಎಂಬುದು ಶ್ಲೋಕಾರ್ಥ.



ಶ್ಲೋಕ ಸಾಗರ
• ಡಾ. ಸೋಂದಾ ಭಾಸ್ಕರ ಭಟ್

ವಿವಾಹ ವಿಚ್ಛೇದನ ಎಂಬ ರೋಗ ಈಗ ದೇಶದ ಉದ್ದಗಲಕ್ಕೆ ವ್ಯಾಪಿಸಿದೆ. ಮೊದಲು ಪಾಶ್ಚಾತ್ಯ ದೇಶದಲ್ಲಿ ಇದು ಹೆಚ್ಚಾಗಿತ್ತು. ಆದರೆ ಇಂದು ನಮ್ಮ ದೇಶದಲ್ಲೂ ಸಾಮಾನ್ಯವೆನಿಸುವಷ್ಟರ ಮಟ್ಟಿಗೆ ಬಂದಿದೆ. ಗಂಡ ಹೆಂಡತಿಯನ್ನು ಬಿಡುವುದು, ಹೆಂಡತಿ ಗಂಡನನ್ನು ಬಿಡುವುದು ಎಂಬುದು ಹಿಂದೆ ಇರಲಿಲ್ಲವೆಂದಲ್ಲ, ಅದಕ್ಕೆ ಬಲವಾದ ಕಾರಣಗಳಿದ್ದವು. ಶಾಸ್ತ್ರಗಳೂ ಸಮ್ಮತಿಸಿದ್ದವು. ಹತ್ತು ಮಕ್ಕಳ ತಾಯಿಯಾಗಿದ್ದರೂ ಎಂಥವಳನ್ನು ಗಂಡ ಬಿಡಬೇಕು ಎಂಬುದನ್ನು ಈ ಶ್ಲೋಕ ಹೇಳುತ್ತದೆ. ಇದು ಕೇವಲ ಗಂಡಸರಿಗೆ ಹೇಳಿದ್ದೆನಿಸಿದರೂ ಹೆಂಗಸರಿಗೂ ನಾವು ಅನ್ವಯಿಸಿಕೊಳ್ಳಬೇಕು.

ಅತಿ ಪ್ರಚಂಡಾಮ್ - ಎಂದರೆ ಚಂಡೀ ಸ್ವಭಾವದವಳು, ಯಾರ ನಿಯಂತ್ರಣಕ್ಕೂ ಬಗ್ಗುವವಳಲ್ಲ, ಕಂಡ ಕಂಡ ವಿಚಾರಕ್ಕೆ ಹಠ ಹಿಡಿಯುವವಳು ಮನೆಯನ್ನೇ ರಣರಂಗವಾಗಿಸಿ ಎಲ್ಲರ ನೆಮ್ಮದಿಗೂ ಕೊಡಲಿ ಪ್ರಾಯವಾದವಳು. ಇವಳಿದ್ದರೆ ಸಂಸಾರವೇ ಸರ್ವನಾಶ ಎಂಬ ಹಂತ ತಲುಪಿದಾಗ ನಿರ್ದಾಕ್ಷಿಣ್ಯವಾಗಿ ತ್ಯಜಿಸಬೇಕು.

ಬಹುಪಾಕಶಾಲಿನೀಮ್ - ಅಳತೆ ಮೀರಿ ಅಡುಗೆ ಮಾಡುವವಳು, ಮಾಡಿದ ಅಡುಗೆ ಮಿಕ್ಕುವುದು, ಒಮ್ಮೊಮ್ಮೆ ಕಡಿಮೆಯಾಗುವುದು ಇದು ಇರುವಂಥದ್ದೇ. ಅಳತೆಮೀರಿದರೆ ಹೀಗಲ್ಲ ಸಂಭವಿಸುತ್ತದೆ. ಆದರೆ ಯಾವುದೇ ಹಿತವಚನವನ್ನು ಕೇಳದೇ ತಾನೂ ತಿಳಿದುಕೊಳ್ಳದೇ ಹೆಚ್ಚು ಹೆಚ್ಚು ಅಡುಗೆ ಮಾಡಿ ತಿಪ್ಪೆಗೆಸೆಯುವ ಮಡದಿ ಕೇವಲ ಮನೆಗೆ ಮಾಡುವ ದ್ರೋಹವಲ್ಲ, ರಾಷ್ಟ್ರದ್ರೋಹದ ಕೆಲಸ. ಆಹಾರ ಉಳಿಸಬೇಕು. ಹಸಿದವರಿಗೆ ಹಂಚಬೇಕು. ಇದನ್ನು ಬಿಟ್ಟು ಹೇಳಿದ್ದನ್ನೂ ಕೇಳಿಸಿಕೊಳ್ಳದೇ ಆಹಾರವನ್ನು ವ್ಯರ್ಥವಾಗಿ 'ಪೋಲು' ಮಾಡುವ ಮಡದಿಯನ್ನು ಬಿಟ್ಟುಬಿಡಬೇಕು.

ವಿವಾದಶೀಲಾಮ್ - ಎಂದರೆ ಜಗಳ ಕಾಯುವವಳು. ಕುಳಿತರೂ ಸರಿಯಲ್ಲ, ನಿಂತರೂ ಸರಿಯಲ್ಲ, ಓಡಾಡಿದರೂ ಸರಿಯಲ್ಲ ಎಂದು ನಿತ್ಯ ನಿರಂತರ ಜಗಳ ಮಾಡುವವಳನ್ನು ಬಿಡುವುದೇ ಒಳ್ಳೆಯದು. ಸ್ವಯಮೇವಹಸ್ತಿನೀಮ್ - ಕದಿಯುವ ಸ್ವಭಾವವುಳ್ಳವಳು. ಕಳ್ಳತನವೇ ಮಹಾಪಾಪ. ತಾನೇ ಯಜಮಾನಿಯಾದ, ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ, ಮನೆ ಮಂದಿಗೆ ಸನ್ನಡತೆಯನ್ನು ಬೋಧಿಸುವ ಅವಳೇ ಮಹಾಕಳ್ಳಿಯಾದರೆ, ಮನೆಯ ವಸ್ತುವನ್ನೇ ಮಾರಾಟ ಮಾಡುವ ಮಾನಸಿಕ ಸ್ಥಿತಿಯವಳಾದರೆ ಬಿಟ್ಟುಬಿಡಬೇಕು.

ಆಕ್ರೋಶಶೀಲಾಮ್ - ಆಕ್ರೋಶ ಸ್ವಭಾವದವಳು ಎಂದರ್ಥ. ಎಲ್ಲರ ಅಂತರಂಗದಲ್ಲೂ ಕೋಪದ ಬೀಜ ಬಿತ್ತುವ ಇವಳಿಂದ ಸಂಸಾರವೇ ಹಾಳಾಗುವಂತಿದ್ದರೆ ಬಿಟ್ಟುಬಿಡುವುದೇ ವಾಸಿ.

ಬೇರೆಯವರ ಮನೆ ಸುತ್ತುವವಳು ಬಹುಬೇಗನೆ ನಿಂದೆಗೆ ಕಾರಣಳಾಗುತ್ತಾಳೆ. ಕಂಡಕಂಡವರ ಮನೆಯನ್ನು ಸುತ್ತುವುದೇ ಕೆಲಸ ಮಾಡಿಕೊಂಡರೆ ಲೋಕನಿಂದೆಗೆ ಪಾತ್ರಳಾಗಬೇಕು. ಇಂಥವಳಿಂದ ಮನೆತನಕ್ಕೆ ಕೆಟ್ಟ ಹೆಸರು. ಆದ್ದರಿಂದ ಈ ಹಿಂದೆ ಹೇಳಿದ ಗುಣಸ್ವಭಾವವುಳ್ಳವರನ್ನು ಇಟ್ಟುಕೊಳ್ಳುವುದಕ್ಕಿಂತಲೂ ಬಿಡುವುದೇ ಲೇಸು.

ಟ್ರಂಪ್ ಮತ್ತು ಔರಂಗಜೇಬ್ ನಡುವಿನ ಸಾಮ್ಯತೆಗಳು

• ಉತ್ಪಲ್ ಕುಮಾರ್

ಔರಂಗಜೇಬ್, ಡೊನಾಲ್ಡ್ ಟ್ರಂಪ್ ಮಧ್ಯೆ ಸಾಕಷ್ಟು ಸಾಮ್ಯತೆಗಳಿವೆ. ಔರಂಗಜೇಬ್ ತನ್ನ ಆಡಳಿತದಲ್ಲಿ ಯಾವೆಲ್ಲ ತಪ್ಪುಗಳನ್ನು ಎಸಗಿದ್ದನೋ ಅದನ್ನೇ ಟ್ರಂಪ್ ಕೂಡಾ ಎಸಗುತ್ತಿದ್ದಾರೆ.

ಡೊನಾಲ್ಡ್ ಟ್ರಂಪ್ ಮತ್ತು ಮೊಘಲ್ ಅರಸ ಔರಂಗಜೇಬ್ ಮಧ್ಯೆ ಹಲವು ವೈರುಧ್ಯಗಳಿವೆ. ಟ್ರಂಪ್ ಧಾರ್ಮಿಕ ವ್ಯಕ್ತಿಯೇನಲ್ಲ, ಔರಂಗಜೇಬ್ ಧರ್ಮಕ್ಕಾಗಿ ಕೊಲ್ಲಲೂ, ಸಾಯಲೂ ತಯಾರಿದ್ದ ವ್ಯಕ್ತಿ. ದೇಶದ ಸಿರಿವಂತ ಸಾಮ್ರಾಜ್ಯದ ಅರಸನಾಗಿದ್ದರೂ ತನ್ನ ವಿರಾಮ ಕಾಲದಲ್ಲಿ ಔರಂಗಜೇಬ್ ಪ್ರಾರ್ಥನೆಯ ಟೋಪಿ ಹೊಲಿಯುವ ಮತ್ತು ಕುರಾನಿನ ಪ್ರತಿ ತಯಾರಿಸುವ ಕೆಲಸದಲ್ಲಿ ತೊಡಗಿರುತ್ತಿದ್ದ. ಆದರೆ ಟ್ರಂಪ್ ಐಷಾರಾಮಿ ಜೀವನ ನಡೆಸುತ್ತಿರುವವರು.

ಹಾಗಿದ್ದರೂ ಇವರಿಬ್ಬರ ಮಧ್ಯೆ ಕೆಲವು ಸಾಮ್ಯತೆಗಳೂ ಇವೆ. ಅದು ರಾಜಕೀಯ ವ್ಯವಹಾರ ನಡೆಸುತ್ತಿರುವುದರಲ್ಲಿ ಕಂಡು ಬರುವ ಸಾಮ್ಯತೆ. ಔರಂಗಜೇಬ್ ತನ್ನ ಕಾಲದ ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯ ಆಳುತ್ತಿದ್ದ, ಟ್ರಂಪ್ ಶಕ್ತಿಶಾಲಿ ರಾಷ್ಟ್ರದ ಆಡಳಿತಗಾರರಾಗಿ ಚುನಾಯಿತರಾಗಿದ್ದಾರೆ. ಇವರಿಬ್ಬರೂ ತಮ್ಮ ಹಿಂದಿನ ಆಡಳಿತಗಾರರು ಮೃದು ಸ್ವಭಾವದವರು ಎಂದು ಭಾವಿಸುವವರು ಹಾಗೂ ತಮ್ಮ ಸಾಮ್ರಾಜ್ಯವನ್ನು ಮತ್ತಷ್ಟು ಬಲಿಷ್ಠಗೊಳಿಸುವ ಇರಾದೆ ಹೊಂದಿದವರು.



ತಮ್ಮ ಗುರಿಯನ್ನು ಸಾಧಿಸಲು ಇಬ್ಬರೂ ತಮ್ಮ ಗೆಳೆಯರು, ಮಿತ್ರಕೂಟ ಸದಸ್ಯರು ಮತ್ತು ವಿರೋಧಿಗಳೊಂದಿಗೆ ವರ್ತಿಸಿದ ರೀತಿಯಲ್ಲೂ ಬಹಳಷ್ಟು ಸಾಮ್ಯತೆಯಿದೆ. ಔರಂಗಜೇಬ್ ತನ್ನ ಮಿತ್ರರನ್ನು ತನಗೆ ಬೇಕಾದಂತೆ ಬಳಸಿಕೊಂಡವನಾದರೂ ಅವರ ಮೇಲೆ ವಿಶ್ವಾಸವಿಟ್ಟವನಲ್ಲ, ಆತ ಬಲಿಷ್ಠ ಹಿಂದು ರಾಜರ ವಿರುದ್ಧ ಹೋರಾಡಲು ತನ್ನ ಹಿಂದು ದಂಡನಾಯಕರನ್ನೇ ಕಳಿಸುತ್ತಿದ್ದ. ರಾಜಾ ಜೈಸಿಂಗ್‌ನನ್ನು ಶಿವಾಜಿ ವಿರುದ್ಧ ಹೋರಾಡಲು ಕಳಿಸಿದ. ರಾಜಾರಾಮ ಸಿಂಗ್‌ನನ್ನು ಅಸ್ಸಾಂನ ರಾಜರ ವಿರುದ್ಧ ಹೋರಾಡಲು ಕಳಿಸಿದ. ರಾಜಾ ಜಸ್ವಂತ್‌ಸಿಂಗ್‌ನನ್ನು ಅಫಘಾನಿಸ್ತಾನದ ದುರ್ಗಮ ಪ್ರದೇಶದಲ್ಲಿ ಹೋರಾಡಲು ಕಳಿಸಿದ. ಅಗತ್ಯ ಬಿದ್ದಾಗ ಅವರ ಲಾಭ ಪಡೆದುಕೊಂಡು ಬೇಡವೆಂದಾದಾಗ ಅವರನ್ನು ತ್ಯಜಿಸಿದ.

ಟ್ರಂಪ್ ಕೂಡಾ ಇದೇ ರೀತಿ ವ್ಯವಹರಿಸುತ್ತಿದ್ದಾರೆ. ತಮ್ಮ ನ್ಯಾಟೋ ಮಿತ್ರರನ್ನೇ ಹಳಿಯುತ್ತಿದ್ದಾರೆ. ಹಾಗೂ ಯುರೋಪಿನ ಮಿತ್ರ ರಾಷ್ಟ್ರಗಳ ಮುಖಂಡರನ್ನು ಅವಮಾನ ಮಾಡುತ್ತಿದ್ದಾರೆ. ದೀರ್ಘಾವಧಿ ಸ್ನೇಹಿತರ ವಿರುದ್ಧ ತೆರಿಗೆ, ನಿರ್ಬಂಧದಂತಹ ದಂಡನಾ ಕ್ರಮ ವಿಧಿಸಿ ಬೆದರಿಸುತ್ತಿದ್ದಾರೆ. ಕಳೆದೆರಡು ದಶಕಗಳಲ್ಲಿ ಅಮೆರಿಕದ ಸರಕಾರಗಳೆಲ್ಲವೂ ಭಾರತದೊಂದಿಗೆ ವಿಶ್ವಾಸ ವೃದ್ಧಿಗೆ ಸಾಕಷ್ಟು ಪ್ರಯತ್ನ ನಡೆಸಿ ಸಫಲವಾಗಿದ್ದರೆ, ಟ್ರಂಪ್ ಅದನ್ನು ಕೆಲವೇ ತಿಂಗಳಲ್ಲಿ ನಾಶಪಡಿಸಿದ್ದಾರೆ. ಅಮೆರಿಕವನ್ನು ನಂಬುವಂತಿಲ್ಲ ಎಂಬಂತಹ ಭಾರತದ ಹಳೆಯ ನಂಬಿಕೆಯು ಮತ್ತೆ ಸತ್ಯವೆಂಬಂತೆ ಮಾಡಿದ್ದಾರೆ.

ಸಾಮ್ರಾಜ್ಯಗಳು ಬೆದರಿಕೆ ಮತ್ತು ವಿಶ್ವಾಸವನ್ನು ಸಮಾನವಾಗಿ ಬಂಬಿಸಿದಾಗಲಷ್ಟೇ ಅವು ಬದುಕುಳಿಯುತ್ತವೆ. ಔರಂಗಜೇಬ್ 1707ರಲ್ಲಿ ಸಾಯುವಾಗ ಮೊಘಲ್ ಸಾಮ್ರಾಜ್ಯವು ಅತ್ಯಂತ ವಿಸ್ತಾರವಾಗಿತ್ತು. ಆದರೆ ಆ ವೇಳೆಗೆ ಅದಕ್ಕೆ ಅತೀ ಕಡಿಮೆ ಸ್ನೇಹಿತರಿದ್ದರು ಹಾಗೂ ಅತ್ಯಂತ ಹೆಚ್ಚು ವೈರಿಗಳಿದ್ದರು. ಹೇಳಲೇನೋ ಅದು ಅಪರಾಜಿತ ಎಂಬಂತಿತ್ತು. ವಾಸ್ತವದಲ್ಲಿ ಅದು ಶಿಥಿಲವಾಗಿತ್ತು. ಎಲ್ಲರ ವಿರೋಧ ಕಟ್ಟಿಕೊಂಡಿತ್ತು.

ಟ್ರಂಪ್‌ರ ಅಮೆರಿಕ ಕೂಡಾ ಈಗ ಅದೇ ಪರಿಸ್ಥಿತಿಯಲ್ಲಿದೆ. ಅಮೆರಿಕ ಅತ್ಯಂತ ದೊಡ್ಡ ಮಿಲಿಟರಿ ಶಕ್ತಿ ಹೊಂದಿದೆ ನಿಜ. ಅದರ ಆರ್ಥಿಕ ಶಕ್ತಿಯೂ ಬಲಿಷ್ಠವಾಗಿದೆ. ತಂತ್ರಜ್ಞಾನದಲ್ಲೂ ಮುಂದಿದೆ. ಆದರೆ ಅದರ ಮಿತ್ರರಾಷ್ಟ್ರಗಳೇ ಈಗ ಅಮೆರಿಕವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ, ಅಮೆರಿಕದ ಪ್ರತೀ ನಡೆಯನ್ನೂ ಶಂಕಿಸುತ್ತಿವೆ. ಅಮೆರಿಕದ ಪ್ರಭುತ್ವ ಕೂಡಾ ಕಳೆಗುಂದುತ್ತಿರುವುದು ಇತ್ತೀಚಿನ ಅಮೆರಿಕ - ಇರಾನ್ ಒಪ್ಪಂದದಿಂದಲೂ ಸಾಬೀತಾಗಿದೆ. ಸಾಮ್ರಾಜ್ಯವೊಂದರ ಅಳಿವು ಮಹಾಪತನದಿಂದಲೇ ಆಗಬೇಕೆಂದಿಲ್ಲ, ವಿಶ್ವಾಸದ ಕೊರತೆಯೇ ಪತನದ ಆರಂಭ.

ಔರಂಗಜೇಬ್ ಮತ್ತು ಟ್ರಂಪ್ ಮಧ್ಯೆ ಮತ್ತೊಂದು ಸಾಮ್ಯತೆಯಿದೆ. ತನ್ನ ಹಿಂದಿನ ಅರಸರ ಕಾಲದಲ್ಲಿ ಮೊಘಲ್ ಸಾಮ್ರಾಜ್ಯ ತುಂಬಾ ಮೃದುವಾಗಿ ವರ್ತಿಸಿತ್ತು ಎಂದು ಭಾವಿಸಿದ್ದ ಔರಂಗಜೇಬ್ ಎಲ್ಲಾ ದಿಕ್ಕಿನಲ್ಲೂ ಯುದ್ಧ ಆರಂಭಿಸಿದ. ಪ್ರತಿಯೊಬ್ಬ ವಿರೋಧಿಯನ್ನೂ ಮಣಿಸಲು ಯತ್ನಿಸಿದ. ಇದರಿಂದಾಗಿ ಮೊಘಲ್ ಸಾಮ್ರಾಜ್ಯವು ನಿರಂತರವಾಗಿ ಯುದ್ಧದಲ್ಲೇ ತೊಡಗಿರುವಂತಾಯಿತು. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ಔರಂಗಜೇಬ್ ವಿವಿಧ ರಾಜ್ಯಗಳ ವಿರುದ್ಧ ನಿರಂತರ ಹೋರಾಟ ನಡೆಸಿದ. ದಕ್ಷಿಣದಲ್ಲಿ ಮರಾಠರ ಜೊತೆಗಿನ ಹಾಳಾದರೆ ಔರಂಗಜೇಬ್ ದಿಲ್ಲಿಯಿಂದ ದೂರ ಸರಿದ. 25 ವರ್ಷಗಳ ಕಾಲ ಗೆಲುವಿನ ಹಂಬಲದಿಂದ ಯುದ್ಧಗಳನ್ನು ನಡೆಸಿದ ಔರಂಗಜೇಬ್ ತಾನು ಸಾಯುವ ವೇಳೆಗೆ ತನ್ನ ಸಾಮ್ರಾಜ್ಯಕ್ಕೆ ಸ್ಥಿರತೆಯನ್ನು ನೀಡಲು ವಿಫಲನಾದ.

ಟ್ರಂಪ್ ಎಲ್ಲಾ ಯುದ್ಧಗಳನ್ನು ಕೊನೆಗೊಳಿಸುವ ಮತ್ತು ಅಮೆರಿಕವು ಯುದ್ಧ ಮಾಡದಿರುವ ವಾಗ್ದಾನದೊಂದಿಗೆ ಅಧಿಕಾರಕ್ಕೆ ಬಂದಿದ್ದರು. ಆದರೆ ಅವರ ಅಧ್ಯಕ್ಷತೆಯಲ್ಲಿ ಅಮೆರಿಕವು ಕೆಲವಾರು ಸಂಘರ್ಷಗಳಲ್ಲಿ ಕಾಣುವಂತಾಯಿತು. ಅಸ್ಥಿರತೆಯೂ ಹೆಚ್ಚಿದೆ. ಔರಂಗಜೇಬ್‌ನಂತೆ ಟ್ರಂಪ್ ಕೂಡಾ ತಾನು ಗೆಲ್ಲಬಲ್ಲ ಯುದ್ಧವನ್ನು ಆರಿಸುವ ಬದಲಾಗಿ ಸುದೀರ್ಘ ಎಳೆಯುವ ಯುದ್ಧಗಳಲ್ಲಿ ತೊಡಗುವ ಮೂಲಕ ತಮಗೆ ತಾವೇ ಹಾನಿ ಮಾಡಿಕೊಂಡಿದ್ದಾರೆ.

ಇರಾನ್ - ಅಮೆರಿಕ ಯುದ್ಧವು ಒಂದು ಅಧ್ಯಯನಶೀಲ ವಿಷಯವಾಗಿದೆ. ಇದೀಗ ಸಮರ ಕೊನೆಗೊಳಿಸುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಈ ಅನವಶ್ಯ ಯುದ್ಧ ಕೊನೆಗೊಂಡಿದು ಸ್ವಾಗತಾರ್ಹವೇ ಆದರೂ ಅಮೆರಿಕದ ಉದ್ದೇಶ ಮತ್ತು ಶಕ್ತಿಯ ಕುರಿತಂತೆ ಹಲವಾರು ಅಹಿತಕರ ಪ್ರಶ್ನೆಗಳು ಎತ್ತಲ್ಪಡುತ್ತಿವೆ. ಒಪ್ಪಂದದ ಅಂಶಗಳನ್ನು ಗಮನಿಸಿದರೆ ಅಮೆರಿಕದ ಮೇಲೆ ಇರಾನೇ ಮೇಲುಗೈ ಸಾಧಿಸಿರುವಂತೆ ತೋರಿ ಬರುತ್ತಿದೆ.

ಯುದ್ಧ ನಿಲ್ಲಿಸುವ ಮೂಲಕ ಟ್ರಂಪ್ ಅವರು ತಮ್ಮ ದೇಶದಲ್ಲಿ ಉದ್ಭವಿಸಬಹುದಾದ ರಾಜಕೀಯ ಸಮಸ್ಯೆಯನ್ನು ಪರಿಹರಿಸಬಹುದು. ಆದರೆ ಅಂತಾರಾಷ್ಟ್ರೀಯವಾಗಿ ದುಬಾರಿ ಬೆಲೆ ತೆತ್ತಿದ್ದಾರೆ. ಅಮೆರಿಕದ ದೌರ್ಬಲ್ಯ ಜಗತ್ತಿಗೆ ತಿಳಿಯುವಂತಾಗಿದೆ. ಅಮೆರಿಕದ ಮಿತ್ರರಾಷ್ಟ್ರಗಳಿಗೂ ಅಮೆರಿಕದನಡೆ ಪ್ರತಿಕೂಲ ಪರಿಣಾಮ ಉಂಟುಮಾಡಿದೆ. ಇಸ್ರೇಲ್‌ನ ಗುರಿ ಇರಾನ್‌ನ್ನು ದುರ್ಬಲಗೊಳಿಸುವುದಾಗಿತ್ತು. ಆದರೆ ಅಮೆರಿಕದೊಂದಿಗಿನ ಒಪ್ಪಂದದ ಮೂಲಕ ಇರಾನ್ ಹಾಗೇ ಉಳಿದಿರುವುದು ಇಸ್ರೇಲ್‌ಗೆ ಸಮ್ಮತವಾಗಿಲ್ಲ, ಅದು ಒಪ್ಪಂದವನ್ನು ಮಾನ್ಯ ಮಾಡುವುದಿಲ್ಲವೆಂದು ಹೇಳುತ್ತಿದೆ. ಕೊಲ್ಲಿಯಲ್ಲಿರುವ ಅಮೆರಿಕದ ಮಿತ್ರರಾಗಿರುವ ಸುನ್ನಿ ರಾಷ್ಟ್ರಗಳಿಗೂ ಇದೀಗ ಅಮೆರಿಕದ ಸ್ನೇಹವು ವರದಾನಕ್ಕಿಂತಲೂ ಹೆಚ್ಚಾಗಿ ಶಾಪವೇ ಆಗಿರುವುದು ಮನದಟ್ಟಾಗಿದೆ.

ಹಾಗಿದ್ದರೆ ಟ್ರಂಪ್ ಸಾಧಿಸಿದ್ದಾದರೂ ಏನು? ಅಮೆರಿಕದ ದೌರ್ಬಲ್ಯವನ್ನು ಎತ್ತಿ ತೋರಿದ್ದಾರೆ. ಇಸ್ರೇಲ್‌ನ ನಿಷ್ಠುರ ಕಟ್ಟಿಕೊಂಡಿದ್ದಾರೆ. ಸುನ್ನಿ ಅರಬ್ ರಾಷ್ಟ್ರಗಳ ಅವಿಶ್ವಾಸಕ್ಕೆ ಪಾತ್ರರಾಗಿದ್ದಾರೆ ಹಾಗೂ ಇರಾನ್ ಬಲಿಷ್ಠವಾಗಿಯೇ ಉಳಿಯಲು ಬಿಟ್ಟಿದ್ದಾರೆ.

ಇಲ್ಲಿರುವ ಪಾಠ ಅತ್ಯಂತ ಸರಳವಾಗಿದೆ. ಅತ್ಯಂತ ಬಲಿಷ್ಠ ಮತ್ತು ಯಶಸ್ವಿ ಆಡಳಿತಗಾರರು ಯಾರೆಂದರೆ ಹೆಚ್ಚು ಸ್ನೇಹಿತರನ್ನು ಸಂಪಾದಿಸಿ ಕಡಿಮೆ ವಿರೋಧಿಗಳನ್ನು ಹೊಂದಿರುವವರು. ಹಾಗೂ ತನ್ನ ಮಿತ್ರರನ್ನೆಲ್ಲಾ ತನ್ನ ಜತೆಯಲ್ಲಿಯೇ ಇಟ್ಟುಕೊಳ್ಳುವವರು. ಅಕ್ಬರ್ ಇದನ್ನು ಅರಿತುಕೊಂಡು ತನ್ನ ಸಾಮ್ರಾಜ್ಯ ಕಟ್ಟಿಕೊಂಡಿದ್ದ. ಔರಂಗಜೇಬ್ ಇದನ್ನು ಅರಿಯದೆ ಕೆಟ್ಟುಹೋದ. ರೂಸ್‌ವೆಲ್ಟ್ ಇದನ್ನು ಅರಿತುದರಿಂದ ಅಮೆರಿಕನ್ ಸಾಮ್ರಾಜ್ಯ ಬೆಳೆಯಿತು. ಟ್ರಂಪ್‌ಗೆ ಇದು ಅರಿಯದಿರುವುದರಿಂದ ಅಮೆರಿಕದ ಪತನ ಆರಂಭವಾಗಿದೆ.

ಆರೆಸ್ಸೆಸ್ ಟೀಕಾಕಾರರ 'ಭ್ರಮರ ಕೀಟ ನ್ಯಾಯ'

ಪತ್ರ ಮಿತ್ರ

'ಭ್ರಮರಕೀಟನ್ಯಾಯ' ಎಂಬುದು ಸಂಸ್ಕೃತದ ಒಂದು ಉಕ್ತಿ. 'ಭ್ರಮರವು ಕೀಟವೊಂದನ್ನು ತಂದು ತನ್ನ ಗೂಡಿನ ಒಳಗೆ ಇಟ್ಟುಕೊಳ್ಳುತ್ತದೆ. ಭ್ರಮರದ ಭಯದಿಂದ ಆ ಕೀಟವು ಸಹ ಸದಾ ಭ್ರಮರದ ಯೋಚನೆಯನ್ನೇ ಮಾಡಿ ಮಾಡಿ ಕೊನೆಗೆ ಅದು ಭ್ರಮರವೇ ಆಗಿಬಿಡುತ್ತದೆ' ಎಂಬುದು 'ಭ್ರಮರ ಕೀಟ ನ್ಯಾಯ'ದ ವಿವರಣೆ. ನಮ್ಮ ರಾಜ್ಯದ ಗೃಹ ಸಚಿವ ಖರ್ಗೆಯವರು ಪ್ರತಿದಿನ, ಪ್ರತಿಕ್ಷಣ ಕುಳಿತಲ್ಲಿ, ನಿಂತಲ್ಲಿ ಆರೆಸ್ಸೆಸ್ಸನ್ನೇ ಧ್ಯಾನಿಸುತ್ತಾರೆ. ಕೊನೆಗೊಂದು ದಿನ ಅವರೂ 'ಭ್ರಮರ ಕೀಟ ನ್ಯಾಯ'ದಂತೆ ಆರೆಸ್ಸೆಸ್ ಕಾರ್ಯಕರ್ತರಾಗಿ ಬದಲಾಗಬಹುದೇನೋ ಎಂಬ ಅನುಮಾನ ಬಹು ಮಂದಿಯನ್ನು ಕಾಡುತ್ತಿದೆ!

ಆರೆಸ್ಸೆಸ್ ಖರ್ಗೆಯವರಿಗೆ ಏನು ಮಾಡಿದೆ? ಅವರ ಸಂಪತ್ತನ್ನು ದೋಚಿದೆಯೇ? ಅವರ ಕುಟುಂಬಕ್ಕೆ ತೊಂದರೆ ಕೊಟ್ಟಿದೆಯೇ? ಈ ದೇಶಕ್ಕೆ ಹಾನಿ ಎಸಗಿದೆಯೇ? ಶತ್ರು ದೇಶದೊಂದಿಗೆ ಶಾಮೀಲಾಗಿದೆಯೇ? ಯಾರಿಗಾದರೂ ಭಯವನ್ನುಂಟು ಮಾಡಿದೆಯೇ? ಭಯೋತ್ಪಾದನೆ, ಕಳ್ಳ ಸಾಗಾಣಿಕೆ, ಮಾದಕ ದ್ರವ್ಯ ಸರಬರಾಜುಗಳನ್ನು ಮಾಡಿದೆಯೇ? ಹಾಗಿದ್ದರೆ ಅದನ್ನು ಮಟ್ಟ ಹಾಕಲು ಗೃಹ ಸಚಿವರಿಗೆ ಸಾಮರ್ಥ್ಯವಿಲ್ಲವೇ? ಆರೆಸ್ಸೆಸ್‌ನ ಹೆಚ್ಚಿನ ಪೂರ್ಣಾವಧಿ ಕಾರ್ಯಕರ್ತರು ಯಾವುದೇ ಅಪೇಕ್ಷೆ ಇಲ್ಲದೆ ನಿಸ್ವಾರ್ಥ ಬುದ್ಧಿಯಿಂದ, ಸಮರ್ಪಣಾ ಭಾವದಿಂದ ದುಡಿಯುತ್ತಾರೆ. ಸಂಚಾರ ಸಮಯದಲ್ಲಿ ಅವರು ಹಿತೈಷಿಗಳ ಮನೆಗಳಲ್ಲಿ ಉಳಿದುಕೊಳ್ಳುತ್ತಾರೆ. ಅವರು ನೀಡಿದ ಸರಳ ಆಹಾರವನ್ನು ಸೇವಿಸುತ್ತಾರೆ. ಅವರಾರೂ ಪಂಚತಾರಾ (ರೆಸಾರ್ಟ್) ಆತಿಥ್ಯವನ್ನು ಬಯಸಿದವರಲ್ಲ. ಕೆಲವು ವರ್ಷಗಳ ಹಿಂದೆ ಸಂಘದ ಹಿರಿಯ ಕಾರ್ಯಕರ್ತ ಸೀತಾರಾಮ ಕೆದಿಲಾಯ ಎಂಬವರು ಭಾರತ ಪರಿಕ್ರಮಣ ನಡೆಸಿ ಬಂದರು. ಇಡೀ ಭಾರತದಾದ್ಯಂತ ಸಂಚರಿಸಲು ಅವರಿಗೆ ಯಾವುದೇ ತೊಂದರೆಯಾಗಲಿಲ್ಲ, ಭಾರತದಾದ್ಯಂತ ಹರಡಿಕೊಂಡ ಸ್ವಯಂಸೇವಕರು ಮತ್ತು ಹಿತೈಷಿಗಳು ಅವರಿಗೆ ಸಹಕಾರ ನೀಡಿದರು. ನಡಿಗೆಯಲ್ಲೇ ಸಂಚಾರ ಮುಗಿಸಿ ಬಂದ ಅವರಿಗೆ ವಾಹನದ ವೆಚ್ಚದ ಅಗತ್ಯವೇ ಬೀಳಲಿಲ್ಲ. ಇನ್ನು ಸಾಮಾನ್ಯ ಸ್ವಯಂಸೇವಕರು ಶಾಖೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಗುರುದಕ್ಷಿಣೆ ಸಮರ್ಪಿಸುತ್ತಾರೆ. ಆಪತ್ಕಾಲದಲ್ಲಿ ಸಮಾಜ ಸೇವೆಗೂ ಮುಂದಾಗುತ್ತಾರೆ. ಇವೆಲ್ಲ ಅಜ್ಞಾನಾಂಧಕಾರದಲ್ಲಿ ಮುಳುಗಿದ ಕುರುಡರಿಗೆ ಅರ್ಥವಾಗುವುದಿಲ್ಲ. 'ಭ್ರಮರ ಕೀಟ ನ್ಯಾಯ'ದ ಬಗ್ಗೆ ವೇದಾಂತ ಚಿಂತನೆಯೊಂದು ಹೀಗಿದೆ-

ಜೀವನ್ಮುಕ್ತಿಸ್ತು ತದ್ವಿದ್ವಾನ್ ಸರ್ವೋಪಾಧಿಗುಣಾನ್ ತ್ಯಜೇತ್।
ಸಚ್ಚಿದಾನಂದ ಧರ್ಮಸ್ತ್ವಾತ್ ಭಜೇತ್ ಭ್ರಮರಕೀಟವತ್॥

ಅತ್ಮ ಜ್ಞಾನದಿಂದ ಮಾಯಾ ಬಂಧನದ ಭಯವನ್ನು ತ್ಯಜಿಸಿದ ಜ್ಞಾನಿಯು ಕೀಟವು ಭ್ರಮರವನ್ನೇ ಧ್ಯಾನಿಸಿ ಭ್ರಮರವಾದಂತೆ ಸಚ್ಚಿದಾನಂದ ಸ್ವರೂಪವೇ ಆಗುತ್ತಾನೆ. ಹಾಗೆಯೇ ಖರ್ಗೆ ಅವರು ಆತ್ಮಜ್ಞಾನವನ್ನು ಹೊಂದಿ ಆರೆಸ್ಸೆಸ್‌ನ ಭಯವನ್ನು ತ್ಯಜಿಸಿ ಸಚ್ಚಿದಾನಂದ ಸ್ವರೂಪವೇ ಆಗಿಪ್ರಜಾಹಿತಚಿಂತನೆಯನ್ನೇ ಮಾಡುತ್ತಾ ಗೃಹಖಾತೆಯನ್ನು ನಿರ್ವಹಿಸಲಿ ಎಂಬುದೇ ನಮ್ಮೆಲ್ಲರ ಕಳಕಳಿಯಾಗಿದೆ.

-ಎಸ್. ಸುಬ್ರಹ್ಮಣ್ಯ ಭಟ್, ಮುಡಿಪು

ಯಕ್ಷಪ್ರಶ್ನೆ!

ಜಾರಿ ನಿರ್ದೇಶನಾಲಯದ ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಮೈಸೂರು ಮತ್ತು ಬೆಳಗಾವಿಯಲ್ಲಿ ಒಟ್ಟು 14 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿ ರಾಜ್ಯ ಅಬಕಾರಿ ಇಲಾಖೆಯಲ್ಲಿ ವ್ಯವಸ್ಥಿತ ಭ್ರಷ್ಟಾಚಾರ ಮತ್ತು ಸರ್ಕಾರಿ ಅಧಿಕಾರಿಗಳು ಅಕ್ರಮವಾಗಿ ಆಸ್ತಿ ಸಂಪಾದಿಸಿರುವ ಆರೋಪಗಳ ಹಿನ್ನೆಲೆಯಲ್ಲಿ ದಾಳಿ ನಡೆಸಿದ್ದಾರೆ. ಕರ್ನಾಟಕ ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ದೂರಿನ ಆಧಾರದ ಮೇಲೆ ಇಡಿ ಅಧಿಕಾರಿಗಳು ಧಾಳಿ ನಡೆಸಿದ್ದಾರೆ. ವಿವಿಧ ಅಬಕಾರಿ ಪರವಾನಗಿಗಳನ್ನು (ಲೈಸೆನ್ಸ್) ಮಂಜೂರು ಮಾಡುವ ಹಾಗೂ ನವೀಕರಿಸುವ ಪ್ರಕ್ರಿಯೆಯಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಲಂಚ ಸ್ವೀಕರಿಸಿ ವೈಯಕ್ತಿಕ ಲಾಭ ಪಡೆದಿದ್ದಾರೆ ಎಂಬ ಆರೋಪ ಇದೆ.

ಈ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ. ಮಂಜುನಾಥ್ ಮತ್ತು ಅವರ ಆಪ್ತರಿಗೆ ಸೇರಿದ ಹಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ದಾಳಿಯ ವರದಿಯಾಗುತ್ತಿದ್ದಂತೆಯೇ ನಮ್ಮ ರಾಜ್ಯದ ಗೃಹ ಸಚಿವರು ಪ್ರತಿಕ್ರಿಯೆ ನೀಡುತ್ತಾ ಇದೊಂದು ರಾಜಕೀಯ ಪ್ರೇರಿತ ದಾಳಿ. ಇಂತಹ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ? ಕೇಂದ್ರ ತನಿಖಾ ಸಂಸ್ಥೆಗಳಾದ ಇ.ಡಿ, ಐ.ಟಿ, ಹಾಗೂ ಸಿಬಿಐ ಕೇಂದ್ರ ಸರಕಾರದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿವೆ ಎನ್ನುವ ಮೂಲಕ ಭ್ರಷ್ಟ ಆರೋಪಿಗಳ ಪರವಾಗಿ ಬ್ಯಾಟ್ ಬೀಸಿದ್ದಾರೆ. ರಾಜ್ಯದ ಪರವಾಗಿ ಕೆಲಸ ಮಾಡಬೇಕಾಗಿರುವ ಗೃಹಮಂತ್ರಿಗಳು ಆರೋಪಿಗಳ ಪರವಾಗಿ ಬ್ಯಾಟಿಂಗ್ ಮಾಡಬಹುದೇ?

ಇದು ಯಕ್ಷಪ್ರಶ್ನೆ!

-ಪಿ.ಜೆ.ರಾಘವೇಂದ್ರ, ಮೈಸೂರು

ದಿವ್ಯೌಷಧವೆಂಬ ಮೋಸ

ಔಷಧೀಯ ಗುಣಗಳ ಹೆಸರಿನಲ್ಲಿ ವಿಟಮಿನ್, ಖನಿಜಾಂಶಗಳು, ಮೆಲಟೋನಿನ್, ಒಮೆಗಾ-3 ಫಿಶ್ ಆಯಿಲ್, ಹಾರ್ಮೋನ್ ಹಾಗೂ ಮೂಲಿಕೆ ಸಾರಗಳನ್ನು 'ಡಯಟರಿ ಸಪ್ಲಿಮೆಂಟ್' ಎಂದು ದುಬಾರಿ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದೆ. ನಿಯಮಾವಳಿಗಳ ಲೋಪ ಬಳಸಿಕೊಂಡು ಪ್ಯಾಕೆಟ್‌ಗಳ ಮೇಲೆ ಅತ್ಯಂತ ಸಣ್ಣ ಅಕ್ಷರಗಳಲ್ಲಿ 'ಇದು ಔಷಧೀಯ ಬಳಕೆಗೆ ಅಲ್ಲ' ಎಂದು ಬರೆದು ಜನರನ್ನು ಮೂರ್ಖರನ್ನಾಗಿಸಲಾಗುತ್ತಿದೆ. ಜನರು ಇವುಗಳನ್ನು ನಿಜವಾದ ದಿವ್ಯೌಷಧ ಎಂದು ನಂಬಿ ಮೋಸಹೋಗುತ್ತಿದ್ದಾರೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ ಮತ್ತು ಕೇಂದ್ರ ಆರೋಗ್ಯ ಸಚಿವಾಲಯವು ಈ ಮಾರುಕಟ್ಟೆಯ ಮಹಾ ಮೋಸವನ್ನು ಕೂಡಲೇ ನಿಯಂತ್ರಿಸಬೇಕು. ಇವು ಕೇವಲ ಪೂರಕ ಆಹಾರಗಳೇ ಹೊರತು ಕಾಯಿಲೆ ಗುಣಪಡಿಸುವ ಮದ್ದುಗಳಲ್ಲ ಎಂಬ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಭಿಯಾನವನ್ನು ತಕ್ಷಣವೇ ಹಮ್ಮಿಕೊಳ್ಳಬೇಕು.

-ಡಾ.ವಿಜಯಕುಮಾರ್, ರಾಯಚೂರು

ತಂಡ ಸಾಮರ್ಥ್ಯದ ಸತ್ಯದರ್ಶನ

ಟಿ20 ವಿಶ್ವ ಚಾಂಪಿಯನ್ ಭಾರತವು ಐರ್ಲೆಂಡಿನೆದುರು ಎರಡೂ ಪಂದ್ಯಗಳನ್ನು ಸೋತಿರುವುದು ತಂಡದ ದೋಷಗಳನ್ನು ಎತ್ತಿ ತೋರಿದೆ. ಭಾರತದ ಪಿಚ್‌ಗಳಲ್ಲಿ ರನ್ ಸುರಿಮಳೆಗೈಯುವ ಬ್ಯಾಟ್ಸ್‌ಮನ್‌ಗಳು ಬೌಲಿಂಗೆ ನೆರವೀಯುವ ಪಿಚ್‌ನಲ್ಲಿ ಸಾಮಾನ್ಯ ಬೌಲಿಂಗೆದುರೂ ಹೇಗೆ ಪರದಾಡಿದರು ಎನ್ನುವುದರ ಸತ್ಯದರ್ಶನವಾಗಿದೆ. ಇನ್ನೀಗ ಇಂಗ್ಲೆಂಡಿನ ನೆಲದಲ್ಲಿ ಭಾರತೀಯ ತಂಡದ ನಿರ್ವಹಣೆಯನ್ನು ನೋಡಬೇಕಾಗಿದೆ.

-ನವೀನ್ ಅಡಿಗ, ಪುತ್ತೂರು

ಜು.2ಕ್ಕೆ ಸಚಿವ ಸಂಪುಟದಲ್ಲಿ ಮಸೂದೆ ಬಗ್ಗೆ ಚರ್ಚೆ

ಬಂಗಾಳದಲ್ಲಿ ಏನಾಸಂ ಅನುಷ್ಠಾನಕ್ಕೆ ಚಾಲನೆ

» ಸುಪ್ರೀಂ ಕೋರ್ಟ್ ನಿವೃತ್ತ ನ್ಯಾ. ರಂಜನಾ ಪ್ರಕಾಶ್ ದೇಸಾಯಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚನೆ; ನಾಲ್ಕು ವಾರಗಳಲ್ಲಿ ವರದಿ ಸಲ್ಲಿಕೆ

» ವಿವಾಹ, ವಿಚ್ಛೇದನ, ಆಸ್ತಿ ಹಕ್ಕು, ದತ್ತು ಸೇರಿದಂತೆ ಕುಟುಂಬ ಕಾನೂನುಗಳಿಗೆ ಏಕರೂಪ ಚೌಕಟ್ಟು

• **ಕೋಲ್ಕತಾ:** ಪಶ್ಚಿಮ ಬಂಗಾಳ ಸರ್ಕಾರವು ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಏನಾಸಂ) ಜಾರಿ ಪ್ರಕ್ರಿಯೆಗೆ ಸೋಮವಾರ ಅಧಿಕೃತ ಚಾಲನೆ ನೀಡಿದೆ. ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸುವುದಾಗಿ ವಿಧಾನಸಭೆಯಲ್ಲಿ ಘೋಷಿಸಿದರು.

ಪ್ರಸ್ತಾವಿತ ಏನಾಸಂ ಮಸೂದೆಗೆ ಅಗತ್ಯವಾದ ಕಾನೂನು ಚೌಕಟ್ಟು ಸಿದ್ಧಪಡಿಸುವ ಜವಾಬ್ದಾರಿಯನ್ನು ಈ ಸಮಿತಿಗೆ ನೀಡಲಾಗಿದೆ. ನಾಲ್ಕು ವಾರಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದ್ದು, ಆಗಸ್ಟ್‌ನಲ್ಲಿ ನಡೆಯಲಿರುವ ವಿಸ್ತೃತ ಬಜೆಟ್ ಅಧಿವೇಶನದಲ್ಲಿ ಏನಾಸಂ ಮಸೂದೆ ಮಂಡಿಸುವ ಸಾಧ್ಯತೆ ಇದೆ.

ಪ್ರಸ್ತುತ ಅಧಿವೇಶನದ ಕೊನೆಯ ದಿನ ಮಾತನಾಡಿದ ಮುಖ್ಯಮಂತ್ರಿ, ಜು.2ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಸೂದೆ ಕರಡಿನ ಕುರಿತು ಚರ್ಚೆ ನಡೆಸಿ ಅಂತಿಮ ರೂಪ ನೀಡಲಾಗುವುದು. ಇದು ಬಿಜೆಪಿ ಸರ್ಕಾರದ ಪ್ರಮುಖ ಚುನಾವಣಾ ಭರವಸೆಗಳಲ್ಲಿ ಒಂದಾಗಿದ್ದು, ಅದನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿರುವ ಪ್ರತಿಯೊಂದು ಭರವಸೆಯನ್ನೂ ಜಾರಿಗೊಳಿಸುತ್ತೇವೆ. ಏನಾಸಂ ಪಶ್ಚಿಮ ಬಂಗಾಳದಲ್ಲಿ ಖಂಡಿತವಾಗಿ ಜಾರಿಗೆ ಬರಲಿದೆ ಎಂದು ಅಧಿಕಾರಿ ಹೇಳಿದರು.

9 ಪ್ರಮುಖ ಕ್ಷೇತ್ರಗಳಿಗೆ ಸಾಮಾನ್ಯ ಕಾನೂನು: ಗುಜರಾತ್ ಏನಾಸಂ ಮಸೂದೆ-2026, ಅಸ್ಸಾಂ ಏನಾಸಂ ಕಾನೂನು ಹಾಗೂ ಉತ್ತರಾಖಂಡದ ಏನಾಸಂ ಕಾಯ್ದೆಯನ್ನು ಮಾದರಿಯಾಗಿ ತೆಗೆದುಕೊಂಡು ಈ ಮಸೂದೆ ರೂಪಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ವಿವಾಹ, ವಿಚ್ಛೇದನ, ಜೀವನಾಂಶ, ಆಸ್ತಿ ಹಂಚಿಕೆ, ಉತ್ತರಾಧಿಕಾರ, ದತ್ತು ಸ್ವೀಕಾರ, ಲಿವ್-ಇನ್ ಸಂಬಂಧಗಳು ಸೇರಿದಂತೆ ಕುಟುಂಬ ಕಾನೂನಿನ ಒಂಬತ್ತು ಪ್ರಮುಖ ಕ್ಷೇತ್ರಗಳನ್ನು ಒಂದೇ ಕಾನೂನು ಚೌಕಟ್ಟಿನಲ್ಲಿ ತರಲು ಸರ್ಕಾರ ಉದ್ದೇಶಿಸಿದೆ.

ಆದಿವಾಸಿ ಸಮುದಾಯಗಳಿಗೆ ವಿನಾಯಿತಿ: ರಾಜ್ಯದ ಆದಿವಾಸಿ, ಮೂಲನಿವಾಸಿ, ಬುಡಕಟ್ಟು ಹಾಗೂ ಸರ್ಕಾರ ಮಾನ್ಯತೆ ನೀಡಿರುವ ಕೆಲವು ಪ್ರಾಚೀನ ಸಮುದಾಯಗಳಿಗೆ ಏನಾಸಂನಿಂದ ವಿನಾಯಿತಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು. ಇದು ಉತ್ತರಾಖಂಡ ಮತ್ತು ಗುಜರಾತ್ ಮಾದರಿಯಲ್ಲಿರುವ ವಿನಾಯಿತಿಗಳಿಗೆ ಅನುಗುಣವಾಗಿರಲಿದೆ ಎಂದು ಹೇಳಿದರು.

ವಿಧಾನಸಭೆಯಲ್ಲಿ ಗದ್ದಲ: ಘೋಷಣೆಯ ನಂತರ ವಿರೋಧ ಪಕ್ಷವಾದ ತೃಣಮೂಲ ಕಾಂಗ್ರೆಸ್ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಪ್ರತಿಪಕ್ಷ ನಾಯಕ ರಿತಬ್ರತ ಬಂದೋಪಾಧ್ಯಾಯ ನೇತೃತ್ವದಲ್ಲಿ ಸದಸ್ಯರು ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಏನಾಸಂ ಕುರಿತು ಯಾರಿಗಾದರೂ ಆಕ್ಷೇಪಣೆ ಅಥವಾ ಸಲಹೆಗಳಿದ್ದರೆ ಸಮಿತಿಗೆ ಸಲ್ಲಿಸಬಹುದು ಎಂದು ತಿಳಿಸಿದರು. ಎಲ್ಲ ಅಭಿಪ್ರಾಯಗಳನ್ನು ಪರಿಗಣಿಸಿದ ಬಳಿಕವೇ ಸಮಿತಿ ತನ್ನ ಅಂತಿಮ ಶಿಫಾರಸುಗಳನ್ನು ಸಲ್ಲಿಸಲಿದೆ ಎಂದು ಭರವಸೆ ನೀಡಿದರು.

ಅತ್ಯಾಚಾರ-ಹತ್ಯೆ ಪ್ರಕರಣ: ಕೋರ್ಟ್ ತೀರ್ಪು

ಎರಡೇ ತಿಂಗಳಲ್ಲಿ ಗಲ್ಲು ಶಿಕ್ಷೆ

• **ಪುಣೆ:** ಮಹಾರಾಷ್ಟ್ರದಾದ್ಯಂತ ಸಾರ್ವಜನಿಕರ ಆಕ್ರೋಶ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದ್ದ ನಸ್ರಾಪುರ ಗ್ರಾಮದ ಮೂರು ವರ್ಷದ ಹೆಣ್ಣು ಮಗುವಿನ ಅಪಹರಣ, ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗೆ ಸೋಮವಾರ ಗಲ್ಲು ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಸ್.ಆರ್. ಸಾಳುಂಕೆ ತೀರ್ಪು ನೀಡಿದ್ದಾರೆ. ಇದು ಅಪರೂಪದಲ್ಲೇ ಅಪರೂಪದ ಪ್ರಕರಣ ಎಂದು ಬಣ್ಣಿಸಿರುವ ನ್ಯಾಯಾಲಯ, ಆರೋಪಿಯ ಕ್ರೂರ ಕೃತ್ಯ ಸಮಾಜದ ಆತ್ಮಸಾಕ್ಷಿಯನ್ನೇ ಬೆಚ್ಚಿಬೀಳಿಸಿದೆ ಎಂದು ಹೇಳಿದೆ.

ಅಪರಾಧದ ಹಿನ್ನೆಲೆ: ಮೇ 1ರಂದು ನಡೆದಿದ್ದ ಈ ಘಟನೆಗೆ ಸಂಬಂಧಿಸಿದಂತೆ ನ್ಯಾಯಾಲಯ ಜೂ.25ರಂದು ಆರೋಪಿ ಭೀಮರಾವ್ ಕಾಂಬ್ಳೆಯನ್ನು ಅಪರಾಧಿ ಎಂದು ಘೋಷಿಸಿತ್ತು. ಆರೋಪಿ, ಮಗುವಿಗೆ ತಿಂಡಿ ಕೊಡುವುದಾಗಿ ಮತ್ತು ಹಸುವಿನ ಕರುವನ್ನು ತೋರಿಸುವುದಾಗಿ ನಂಬಿಸಿ ಕೊಟ್ಟಿಗೆಯ ಕಡೆಗೆ ಕರೆದೊಯ್ದಿದ್ದನು. ಅಲ್ಲಿ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಬಾಯಿ ಮುಚ್ಚಿ ಮತ್ತು ಎದೆಗೆ ತೀವ್ರ ಗಾಯಮಾಡಿ ಅಮಾನುಷವಾಗಿ ಕೊಲೆ ಮಾಡಿದ್ದ.

ಅಪರಾಧದ ಇತಿಹಾಸ: ಆರೋಪಿಯ ವಯಸ್ಸನ್ನು ಪರಿಗಣಿಸಿ ಕರುಣೆ ತೋರಲು ನಿರಾಕರಿಸಿದ ನ್ಯಾಯಾಧೀಶ ಸಾಳುಂಕೆ, ಕಾಂಬ್ಳೆಯ ಕ್ರಿಮಿನಲ್ ಹಿನ್ನೆಲೆಯನ್ನು ಎತ್ತಿ ತೋರಿಸಿದ್ದಾರೆ. ಈ ಹಿಂದೆ 62 ವರ್ಷದ ವೃದ್ಧೆ, 17 ವರ್ಷದ ಯುವತಿ ಹಾಗೂ ಪ್ರಾಣಿಯ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿ ಸುಧಾರಣೆಗೆ ಅರ್ಹನಲ್ಲ ಎಂದು ಪ್ರಾಸಿಕ್ಯೂಷನ್ ವಾದಿಸಿತ್ತು. ಆರೋಪಿಯ ಇತಿಹಾಸದ ಹಿನ್ನೆಲೆಯಲ್ಲಿ ಕೋರ್ಟ್ ಗಲ್ಲು ಶಿಕ್ಷೆಯನ್ನು ಖಾಯಂಗೊಳಿಸಿದೆ.

ನಕಲಿ ಔಷಧಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಔಷಧ ನಿಯಮಗಳು, 1945ಕ್ಕೆ ಪ್ರಮುಖ ತಿದ್ದುಪಡಿ ತಂದಿದೆ. ನಿರ್ಣಾಯಕ ಹಾಗೂ ಜೀವ ರಕ್ಷಕ ಔಷಧಗಳ ವಿಭಾಗಗಳಿಗೆ ಟ್ರ್ಯಾಕ್ ಮತ್ತು ಟ್ರೇಸ್(ಪತ್ತೆ ಹಚ್ಚುವ) ತಂತ್ರಜ್ಞಾನವನ್ನು ಕಡ್ಡಾಯಗೊಳಿಸುವ ಮೂಲಕ, ಔಷಧ ಪೂರೈಕೆ ಸರಪಳಿಯನ್ನು ಸುರಕ್ಷಿತಗೊಳಿಸಲು ಸರ್ಕಾರ ಮುಂದಾಗಿದೆ. ಈ ಹೊಸ ನಿಯಮ ಸಾಮಾನ್ಯ ಗ್ರಾಹಕರು ಮತ್ತು ನಿಯಂತ್ರಕರು ಔಷಧಗಳನ್ನು ಬಳಸುವ ಮುನ್ನವೇ ಅವುಗಳ ನೈಜತೆಯನ್ನು ಸುಲಭವಾಗಿ ಪರಿಶೀಲಿಸಲು ಅನುವು ಮಾಡಿಕೊಡುತ್ತದೆ. ಆ ಕುರಿತ ವಿವರ ಇಲ್ಲಿದೆ.

ಗ್ರಾಹಕರ ಸಬಲೀಕರಣ

ಗ್ರಾಹಕರು ಮುದ್ರಿತ ಕ್ಯೂಆರ್ ಕೋಡ್ ಅನ್ನು ಡಿಜಿಟಲ್ ದೃಢೀಕರಣ ಪರಿಕರಗಳ ಮೂಲಕ ಸ್ಕ್ಯಾನ್ ಮಾಡುವ ಮೂಲಕ ಔಷಧದ ನೈಜತೆಯನ್ನು ಪರಿಶೀಲಿಸಬಹುದು. ಈ ಒಂಬತ್ತು ಪ್ರಮುಖ ದತ್ತಾಂಶಗಳನ್ನು ಪ್ರವೇಶಿಸುವುದರಿಂದ, ಬಳಕೆದಾರರು ಬಾಕ್ಸ್ ಮೇಲಿರುವ ಭೌತಿಕ ವಿವರಗಳನ್ನು ಡಿಜಿಟಲ್ ದಾಖಲೆಗಳೊಂದಿಗೆ ತಕ್ಷಣವೇ ಹೋಲಿಸಿ ನೋಡಬಹುದು. ಈ ಡಿಜಿಟಲ್ ದೃಢೀಕರಣ ಸಾಧನ, ತಡೆರಹಿತ ಪರಿಶೀಲನೆಯನ್ನು ಸಾಧ್ಯವಾಗಿಸುತ್ತದೆ. ಇದರಿಂದ ಯಾರು ಬೇಕಾದರೂ ಔಷಧದ ಪ್ರಯಾಣವನ್ನು ಪತ್ತೆಹಚ್ಚಬಹುದು ಮತ್ತು ಅದರ ಮೂಲವನ್ನು ಖಚಿತಪಡಿಸಿಕೊಳ್ಳಬಹುದು.



ಒಳಪಡುವ ಔಷಧಗಳ ವ್ಯಾಪ್ತಿ

ಈ ನಿಯಮ ಆರಂಭದಲ್ಲಿ ದೇಶದ ಕೇವಲ ಅಗ್ರ 300 ಫಾರ್ಮಾಸ್ಯುಟಿಕಲ್ ಬ್ರ್ಯಾಂಡ್‌ಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಹೊಸ ತಿದ್ದುಪಡಿಯಲ್ಲಿ, ತೀವ್ರ ನಿಯಂತ್ರಣಕ್ಕೆ ಒಳಪಡುವ ನಾಲ್ಕು ನಿರ್ಣಾಯಕ ವಿಭಾಗಗಳ ಔಷಧಗಳನ್ನೂ ಒಳಗೊಳ್ಳುವಂತೆ ಶೆಡ್ಯೂಲ್ ಎಚ್2ನ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಈ ಟ್ರ್ಯಾಕ್ ಮತ್ತು ಟ್ರೇಸ್ ಚೌಕಟ್ಟು ಇನ್ನು ಮುಂದೆ ಎಲ್ಲಾ ಲಸಿಕೆಗಳು, ಕ್ಯಾನ್ಸರ್ ವಿರೋಧಿ ಔಷಧಗಳು ಮತ್ತು ಆಂಟಿಮೈಕ್ರೋಬಿಯಲ್‌ಗಳನ್ನು ಒಳಗೊಳ್ಳಲಿದೆ. ಇದರೊಂದಿಗೆ, ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್ (ಎನ್‌ಡಿಪಿಎಸ್) ಕಾಯ್ದೆ, 1985ರ ಅಡಿಯ ಬರುವ ಎಲ್ಲಾ ಮಾದಕ ದ್ರವ್ಯಗಳು ಮತ್ತು ಸೈಕೋಟ್ರೋಪಿಕ್ ಔಷಧಗಳನ್ನು ಈ ಕಡ್ಡಾಯ ಕ್ಯೂಆರ್ ಕೋಡ್ ವ್ಯಾಪ್ತಿಗೆ ತರಲಾಗಿದೆ.

ಪ್ಯಾಕೇಜಿಂಗ್‌ನ ಹೊಸ ನಿಯಮ

ಹೊಸದಾಗಿ ತಿದ್ದುಪಡಿ ಮಾಡಲಾದ ನಿಬಂಧನೆಗಳಲ್ಲಿ, ಔಷಧ ತಯಾರಕರು ತಮ್ಮ ಉತ್ಪನ್ನಗಳ ಮೇಲೆ ಬಾರ್ ಕೋಡ್ ಅಥವಾ ಕ್ವಿಕ್ ರೆಸ್ಪಾನ್ಸ್(ಕ್ಯೂಆರ್) ಕೋಡ್ ಅನ್ನು ಮುದ್ರಿಸುವುದು ಅಥವಾ ಅಂಟಿಸುವುದು ಇನ್ನು ಮುಂದೆ ಕಾನೂನುಬದ್ಧವಾಗಿ ಕಡ್ಡಾಯ. ಈ ಡಿಜಿಟಲ್ ಟ್ಯಾಗ್ ಅನ್ನು ಔಷಧದ ಪ್ರಾಥಮಿಕ ಪ್ಯಾಕೇಜಿಂಗ್ ಲೇಬಲ್ ಮೇಲೆ ನೇರವಾಗಿ ಅಳವಡಿಸಬೇಕು. ಒಂದು ವೇಳೆ ಮೊದಲ ಪ್ಯಾಕೇಜಿಂಗ್ ತುಂಬಾ ಚಿಕ್ಕದಾಗಿದ್ದರೆ ಅಥವಾ ಸ್ಥಳಾವಕಾಶದ ಕೊರತೆ ಇದ್ದರೆ, ತಯಾರಕರು ದ್ವಿತೀಯ ಪ್ಯಾಕೇಜಿಂಗ್ ಲೇಬಲ್ ಮೇಲೆ ಕ್ಯೂಆರ್ ಕೋಡ್ ಮುದ್ರಿಸಲು ಅವಕಾಶವಿದೆ. ಈ ವ್ಯವಸ್ಥೆ ಪೂರೈಕೆ ಸರಪಳಿಯ ಪ್ರತಿಯೊಂದು ಹಂತದಲ್ಲೂ ಔಷಧವನ್ನು ಪತ್ತೆಹಚ್ಚಲು ಮತ್ತು ದೃಢೀಕರಿಸಲು ಸಹಾಯ ಮಾಡುತ್ತದೆ.

» ಹೊಸ ಕ್ಯೂಆರ್ ನಿಯಮ 9 ನಿರ್ದಿಷ್ಟ ದತ್ತಾಂಶ ಅಂಶಗಳನ್ನು ಒಳಗೊಂಡಿದೆ.

» ಈ ವ್ಯವಸ್ಥೆ ಮೊದಲು ಕೇವಲ ಅಗ್ರ 300 ಫಾರ್ಮಾ ಬ್ರ್ಯಾಂಡ್‌ಗಳನ್ನು ಒಳಗೊಂಡಿತ್ತು.


» ಪ್ರಸ್ತುತ ನಿಯಂತ್ರಣ ಚೌಕಟ್ಟನ್ನು 4 ನಿರ್ಣಾಯಕ ಔಷಧ ವಿಭಾಗಗಳಿಗೆ ವಿಸ್ತರಿಸಲಾಗಿದೆ.

» ಲಸಿಕೆಗಳು, ಕ್ಯಾನ್ಸರ್ ವಿರೋಧಿ ಮತ್ತು ಎನ್‌ಡಿಪಿಎಸ್ ಔಷಧಗಳ ಅನುಷ್ಠಾನ 1 ಜುಲೈ 2027.

» ಆಂಟಿಮೈಕ್ರೋಬಿಯಲ್ ಔಷಧಗಳ ನಿಯಮ 1 ಜುಲೈ 2028ರಿಂದ ಕಡ್ಡಾಯ

ನಕಲಿ, ಮಾದಕವಸ್ತುಗಳ ವಿರುದ್ಧ ಹೋರಾಟ





ಯಾವುದೇ ಒಂದೇ ಕ್ರಮ ಅಕ್ರಮ ವ್ಯಾಪಾರವನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲದಿದ್ದರೂ, ಈ ಸುಧಾರಿತ ಪತ್ತೆಹಚ್ಚುವಿಕೆ ಕಾರ್ಯವಿಧಾನ ಪ್ರಬಲ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ. ಅಧಿಕೃತ ಪಿಐಬಿ ವರದಿ ಪ್ರಕಾರ, ಈ ವ್ಯವಸ್ಥೆ ನಿಯಂತ್ರಕ ಮೇಲ್ವಿಚಾರಣೆಯನ್ನು ಬಲಪಡಿಸುತ್ತದೆ. ಅಷ್ಟೇ ಅಲ್ಲದೆ, ಕಳಪೆ ಗುಣಮಟ್ಟದ ಅಥವಾ ನಕಲಿ ಆಂಟಿಮೈಕ್ರೋಬಿಯಲ್‌ಗಳನ್ನು ಸುಲಭವಾಗಿ ಗುರುತಿಸುವ ಮೂಲಕ ಆಂಟಿ-ಮೈಕ್ರೋಬಿಯಲ್ ರೆಸಿಸ್ಟೆನ್ಸ್ (ಎಎಂಆರ್) ವಿರುದ್ಧದ ರಾಷ್ಟ್ರ ಮಟ್ಟದ ಹೋರಾಟಕ್ಕೆ ಉತ್ತೇಜನ ನೀಡುತ್ತದೆ. ಇನ್ನು, ಮಾದಕ ಮತ್ತು ಸೈಕೋಟ್ರೋಪಿಕ್ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ಬಿಗಿಗೊಳಿಸುವ ಮೂಲಕ ಸರ್ಕಾರದ ವ್ಯಾಪಕ ನಶಾ ಮುಕ್ತ ಭಾರತ ಅಭಿಯಾನಕ್ಕೂ ಈ ಯೋಜನೆ ನೆರವಾಗುತ್ತದೆ. ಔಷಧ ಉದ್ಯಮ ಈ ಬದಲಾವಣೆಗೆ ಹೊಂದಿಕೊಳ್ಳಲು ಸಚಿವಾಲಯ ಹಂತ-ಹಂತದ ಕಾಲಾವಕಾಶವನ್ನು ಪರಿಚಯಿಸಿದೆ. ಲಸಿಕೆಗಳು, ಕ್ಯಾನ್ಸರ್ ವಿರೋಧಿ ಔಷಧಗಳು ಮತ್ತು ಎನ್‌ಡಿಪಿಎಸ್ ಔಷಧಗಳ ನಿಯಮಗಳು 1 ಜುಲೈ 2027ರಿಂದ ಜಾರಿಗೆ ಬರಲಿದ್ದು, ಆಂಟಿಮೈಕ್ರೋಬಿಯಲ್ ಔಷಧಗಳ ನಿಯಮಗಳು 1 ಜುಲೈ 2028ರಿಂದ ಜಾರಿಗೆ ಬರಲಿವೆ. ಈ ದಿನಾಂಕಗಳ ನಂತರ ಯಾವುದೇ ಔಷಧದ ಮೇಲೆ ಪರಿಶೀಲಿಸಬಹುದಾದ ಕ್ಯೂಆರ್ ಕೋಡ್ ಇಲ್ಲದಿದ್ದರೆ ಅಥವಾ ಸ್ಕ್ಯಾನ್ ಮಾಡಿದ ದತ್ತಾಂಶ ಭೌತಿಕ ಪ್ಯಾಕೇಜಿಂಗ್‌ಗೆ ಹೊಂದಿಕೆಯಾಗದಿದ್ದರೆ ತಕ್ಷಣವೇ ನಿಯಂತ್ರಕ ಅಧಿಕಾರಿಗಳಿಗೆ ದೂರು ನೀಡಬೇಕು. ಸರ್ಕಾರದ ಈ ಕ್ರಮ ಹೆಚ್ಚಿನ ಪಾರದರ್ಶಕತೆಗೆ ಅವಕಾಶ ಮಾಡಿಕೊಡಲಿದೆ.

ಕಿರುಸುದ್ದಿ

ಅಮೆರಿಕ-ಇರಾನ್ ಶಾಂತಿ ಮಾತುಕತೆ ಬಗ್ಗೆ ಗೊಂದಲ

• **ದುಬೈ:** ಅಮೆರಿಕ ಮತ್ತು ಇರಾನ್ ನಡುವಿನ ದಾಳಿಗಳು ತಾತ್ಕಾಲಿಕವಾಗಿ ನಿಂತಿದ್ದರೂ, ಮುಂದಿನ ಹಂತದ ಮಾತುಕತೆಗಳ ಕುರಿತು ಎರಡೂ ದೇಶಗಳ ನಡುವೆ ಭಿನ್ನಾಭಿಪ್ರಾಯ ಮುಂದುವರಿದಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಕತಾರ್‌ನ ದೋಹಾದಲ್ಲಿ ಉಭಯ ದೇಶಗಳ ಪ್ರತಿನಿಧಿಗಳ ಸಭೆ ನಡೆಯಲಿದೆ ಎಂದು ಘೋಷಿಸಿದ್ದಾರೆ. ಆದರೆ, ಇರಾನ್‌ನ ಹಿರಿಯ ಅಧಿಕಾರಿ ಕಾಜೆಂ ಘರೀಬಾಬಾದಿ ಯಾವುದೇ ಸಭೆ ನಿಗದಿಯಾಗಿಲ್ಲ ಎಂದು ತಿಳಿಸಿದ್ದಾರೆ. ಈ ನಡುವೆ, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹಾರ್ಮುಜ್ ಜಲಸಂಧಿ ಪ್ರದೇಶದಲ್ಲಿ ಉದ್ವಿಗ್ನತೆ ಮುಂದುವರಿದಿದೆ. ಇತ್ತೀಚಿನ ದಾಳಿಗಳಿಂದ ತೈಲ ಮಾರುಕಟ್ಟೆಯಲ್ಲಿ ಆತಂಕ ಉಂಟಾಗಿದ್ದರೂ, ಮಧ್ಯಂತರ ಒಪ್ಪಂದದ ನಂತರ ತೈಲ ಬೆಲೆಗಳಲ್ಲಿ ಇಳಿಕೆ ಕಂಡುಬಂದಿದೆ. ಇರಾನ್ ಅಧ್ಯಕ್ಷ, ಕತಾರ್‌ನಲ್ಲಿ ಸ್ಥಗಿತಗೊಂಡಿರುವ 6 ಬಿಲಿಯನ್ ಡಾಲರ್ ಮೊತ್ತದ ಇರಾನ್ ಆಸ್ತಿಗಳು ಬಿಡುಗಡೆ ಆಗಲಿವೆ ಎಂದಿದ್ದಾರೆ. ಆದರೆ ಅಮೆರಿಕ ಮತ್ತು ಕತಾರ್ ಇದನ್ನು ಇನ್ನೂ ಅಧಿಕೃತವಾಗಿ ದೃಢಪಡಿಸಿಲ್ಲ.

ಖಮೇನಿ ಅಂತ್ಯಕ್ರಿಯೆಯಲ್ಲಿ ಭಾರತದಿಂದ ಇಬ್ಬರು ಭಾಗಿ

• **ಹೊಸದಿಲ್ಲಿ:** ಬಿಹಾರದ ಗವರ್ನರ್ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಮತ್ತು ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರ ಮಾರ್ಗರಿಟಾ ಅವರು ಭಾರತ ಸರ್ಕಾರದ ಪರವಾಗಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಸೈಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಖಮೇನಿ ಅವರ ಅಂತ್ಯಕ್ರಿಯೆಗೆ ಹಾಜರಾಗಲು ಇರಾನ್ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಿತ್ತು. ಅನೇಕ ಇರಾನಿನ ನಗರಗಳಲ್ಲಿ ಜು.4-9ರವರೆಗೆ ನಿಗದಿಯಾಗಿರುವ ಅಂತ್ಯಕ್ರಿಯೆಯ ಕಾರ್ಯಕ್ರಮದಲ್ಲಿ ಲಕ್ಷಾಂತರ ಶೋಕತಪ್ತರು ಮತ್ತು ಹಲವಾರು ವಿದೇಶಿ ಗಣ್ಯರು ಭಾಗವಹಿಸುವ ನಿರೀಕ್ಷೆಯಿದೆ.

ಶಬರಿಮಲೆ ಚಿನ್ನ ಕಳವು: ಹೊಸ ಪ್ರಕರಣಕ್ಕೆ ಸಮ್ಮತಿ

• **ಕೊಚ್ಚಿ:** ಶಬರಿಮಲೆ ದೇವಾಲಯದ ದ್ವಾರಪಾಲಕ ಮೂರ್ತಿಗಳ ಚಿನ್ನ ನಾಪತ್ತೆ ಪ್ರಕರಣದಲ್ಲಿ ಮಾಜಿ ಟಿಡಿಬಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ವಿರುದ್ಧ ಸಾಕ್ಷ್ಯ ಲಭ್ಯವಾಗಿರುವ ಹಿನ್ನೆಲೆಯಲ್ಲಿ ಹೊಸ ಕ್ರಿಮಿನಲ್ ಪ್ರಕರಣ ದಾಖಲಿಸಲು ವಿಶೇಷ ತನಿಖಾ ತಂಡಕ್ಕೆ(ಎಸ್‌ಐಟಿ) ಕೇರಳ ಹೈಕೋರ್ಟ್ ಅನುಮತಿ ನೀಡಿದೆ.

ಪ್ರತಿಪಕ್ಷ ನಾಯಕರಾಗಿ ಖರ್ಗೆ ಪುನರ್ ನೇಮಕ

• **ಹೊಸದಿಲ್ಲಿ:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಹಾಗೂ ಮರು ಆಯ್ಕೆಯಾದ ಎಂಟು ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭೆ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ಹೊಸ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದರು. ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿ ಖರ್ಗೆ ಅವರು ಮರು ನೇಮಕವಾಗಿದ್ದಾರೆ.


ಸಂವಿಧಾನದ ಪ್ರತಿಯನ್ನು ಕೈಯಲ್ಲಿ ಹಿಡಿದು ಖರ್ಗೆ ಅವರು ಸಭಾಪತಿಯವರ ಕಚೇರಿಯಲ್ಲಿ ಪ್ರತ್ಯೇಕವಾಗಿ ಪ್ರಮಾಣವಚನ ಸ್ವೀಕರಿಸಿದರು. ಬಳಿಕ ಪ್ರತಿಕ್ರಿಯಿಸಿದ ಅವರು, ಜನರ ಆಶಯಗಳು, ಸಮಸ್ಯೆಗಳು ಮತ್ತು ಧ್ವನಿಯನ್ನು ಸದನದಲ್ಲಿ ಪ್ರಾಮಾಣಿಕವಾಗಿ ಪ್ರತಿನಿಧಿಸುವುದರ ಜತೆಗೆ ಸರ್ಕಾರವನ್ನು ಉತ್ತರದಾಯಿತ್ವಕ್ಕೆ ಒಳಪಡಿಸುವ ಕಾರ್ಯವನ್ನು ಮುಂದುವರಿಸುವುದಾಗಿ ಹೇಳಿದರು.

ಖರ್ಗೆ ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಜೂ.25ರಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಅವರು ಜೂ.26ರಿಂದ ಪ್ರತಿಪಕ್ಷ ನಾಯಕ ಸ್ಥಾನದಿಂದ ಹೊರಗುಳಿದಿದ್ದರು. ಆದರೆ, ಮರು ಆಯ್ಕೆಯಾದ ನಂತರ ರಾಜ್ಯಸಭೆ ಸಭಾಪತಿ ಜೂ.26ರಿಂದಲೇ ಅವರಿಗೆ ಮತ್ತೆ ರಾಜ್ಯಸಭೆ ಪ್ರತಿಪಕ್ಷ ನಾಯಕ ಸ್ಥಾನದ ಮಾನ್ಯತೆ ನೀಡಿದ್ದಾರೆ.

ಇದೇ ವೇಳೆ ಇತರ 7 ಸದಸ್ಯರಾದ ಮಾನ್‌ಸಿಂಗ್ ಮೆರಾಮನ್ ಪರ್ಮಾರ್, ತರುಣ್ ಚುಗ್, ಅಲ್ಕಾ ಸಿಂಗ್, ಜಿತೇಂದ್ರ ಕಾಂಜಿಯಾ, ರಾಜೇಂದ್ರ ಜೈನ್, ಎಂ. ನಾಗರಾಜು ಹಾಗೂ ಅಧಿಕರಿಮಯುಂ ಶಾರದಾ ದೇವಿ ಅವರು ಪ್ರಮಾಣವಚನ ಸ್ವೀಕರಿಸಿದರು. ನಾಲ್ವರು ಹಿಂದಿಯಲ್ಲಿ, ಒಬ್ಬರು ಕನ್ನಡದಲ್ಲಿ, ಒಬ್ಬರು ಪಂಜಾಬಿಯಲ್ಲಿ ಹಾಗೂ ಒಬ್ಬರು ಮಣಿಪುರಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಭಾರತದ ಸೇನಾ ಬಲಕ್ಕೆ ಸಿಂಧೂರ ಸಾಕ್ಷಿ: ದ್ವಿವೇದಿ

• **ಹೊಸದಿಲ್ಲಿ:** ಆಪರೇಷನ್ ಸಿಂಧೂರ್ ಸಶಸ್ತ್ರ ಸಂಘರ್ಷಗಳು ಅಲ್ಪಾವಧಿಯವಾಗಿದ್ದು, ತಂತ್ರಾತ್ಮಕವಾಗಿ ನಡೆಸಬಹುದೆಂಬುದನ್ನು ಸ್ಪಷ್ಟಪಡಿಸಿದೆ. ಅಲ್ಲದೆ, ಭಯೋತ್ಪಾದನೆಗೆ ಭಾರತದ ಪ್ರತಿಕ್ರಿಯೆಯಲ್ಲಿ ಹೊಸ ಕ್ರಮಕ್ಕೆ ಇದು ನಿದರ್ಶನವಾಗಿದೆ ಎಂದು ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ.



ಭಾರತವು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಲಷ್ಕರ್-ಎ-ತೈಬಾ ಮತ್ತು ಜೈಶ್-ಎ-ಮೊಹಮ್ಮದ್ ನಡೆಸುತ್ತಿರುವ ಭಯೋತ್ಪಾದಕ ಉಡಾವಣಾ ಕೇಂದ್ರಗಳ ಮೇಲೆ ನಿಖರವಾದ ದಾಳಿಗಳನ್ನು ನಡೆಸಿತು. ಈ ದಾಳಿಗಳು ನಾಗರಿಕ ಮತ್ತು ಮಿಲಿಟರಿ ಕೇಂದ್ರಗಳನ್ನು ದಾಟಿ ಬಹಾವಲ್ಪುರ್ ಸೇರಿದಂತೆ ಒಂಬತ್ತು ಭಯೋತ್ಪಾದಕ ನೆಲೆಗಳನ್ನು ನಾಶಪಡಿಸಿದ್ದವು.

ಪ್ರಸ್ತುತ ನಡೆಯುತ್ತಿರುವ ಸಂಘರ್ಷಗಳು ದೀರ್ಘಕಾಲದಿಂದ ನಡೆಯುತ್ತಿರುವ ಜಗತ್ತಿನಲ್ಲಿ, ಆಪರೇಷನ್ ಸಿಂಧೂರ್ ಸಂಘರ್ಷಗಳು ಸಣ್ಣ, ತೀವ್ರವಾದ, ತಂತ್ರಜ್ಞಾನ-ಚಾಲಿತ ಮತ್ತು ನಿರಂತರ ಮಾಹಿತಿ ಪರಿಶೀಲನೆಯಲ್ಲಿ ಹೋರಾಡುವ ಹೆಚ್ಚಿನ ಸಾಧ್ಯತೆಯೂ ಇದೆ ಎಂದು ತೋರಿಸಿಕೊಟ್ಟಿದೆ ಎಂದರು.

ಭಯೋತ್ಪಾದಕರು ಮತ್ತು ಭಯೋತ್ಪಾದಕರನ್ನು ಪ್ರಾಯೋಜಿಸುವ ಅಥವಾ ಸಕ್ರಿಯಗೊಳಿಸುವವರ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂಬುದು ನಿಸ್ಸಂದಿಗ್ಧವಾದ ಸಂದೇಶವಾಗಿದೆ ಎಂದು ಹೇಳಿದರು.

ಜರ್ಮನಿಯಲ್ಲಿ ಗುಂಡಿನ ದಾಳಿಗೆ 6 ಮಂದಿ ಸಾವು

• **ಬರ್ಲಿನ್:** ಜರ್ಮನಿಯ ಉತ್ತರ ಭಾಗದಲ್ಲಿರುವ ಸ್ಟಾಡೆ ನಗರದ ಯೂತ್ ವೆಲ್‌ಫೇರ್ ಸೆಂಟರ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಆರು ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದ್ದು, ಈ ಪೈಕಿ ಓರ್ವ ಪ್ರಮುಖ ಶಂಕಿತನಾಗಿದ್ದಾನೆ ಎಂದು ಪೊಲೀಸ್ ತಿಳಿಸಿದ್ದಾರೆ. ದಾಳಿಕೋರನ ಕೃತ್ಯದ ಹಿಂದಿನ ಉದ್ದೇಶ ಏನು ಎಂಬುದರ ಬಗ್ಗೆ ಪೊಲೀಸರು ಇನ್ನೂ ಯಾವುದೇ ಮಾಹಿತಿ ನೀಡಿಲ್ಲ. ಮುಖ್ಯ ಶಂಕಿತನನ್ನು ಬಂಧಿಸಲಾಗಿದೆ. ಮತ್ತೊಬ್ಬರನ್ನು ಭಾಗಿಯಾಗಿರುವ ಶಂಕೆಯ ಮೇಲೆ ಪೊಲೀಸ್ ಕ್ರಮಗಳಿಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಘಟನೆಯು ಹ್ಯಾಂಬರ್ಗ್ ಪಶ್ಚಿಮಕ್ಕೆ ಸುಮಾರು 50,000 ಜನರು ಇದ್ದ ಪ್ರದೇಶದಲ್ಲಿ ಘಟನೆ ಸಂಭವಿಸಿದೆ. ಈ ಸೆಂಟರ್‌ನಲ್ಲಿ ಗರ್ಭಿಣಿಯರಿಗೆ ಅಥವಾ ನವಜಾತ ಶಿಶುಗಳಿಗೆ ಮತ್ತು ತಾಯಂದಿರಿಗೆ ತಾತ್ಕಾಲಿಕ ವಸತಿ ಸೌಕರ್ಯವನ್ನು ಒಳಗೊಂಡಿದೆ. 6 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಈ ಪೈಕಿ ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಜರ್ಮನ್ ಸುದ್ದಿ ಸಂಸ್ಥೆ ಡಿಪಿಎ ವರದಿ ಮಾಡಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ಮಾರಣಾಂತಿಕ ಗುಂಡಿನ ದಾಳಿಯ ನಂತರ ಸಾರ್ವಜನಿಕರಿಗೆ ಯಾವುದೇ ಅಪಾಯವಿಲ್ಲ. ಆತಂಕಪಡುವುದು ಬೇಡ ಎಂದು ಪೊಲೀಸರು ಹೇಳಿದ್ದಾರೆ.

ಜರ್ಮನಿಯ ಬಂದೂಕು ಕಾನೂನುಗಳು ಅಮೆರಿಕದಲ್ಲಿರುವುದಕ್ಕಿಂತ ಹೆಚ್ಚು ನಿರ್ಬಂಧಿತವಾಗಿವೆ, ಮತ್ತು ಸಾಮೂಹಿಕ ಗುಂಡಿನ ದಾಳಿಗಳು ಅಪರೂಪವಾಗಿವೆ.

ಸರಳಾ ಹತ್ಯೆ ಕೇಸ್: ಯಾಸಿನ್ ವಿರುದ್ಧ ಚಾರ್ಜ್‌ಶೀಟ್

• **ಶ್ರೀನಗರ:** 36 ವರ್ಷಗಳ ನಂತರ ಜಮ್ಮು-ಕಾಶ್ಮೀರ ಪೊಲೀಸ್ ರಾಜ್ಯ ತನಿಖಾ ಸಂಸ್ಥೆ(ಎಸ್‌ಐಎ) ಕಾಶ್ಮೀರಿ ಪಂಡಿತ್ ನರ್ಸ್(ಶುಶ್ರೂಷಕಿ) ಸರಳಾ ಭಟ್ ಅವರ ಹತ್ಯೆ ಮತ್ತು ಅಪಹರಣ ಪ್ರಕರಣ ಸಂಬಂಧ ಚಾರ್ಜ್‌ಶೀಟ್ ಸಲ್ಲಿಸಿದೆ. ಈ ಪ್ರಕರಣದಲ್ಲಿ ಜಮ್ಮು-ಕಾಶ್ಮೀರ ಲಿಬರೇಶನ್ ಫ್ರಂಟ್ ಮುಖ್ಯಸ್ಥ ಯಾಸಿನ್ ಮಲಿಕ್ ಮತ್ತು ಅವನ ನಾಲ್ವರು ಸಹಚರರನ್ನು ಹೆಸರಿಸಿದೆ.

ಭಯೋತ್ಪಾದನಾ ದಾಳಿ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪ್ರಯತ್ನದಲ್ಲಿ ಇದು ಐತಿಹಾಸಿಕ ಮೈಲಿಗಲ್ಲು ಎಂದು ಕರೆದ ಎಸ್‌ಐಎ, 2024ರಲ್ಲಿ ಪ್ರಕರಣವನ್ನು ಪುನಃ ತೆರೆದ ನಂತರ ಜಮ್ಮುವಿನ ವಿಶೇಷ ನ್ಯಾಯಾಲಯದ ಮುಂದೆ 737 ಪುಟಗಳ ಚಾರ್ಜ್‌ಶೀಟ್ ಅನ್ನು ಸಲ್ಲಿಸಿದೆ. ಎಸ್‌ಐಎ ಪ್ರಕಾರ, ಆರೋಪಿಗಳು ಅಪಹರಣ ಮತ್ತು ಕ್ರೂರ ಹತ್ಯೆಯನ್ನು ಯೋಜಿಸಿ ಕಾರ್ಯಗತಗೊಳಿಸಿದ್ದಾರೆ.

ಮುಂಗಾರು ಮಳೆ ಅಬ್ಬರ: ಅರುಣಾಚಲ, ಸಿಕ್ಕಿಂನಲ್ಲಿ ಜನಜೀವನ ಅಸ್ತವ್ಯಸ್ತ

ಮುಂಬೈನ ಉಪನಗರಗಳು ಜಲಾವೃತ

• **ಮುಂಬೈ:** ದೇಶದಲ್ಲಿ ಕೆಲವೆಡೆ ಮುಂಗಾರು ಬಿರುಸು ಪಡೆದಿದ್ದು, ಈಶಾನ್ಯ ರಾಜ್ಯಗಳು ಮಳೆಯ ಆರ್ಭಟಕ್ಕೆ ತಂಗಾಲಾಗಿವೆ. ಅರುಣಾಚಲ ಪ್ರದೇಶ, ಅಸ್ಸಾಂ ಮತ್ತು ಸಿಕ್ಕಿಂನಲ್ಲಿ ಸುರಿದ ಭಾರಿ ಮಳೆ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಬಿಡದೆ ಸುರಿದ ಭಾರೀ ಮಳೆಯಿಂದಾಗಿ ದಿಢೀರ್ ಪ್ರವಾಹ, ಭೂಕುಸಿತ ಹಾಗೂ ಭಾರಿ ಜಲಾವೃತಕ್ಕೆ ಕಾರಣವಾಗಿದ್ದು, ರಕ್ಷಣಾ ಕಾರ್ಯಾಚರಣೆಗಳನ್ನು ಚುರುಕುಗೊಳಿಸಲಾಗಿದೆ.

ಭಾನುವಾರ ತಡರಾತ್ರಿಯಿಂದ ಸೋಮವಾರ ಮುಂಜಾನೆ 4:00 ಗಂಟೆಯ ಅವಧಿಯಲ್ಲಿ ಮುಂಬೈನ ಉಪನಗರಗಳಲ್ಲಿ ಭಾರಿ ಮಳೆಯಾಗಿದ್ದು, ಮುಲುಂಡ್‌ನ ವೀಣಾ ನಗರದಲ್ಲಿ 160.4 ಮಿಮೀ ಹಾಗೂ ವರ್ಸೋವಾದಲ್ಲಿ 156.8 ಮಿಮೀ ಮಳೆ ದಾಖಲಾಗಿದೆ. ಈ ಭಾರಿ ಮಳೆಯಿಂದಾಗಿ ಎಲ್‌ಬಿಎಸ್ ರಸ್ತೆ ಜಲಾವೃತಗೊಂಡಿದ್ದು, ಅಂಧೇರಿ ಸಬ್‌ವೇ ಸಂಪೂರ್ಣವಾಗಿ ಮುಳುಗಡೆಯಾಗಿ ವಾಹನ ಸವಾರರು ತೀವ್ರ ಸಂಕಷ್ಟ ಎದುರಿಸಿದರು.

ಈಶಾನ್ಯ ರಾಜ್ಯಗಳಲ್ಲಿ ಭೂಕುಸಿತ: ಅರುಣಾಚಲ ಪ್ರದೇಶದ 12 ಜಿಲ್ಲೆಗಳಲ್ಲಿ ಸುರಿದ ಧಾರಾಕಾರ ಮಳೆ, ರಸ್ತೆ ಮತ್ತು ಸೇತುವೆಗಳನ್ನು ಹಾನಿಗೊಳಿಸಿದ್ದು, ಮೂವರು ಪ್ರಾಣ ಕಳೆದುಕೊಂಡಿದ್ದಾರೆ. ದಂಬುಕ್‌ನ ಸಿಸಿರಿ ನದಿಯ ದ್ವೀಪದಲ್ಲಿ ಸಿಲುಕಿದ್ದ ನಾಲ್ವರನ್ನು ಭಾರತೀಯ ವಾಯುಪಡೆ ಹೆಲಿಕಾಪ್ಟರ್ ಬಳಸಿ ಯಶಸ್ವಿಯಾಗಿ ರಕ್ಷಿಸಿದೆ. ಇದರೊಂದಿಗೆ, ಸಿಕ್ಕಿಂನಲ್ಲಿ ಸುರಿದ ಭಾರಿ ಮಳೆ ವಿವಿಧೆಡೆ ಭೂಕುಸಿತವನ್ನು ಉಂಟುಮಾಡಿದ್ದು, ಗ್ರಾಮೀಣ ಭಾಗಗಳು ರಸ್ತೆ ಸಂಪರ್ಕ ಕಳೆದುಕೊಂಡಿವೆ.



ಅಸ್ಸಾಂನ ಧೇಮಾಜಿ ಜಿಲ್ಲೆಯ ಆರ್ಟೆಪಥರ್ ಮತ್ತು ಸಿಮೆನ್ ಚಾಪರಿ ನಿಲ್ದಾಣಗಳ ನಡುವೆ ಭಾರೀ ಮಳೆಯಿಂದ ಮುರಿದು ಬಿದ್ದ ರೈಲ್ವೆ ಸೇತುವೆ.

ಐಎಂಡಿ ಎಚ್ಚರಿಕೆ: ಭಾರತೀಯ ಹವಾಮಾನ ಇಲಾಖೆ (ಐಎಂಡಿ), ಸಿಕ್ಕಿಂನ ಮಂಗನ್, ನಾಮ್ಚಿ, ಪಾಕ್ಯಾಂಗ್ ಮತ್ತು ಸೊರೆಂಗ್ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಿದೆ. ಮುಂದಿನ 24 ರಿಂದ 48 ಗಂಟೆಗಳ ಕಾಲ (ಸೋಮವಾರದಿಂದ) ಮುಂಬೈ ಹಾಗೂ ಈಶಾನ್ಯ ಭಾರತದಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ನೀಡಲಾಗಿದೆ.

ಸೀಶೆಲ್ಸ್‌ನಲ್ಲಿ ಮಹಾತ್ಮರ ಪ್ರತಿಮೆಗೆ ಪ್ರಧಾನಿ ಮೋದಿ ಗೌರವ

ಗಾಂಧೀಜಿ ಚಿಂತನೆ ಪ್ರೇರಣಾದಾಯಿ

• **ವಿಕ್ಟೋರಿಯಾ(ಸೀಶೆಲ್ಸ್):** ಮಹಾತ್ಮ ಗಾಂಧೀಜಿ ದಂತಕಥೆ ಸೀಶೆಲ್ಸ್‌ನಲ್ಲಿ ತುಂಬು ಗೌರವಿಸಲ್ಪಟ್ಟಿತ್ತು ಮತ್ತು ಇದರ ಪ್ರತೀಕವೆಂಬಂತೆ ಇಲ್ಲಿನ ಪೀಸ್ ಪಾರ್ಕ್‌ನಲ್ಲಿ ಅಳವಡಿಸಲಾಗಿರುವ ಗಾಂಧೀಜಿ ಪ್ರತಿಮೆಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ನಮನಗಳನ್ನು ಸಲ್ಲಿಸಿದರು. ಅಲ್ಲಿ ನೆರೆದಿದ್ದ ಭಾರತೀಯ ಸಂಜಾತರನ್ನು ಭೇಟಿಯಾದರು ಮತ್ತು ಪುಟ್ಟ ಮಕ್ಕಳೊಂದಿಗೆ ಮುಕ್ತಮುಕ್ತವಾಗಿ ಸಂವಾದ ನಡೆಸಿದರು.

ಶಾಂತಿಸ್ಥಾಪನೆ, ನ್ಯಾಯದಾನ ಮತ್ತು ಘನತೆಗಳ ಸಾಕಾರಕ್ಕಾಗಿ ಜನರನ್ನು ಒಗ್ಗಟ್ಟಾಗಿಸಿದ್ದ ಗಾಂಧೀಜಿಯವರ ಆದರ್ಶಗಳು ತಲೆಮಾರುಗಳಿಂದ ಜನರಿಗೆ ಮಾದರಿಯಾಗಿವೆ. ಶ್ರೇಷ್ಠ ಜಗತ್ತಿನ ಸಾಕಾರ ನಿಟ್ಟಿನಲ್ಲಿ ನಮ್ಮ ಸಾಮೂಹಿಕ ಪ್ರಯತ್ನಗಳಿಗೆ ಅವರ ಚಿಂತನೆಗಳು ನಿರಂತರ ಪ್ರೇರಣಾದಾಯಿಯಾಗಿವೆ ಎಂದು ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮಗಳಿಗೆ ಪೋಸ್ಟ್ ಹಾಕಿದ್ದಾರೆ.

ಪೀಸ್ ಪಾರ್ಕ್‌ಗೆ ಭೇಟಿ ನೀಡುವ ಮುನ್ನ ಪ್ರಧಾನಿ ಮೋದಿ ಅವರು ಅರುಳ್‌ಮಿಗು ನವಶಕ್ತಿ ವಿನಾಯಗರ್ ಕ್ಷೇತ್ರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ಇದಕ್ಕೂ ಮುನ್ನ ವಿಕ್ಟೋರಿಯಾದಲ್ಲಿ ಭಾರತೀಯ ಸಮುದಾಯದ ತಂಡದೊಂದಿಗೆ ಚರ್ಚಿಸಿದ ಪ್ರಧಾನಿ ಮೋದಿ ಅವರೊಂದಿಗೆ ಫೋಟೋ ತೆಗೆಸಿಕೊಂಡರು. ಸೀಶೆಲ್ಸ್‌ನ ಭಾರತೀಯ ಸಂಜಾತರೊಂದಿಗೆ ಅದ್ಭುತ ಸಂವಾದ ನಡೆಯಿತು.



ಮುಂಬರುವ ಶತಮಾನ ಭಾರತೀಯ ಶತಮಾನ

> ಇಂದಿನ ಡಿಜಿಟಲ್ ಹಾಗೂ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಮನುಷ್ಯನ ಆತ್ಮಶೋಧದ ಪ್ರಶ್ನೆ ಅತ್ಯಂತ ಮುಖ್ಯವಾಗಿದೆ. ಇದಕ್ಕೆ ಗುರುದೇವ ರಾನಡೆ ಅವರ ಕೃತಿಗಳು ಮರು ಜಾಗೃತಿ ಮೂಡಿಸಲಿವೆ.
> ■ ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವ



» ಗುರುದೇವ ರಾನಡೆ ಅಕಾಡೆಮಿ ಶತಮಾನೋತ್ಸವ
» 28 ಸಂಪುಟಗಳ ಕೃತಿ ಲೋಕಾರ್ಪಣೆ
» ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಭಾಗಿ

• **ಬೆಳಗಾವಿ:** ಭಾರತವು ತನ್ನ ಭವ್ಯ ದಾರ್ಶನಿಕ ಪರಂಪರೆ ಮತ್ತು ಸಾಂಸ್ಕೃತಿಕ ಮರು ಜಾಗೃತಿಯ ಮೂಲಕ ಇಡೀ ಜಗತ್ತಿಗೆ ಮಾರ್ಗದರ್ಶನ ನೀಡಲಿದ್ದು, ಮುಂಬರುವ ಶತಮಾನವು 'ಭಾರತೀಯ ಶತಮಾನ'ವಾಗಿ ಮಾನ್ಯತೆ ಪಡೆಯಲಿದೆ ಎಂದು ಕೇಂದ್ರ ಸಾಂಸ್ಕೃತಿಕ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.

ಸೋಮವಾರ ನಗರದ ಗೋಗಟೆ ಕಾಲೇಜಿನ ಕೆ.ಕೆ. ಗೋಣುಗೋಪಾಲ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಬೆಳಗಾವಿಯ ಗುರುದೇವ ರಾನಡೆ ಮಂದಿರದ ತುಲನಾತ್ಮಕ ತತ್ವಶಾಸ್ತ್ರ ಧಾರ್ಮಿಕ ಅಕಾಡೆಮಿಯ ಶತಮಾನೋತ್ಸವ ಉದ್ಘಾಟನೆ, ಗುರುದೇವ ರಾನಡೆ ಅವರ ಸಂಪೂರ್ಣ ಬರಹಗಳನ್ನೊಳಗೊಂಡ 28 ಸಂಪುಟಗಳ ಮಹಾಗ್ರಂಥಗಳನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸತ್ಯದರ್ಶನದ ಮರುಪ್ರತಿಪಾದನೆ: ಜಗತ್ತು ಇಂದು ಭಾರತವನ್ನು ಹೊಸ ದೃಷ್ಟಿಕೋನ, ಆಕಾಂಕ್ಷೆ ಮತ್ತು ಗೌರವದಿಂದ ನೋಡುತ್ತಿದೆ. ಇಂತಹ ಸಂದರ್ಭದಲ್ಲಿ ಗುರುದೇವ ರಾನಡೆ ಅವರ ಕೃತಿಗಳು ಲೋಕಾರ್ಪಣೆಗೊಳ್ಳುತ್ತಿರುವುದು ಕೇವಲ ಗ್ರಂಥಗಳ ಬಿಡುಗಡೆಯಲ್ಲ, ಬದಲಿಗೆ ಇದು ಸತ್ಯದರ್ಶನದ ಅನುಭೂತಿ ಹಾಗೂ ವಿಚಾರ ಪರಂಪರೆಯ ಮರು ಪ್ರತಿಪಾದನೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಉತ್ತರ ಪ್ರಾಂತದ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಮಾತನಾಡಿ, ಸಮಾಜದಲ್ಲಿ ಇಂದು ಅಧ್ಯಾತ್ಮ ಹಾಗೂ ನೈತಿಕತೆಗೆ ಬೆಂಬಲ ಸಿಗುವುದು ಅಪರೂಪವಾಗುತ್ತಿರುವ ಕಾಲದಲ್ಲೂ ರಾನಡೆ ಅಕಾಡೆಮಿ ಕಳೆದ ಹಲವಾರು ವರ್ಷಗಳಿಂದ ಶ್ಲಾಘನೀಯ ಕೆಲಸ ಮಾಡುತ್ತಿದೆ. ಅಧ್ಯಾತ್ಮಿಕ ದೃಷ್ಟಿಯಲ್ಲಿ ರಾನಡೆ ಅವರು ಮೇರು ಸದೃಶ ವ್ಯಕ್ತಿತ್ವ ಹೊಂದಿದವರು ಎಂದರು. ಮಾಜಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ದೀನ್ ದಯಾಳ್ ಉಪಾಧ್ಯಾಯ ಸಂಶೋಧನಾ ಸಂಸ್ಥೆ ನಿರ್ದೇಶಕರು ಅತುಲ್ ಜೈನ್, ನವದೆಹಲಿ ಡಾ.ಸಿ.ಎಂ.ತ್ಯಾಗರಾಜ್, ಡಾ.ವಿಷ್ಣುಕಾಂತ್ ಚಟ್ಪಲ್ಲಿ, ಡಾ.ಆನಂದ ದೇಶಪಾಂಡೆ, ವಿವಿಧ ವಿವಿ ಕುಲಪತಿಗಳು, ಸುಧೀಂದ್ರ ಗಣಾಚಾರಿ, ರಾಜೇಂದ್ರ ದೇಸಾಯಿ ಇದ್ದರು.

ವಕಾಲತ್ತು ವಹಿಸದಿರಲು ನಿರ್ಧಾರ

ಪುಟ ೧ ➡ **ಆರೋಪಿಗಳಿಗೆ ಮತ್ತೆರಡು ವಾರ ನ್ಯಾಯಾಂಗ ಬಂಧನ:** ಕಳೆದ ವಾರ ಬಂಧಿತರಾದ ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವ್ ಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್ ಸೇರಿದಂತೆ ಎಂಟು ಮಂದಿಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ವಿಶೇಷ ಭ್ರಷ್ಟಾಚಾರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಪೊಲೀಸರು ಹೆಚ್ಚಿನ ಕಸ್ಟಡಿಯನ್ನು ಕೋರದ ಹಿನ್ನೆಲೆಯಲ್ಲಿ ನ್ಯಾಯಾಲಯವು ಅವರನ್ನು ಇನ್ನೂ ಎರಡು ವಾರ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

> ಇದು ಹಿಂದು ಸಮಾಜದ ಆಕ್ರೋಶಕ್ಕೆ ಸಾಕ್ಷಿ. ಧರ್ಮಕ್ಕೆ ವಿರುದ್ಧವಾಗಿ ನಡೆವವರು, ದ್ರೋಹ ಎಸಗುವವರನ್ನು ಹಿಂದು ಸಮಾಜ ಕ್ಷಮಿಸುವುದಿಲ್ಲ ಎಂಬ ಶಕ್ತಿಶಾಲಿ ಸಂದೇಶವನ್ನು ಹಿಂದು ಸಮಾಜ ಅಪರಾಧಿಗಳಿಗೆ ನೀಡಿದೆ.
> ■ ಪ್ರದೀಪ್ ಭಂಡಾರಿ, ಬಿಜೆಪಿ ರಾಷ್ಟ್ರೀಯ ವಕ್ತಾರ

5.50 ಕೋಟಿ ಜನರ ಮನೆಗಳಿಗೆ ಹೋಗಿ ಸಹಾಯ: ಮುಖ್ಯಮಂತ್ರಿ

ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸುದ್ದಿಗೋಷ್ಠಿ

• **ಬೆಂಗಳೂರು:** ರಾಜ್ಯದಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಹಿನ್ನೆಲೆಯಲ್ಲಿ 5.50 ಕೋಟಿ ಜನರಿಗೆ ಮನೆ ಮನೆಗೆ ಹೋಗಿ ಸಹಾಯ ಮಾಡಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರಿಗೆ ಕಂದಾಯ ಇಲಾಖೆ ವತಿಯಿಂದ ಶಾಶ್ವತ ನಿವಾಸ ಪ್ರಮಾಣಪತ್ರ ನೀಡಲು ಉಪ ತಹಸೀಲ್ದಾರ್ ಅವರಿಗೆ ಅಧಿಕಾರ ನೀಡಿ ಆದೇಶ ಹೊರಡಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತ್ ಹಾಗೂ ವಾರ್ಡ್‌ಗಳಲ್ಲಿ ಸಹಾಯ ಕೇಂದ್ರ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮಾಹಿತಿ ಹಂಚಿಕೊಂಡರು.

ರಾಜ್ಯದಲ್ಲಿ ಒಟ್ಟು 49,320 ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಅಗತ್ಯ ದಾಖಲೆ ಡೌನ್ಲೋಡ್ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಯಾರೆಲ್ಲಾ ಜಾತಿ ಪ್ರಮಾಣಪತ್ರದಲ್ಲಿ ದೂರವಾಣಿ ಸಂಖ್ಯೆ ಸರಿಯಾಗಿ ನೀಡಿದ್ದೀರಿ ಅವರು ವಾಟ್ಸ್‌ಆ್ಯಪ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದು ಎಂದು ವಿವರಿಸಿದರು.

ರಾಜಕೀಯ ಪಕ್ಷಗಳಿಂದ ನೇಮಕಗೊಂಡಿರುವ ಬಿಎಲ್‌ಎಗಳು ಕೂಡ ನಿಮಗೆ ಈ ಅರ್ಜಿ ಸಲ್ಲಿಕೆಯಲ್ಲಿ ನೆರವು ನೀಡಬಹುದು. ಸರ್ಕಾರ ಈಗಾಗಲೇ 5.50 ಕೋಟಿ ಜನರಿಗೆ ಈಗಾಗಲೇ ಜಾತಿ ಪ್ರಮಾಣಪತ್ರ, ಅಧಿಕೃತವಾಗಿ ನೀಡಿರುವ ದಾಖಲೆ ನಮ್ಮ ಬಳಿ ಇದೆ. ಇದರಲ್ಲಿ 2,54,95,767 ಹಿಂದುಳಿದ ವರ್ಗದ ಪ್ರಮಾಣಪತ್ರ, 2,94,51,027 ಎಸ್‌ಸಿ ಹಾಗೂ ಎಸ್‌ಟಿ ಪ್ರಮಾಣಪತ್ರ ವಿತರಿಸಲಾಗಿದೆ. ಇವುಗಳನ್ನು ಡೌನ್ಲೋಡ್ ಮಾಡಿಕೊಳ್ಳಲು ಅವಕಾಶವಿದೆ ಎಂದು ತಿಳಿಸಿದರು.

ಮತದಾನದ ಹಕ್ಕು ಕಳೆದುಕೊಳ್ಳುವವರು ಮುಂದೆ ಸರ್ಕಾರದ ಸೌಲಭ್ಯ ಸಿಗುವುದಿಲ್ಲ. ಪಶ್ಚಿಮ ಬಂಗಾಳದಲ್ಲಿ ಪಡಿತರ ಹಂಚಿಕೆಯಲ್ಲಿ ಮತದಾರರಿಗೆ ಮಾತ್ರ ನೀಡಲಾಗುತ್ತಿದೆ. ಇದೇ ರೀತಿ ಬೇರೆ ರಾಜ್ಯಗಳಲ್ಲೂ ಆದೇಶ ಹೊರಡಿಸಲಾಗಿದೆ. ನೀವು ಮುಂದಿನ ದಿನಗಳಲ್ಲಿ ಮತದಾನದ ಹಕ್ಕು ಉಳಿಸಿಕೊಳ್ಳದಿದ್ದರೆ ಗ್ಯಾರಂಟಿ ಯೋಜನೆಗಳು ಸೇರಿದಂತೆ ಪಿಂಚಣಿ ಹಾಗೂ ರಾಜ್ಯ ಸರ್ಕಾರದ ಇತರೆ ಯೋಜನೆಗಳು ಪಡೆಯಲು ತೊಂದರೆ ಆಗಲಿದೆ ಎಂದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮತದಾರ ಪಟ್ಟಿ ಪರಿಷ್ಕರಣೆಗೆ ಒಂದು ವರ್ಷ, ಆರು ಕೋಟಿ ಹೆಸರು ಡಿಲೀಟ್
– ಪತ್ರಿಕೆಗಳಲ್ಲಿ ಸುದ್ದಿ ಶೀರ್ಷಿಕೆ
– ಅಂದರೆ ಅಷ್ಟು ಮಂದಿ ಮತದಾರರಲ್ಲದ ಮತದಾರರು ಅಂದಿನಿಂದ ಇಂದಿನವರೆಗೆ ಮತದಾನ ಮಾಡಿದ್ದಾರೆ ಅಂತ ತಾನೆ? ಇದೇ ನಿಜವಾದ ಮತ ಚೋರಿ!

ದಿನ ಭವಿಷ್ಯ

ಮೇಷ ಕ್ಲಿಷ್ಟಕರ ವಿಷಯ ಜಟಿಲಗೊಳಿಸಿ ಸಮಸ್ಯೆಗೆ ಸಿಲುಕುವಿರಿ. ಸಂತೋಷ ಪಡಲು ನಿಮ್ಮ ಮನಸ್ಥಿತಿ ಬದಲಿಸುವುದೂ ಅಗತ್ಯ. ಜಗಳಕ್ಕೆ ಹೋಗಬೇಡಿ.

ವೃಷಭ ನಿಮ್ಮ ಉತ್ತಮ ನಿರ್ವಹಣೆಗೆ ಸೂಕ್ತ ಪ್ರತಿಫಲ ಸಿಗಲಿದೆ. ಸಂತಾನ ಅಪೇಕ್ಷಿತರಿಗೆ ಶುಭಪ್ರದ ಬೆಳವಣಿಗೆ. ಆದಾಯ ಹೆಚ್ಚಳ.

ಮಿಥುನ ಪರಿಸ್ಥಿತಿ ನಿಮ್ಮ ಮಿತಿಯೊಳಗಿರಲಿ. ವ್ಯವಹಾರದಲ್ಲಿ ಯಶಸ್ಸು. ಪ್ರೇಮಿಯಿಂದ ಪೂರಕ ಸ್ಪಂದನ. ಬಾಂಧವ್ಯ ವೃದ್ಧಿಗೆ ಅವಕಾಶ.

ಕಟಕ ವೃತ್ತಿಯಲ್ಲಿ ಪ್ರಗತಿ. ಬಾಕಿ ಉಳಿದ ಕಾರ್ಯ ಪೂರ್ಣ. ಹೊಸ ಉದ್ಯೋಗವಕಾಶ. ಪ್ರೀತಿಯಲ್ಲೂ ಪೂರಕ ಬೆಳವಣಿಗೆ.

ಸಿಂಹ ನೀವು ಅಚ್ಚರಿಪಡುವ ಬೆಳವಣಿಗೆ ಉಂಟಾದೀತು. ವೃತ್ತಿಯಲ್ಲಿ ಕಿರುಕುಳ ಎದುರಿಸುವಿರಿ. ಕುಟುಂಬ ಸಂಬಂಧ ಬಲಗೊಳಿಸಿ. ಭಾವುಕತೆ ನಿಯಂತ್ರಿಸಿ.

ಕನ್ಯಾ ಮನೆಗೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳಬೇಕಾದೀತು. ಆರ್ಥಿಕ ಪ್ರಗತಿ. ಅನಾರೋಗ್ಯ ನಿವಾರಣೆ. ಹಳೆ ಸ್ನೇಹಿತರ ಸಂಪರ್ಕದಿಂದ ಖುಷಿ.

ತುಲಾ ನಿಮ್ಮ ಧೋರಣೆಗೆ ಕೆಲವರ ಅತೃಪ್ತಿ. ಇದರಿಂದ ಇರುಸುಮುರುಸು ಉಂಟಾಗುವ ಪ್ರಸಂಗ. ಆತ್ಮೀಯರ ಸಂಗದಲ್ಲಿ ನಿರಾಳತೆ.

ವೃಶ್ಚಿಕ ದಿನವಿಡೀ ಉತ್ಸಾಹ. ಹೋರಾಟಕ್ಕೆ ಮುಗಿದು ನಿರಾಳತೆಯ ಭಾವ. ಬಯಸಿದ ಗುರಿ ಸಾಧಿಸುವಿರಿ. ಆದಾಯದಲ್ಲಿ ಹೆಚ್ಚಳ.

ಧನು ಚಿಂತೆ ತಂದಿದ್ದ ವಿಷಯ ಇತ್ಯರ್ಥ. ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಆರ್ಥಿಕ ವ್ಯವಹಾರದಲ್ಲಿ ಲಾಭ. ಕೌಟುಂಬಿಕ ಸೌಹಾರ್ದ.

ಮಕರ ಯಾರದೋ ಮಾತು ಮನಸ್ಸು ಕೆಡಿಸಬಹುದು. ಅಂತಹ ಮಾತಿಗೆ ಆಸ್ಪದ ಕೊಡದಂತೆ ವರ್ತಿಸಿರಿ. ದೌರ್ಬಲ್ಯಕ್ಕೆ ಸುಲಭ ಬಲಿಯಾಗಬೇಡಿ.

ಕುಂಭ ಆದಾಯದಲ್ಲಿ ಹೆಚ್ಚಳ. ಆಪ್ತರ ಜತೆಗಿನ ಭಿನ್ನಮತ ಸುಗಮ ಪರಿಹಾರ. ಕಠಿಣ ಕಾರ್ಯ ಇಂದು ಕೈಗೆತ್ತಿಕೊಳ್ಳಬೇಡಿ. ಕಾದುನೋಡಿರಿ.

ಮೀನ ವೃತ್ತಿ ಒತ್ತಡ ಅಧಿಕವಿದ್ದರೂ ಕುಟುಂಬದ ಸಂಗದ ಆತ್ಮೀಯ ಕಾಲ ಕಳೆಯುವ ಅವಕಾಶವೂ ಸಿಗಲಿದೆ. ಆರ್ಥಿಕ ಒತ್ತಡ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30
ಅದೃಷ್ಟ ಸಂಖ್ಯೆ: 4,9,2,6

ವಿಬಿ ಜಿ ರಾಮ್ ಜಿ ಯೋಜನೆಗೆ ಗಾಂಧಿ ಹೆಸರು ಸೇರಿಸಿ: ಖಂಡ್ರೆ



• **ಬೆಂಗಳೂರು:** ಕೇಂದ್ರ ಸರ್ಕಾರವು ವಿಬಿ ಜಿ ರಾಮ್ ಜಿ ಯೋಜನೆಗೆ ಮಹಾತ್ಮ ಗಾಂಧಿ ಹೆಸರು ಸೇರಿಸಬೇಕು ಇಲ್ಲವೇ ದೇಶದಲ್ಲಿರುವ 2.68 ಲಕ್ಷ ಗ್ರಾಮ ಪಂಚಾಯತ್‌ಗಳಿಗೆ ಮಹಾತ್ಮ ಗಾಂಧಿ ಹೆಸರಿಡಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಒತ್ತಾಯಿಸಿದ್ದಾರೆ. ಸೋಮವಾರ ದಿಲ್ಲಿಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮ ಸ್ವರಾಜ್ಯದ ಪ್ರತಿಪಾದಕರಾಗಿದ್ದ ಮಹಾತ್ಮ ಗಾಂಧಿ ಹೆಸರು ಕೈಬಿಟ್ಟಿರುವ ಕೇಂದ್ರ ಸರ್ಕಾರ, ಮಹಾತ್ಮ ಗಾಂಧಿ ವಿಬಿ ಜಿ ರಾಮ್ ಜಿ ಎಂದು ಮರು ನಾಮಕರಣ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಗಾಂಧೀಜಿ ಅವರು ಭಾರತ ಹಳ್ಳಿಗಳ ದೇಶವಾಗಿದ್ದು, ದೇಶದ ಆತ್ಮ ಇರುವುದೇ ಗ್ರಾಮಗಳಲ್ಲಿ ಎಂದು ಹೇಳಿದ್ದರು. ಗ್ರಾಮಗಳ ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಆಗದು ಎಂದು ಪ್ರತಿಪಾದಿಸಿದ್ದರು. ಇಂತಹ ಮಹಾಪುರುಷರ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ, ಈ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟು, ಸತ್ಯ, ಶಾಂತಿ, ಅಹಿಂಸೆ ಎಂಬ ಅಸ್ತ್ರದಿಂದ ಭಾರತಾಂಬೆಯನ್ನು ಬಂಧಮುಕ್ತಗೊಳಿಸಿದ ಮಹಾತ್ಮನಿಗೆ ನೈಜ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ ಎಂದು ಖಂಡ್ರೆ ತಿಳಿಸಿದ್ದಾರೆ.

ಎಲ್‌ನಿನೊ ತಂದ ಆತಂಕ | ಮುಂಗಾರು ಹಂಗಾಮಿನಲ್ಲಿ ಶೇ.30 ಮಾತ್ರ ಬಿತ್ತನೆ

ರಾಜ್ಯದಲ್ಲಿ ಬರದ ಕರಾಳ ಛಾಯೆ

▸ ವೀರಣ್ಣ ಬಲಿಗಾರ

• **ಬೆಂಗಳೂರು:** ಎಲ್‌ನಿನೊ ಪ್ರಭಾವದಿಂದಾಗಿ ಮುಂಗಾರು ಮಳೆ ಗಣನೀಯವಾಗಿ ಇಳಿಕೆಯಾಗಿದ್ದು, ರಾಜ್ಯದಲ್ಲಿ ಬರಗಾಲದ ಛಾಯೆ ಆವರಿಸಿದೆ. ಬೆಳೆ ನಷ್ಟದ ಆತಂಕ ಹೆಚ್ಚಾಗಿದೆ. ಕೇವಲ ಶೇ.30ರಷ್ಟು ಮಾತ್ರ ಮುಂಗಾರು ಹಂಗಾಮಿನ ಬಿತ್ತನೆಯಾಗಿದೆ.

ಮುಂಗಾರು ಹಂಗಾಮಿಗೆ ನಿಗದಿಪಡಿಸಿರುವ 84.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೇವಲ ಶೇ.30ರಷ್ಟು ಮಾತ್ರ ಬಿತ್ತನೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಶೇ.42 ರಷ್ಟು ಇತ್ತು. ರಾಜ್ಯದಲ್ಲಿ ಇದುವರೆಗೆ ಸಾಮಾನ್ಯಕ್ಕಿಂತ ಶೇ.43 ರಷ್ಟು ಕಡಿಮೆ ಮಳೆ ದಾಖಲಾಗಿದೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಬಿತ್ತನೆ ಮಾಡಿದ ಅಲ್ಪಾವಧಿಯ ಮುಂಗಾರು ಬೆಳೆಗಳು ಈಗಾಗಲೇ ಹಾನಿಯ ಅಂಚಿನಲ್ಲಿವೆ.

ಮೇ ಅಂತ್ಯ, ಜೂನ್ ಆರಂಭದಲ್ಲಿ ಸಾಧಾರಣ ಮಳೆ ಆಗಿದ್ದರಿಂದ ರೈತರು ಬಿತ್ತನೆ ಮಾಡಿದ್ದು, ಕೃಷಿ ಇಲಾಖೆಯ ಮಾಹಿತಿ ಪ್ರಕಾರ, ಧಾರವಾಡ, ಗದಗ, ಹಾವೇರಿ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳು ಮಾತ್ರ ಬಿತ್ತನೆ ಗುರಿಯನ್ನು ಶೇ.60 ಕ್ಕಿಂತ ಹೆಚ್ಚು ಸಾಧಿಸಿವೆ, ಆದರೂ ಸಮರ್ಪಕ ಮಳೆಯಿಲ್ಲದ ಕಾರಣ ಬೆಳೆಗಳು ಒಣಗುತ್ತಿವೆ. ವಾರದೊಳಗೆ ಮಳೆ ಬಾರದಿದ್ದರೆ ಬೆಳೆ ನಷ್ಟವನ್ನು ಎದುರಿಸುವ ಸಾಧ್ಯತೆ ಇದೆ.

ಮಳೆ ಆಶ್ರಿತ ಪ್ರದೇಶಗಳಲ್ಲಿ ಬಿತ್ತನೆ

ಬೆಳೆ	2025	2026	ಬಿತ್ತನೆ ಗುರಿ
ಭತ್ತ	0.62	0.67	2.38
ಜೋಳ	0.22	0.16	0.51
ರಾಗಿ	0.02	0.02	7.88
ಮೆಕ್ಕೆಜೋಳ	7.67	4.93	13.09
ತೊಗರಿ	4.60	2.22	14.63
ಉದ್ದು	0.64	0.44	0.74
ಹೆಸರುಕಾಳು	3.43	3.01	4.34
ಅವರೆ	0.53	0.02	0.23
ಇತರೆ	0.58	0.71	2.49
ಒಟ್ಟು	18.31	12.18	46.29

ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕ್ರಮವಾಗಿ ಶೇ.41 ಮತ್ತು ಶೇ.36ರಷ್ಟು ಮಳೆ ಕೊರತೆಯಾಗಿದ್ದು, ಉತ್ತರ ಒಳನಾಡಿನ 13 ಜಿಲ್ಲೆಗಳಲ್ಲಿ ಮಳೆ ಕೊರತೆ ಶೇ.78 ರಿಂದ ಶೇ.99 ರವರೆಗೆ ದಾಖಲಾಗಿದೆ.

ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶೇ.12.86 ರಿಂದ ಶೇ.30 ರಷ್ಟು ಮಾತ್ರ ಬಿತ್ತನೆ ಪೂರ್ಣಗೊಂಡಿದೆ. ಮೈಸೂರು ಜಿಲ್ಲೆಯಲ್ಲಿ ಇದುವರೆಗೆ ಕೇವಲ ಶೇ.41 ರಷ್ಟು ಬಿತ್ತನೆ ಮಾತ್ರ ನಡೆದಿದೆ.

> ಎಲ್‌ನಿನೊ ಪ್ರಭಾವ ದೀರ್ಘಕಾಲ ಇರಲಿದ್ದು, ಜುಲೈ 1 ರಿಂದ ರಾಜ್ಯದಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಆದರೆ ಕಳೆದ ವರ್ಷಕ್ಕಿಂತ ಮಳೆ ಪ್ರಮಾಣ ಕಡಿಮೆಯಾಗಲಿದೆ.
> ■ ಸಿ.ಎಸ್. ಪಾಟೀಲ, ಹವಮಾನ ಇಲಾಖೆಯ ಹಿರಿಯ ವಿಜ್ಞಾನಿ



ಮುಂದಿನ ಒಂದು ವಾರದೊಳಗೆ ಉತ್ತಮ ಮಳೆಯಾದರೆ ಕನಿಷ್ಠ ಶೇ.50 ರಷ್ಟು ಬೆಳೆಗಳನ್ನು ಉಳಿಸಬಹುದು. ಇಲ್ಲದಿದ್ದರೆ ರೈತರು ಮರುಬಿತ್ತನೆ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು ಎಂದು ಕೃಷಿ ತಜ್ಞರು ತಿಳಿಸಿದ್ದಾರೆ. ಕಳೆದ ವರ್ಷ ಮುಂಗಾರು ಆರಂಭದ ಮೊದಲ 10 ದಿನಗಳಲ್ಲಿ ಮಳೆ ಕೊರತೆಯಿದ್ದರೂ, ನಂತರ ಉತ್ತಮ ಮಳೆಯಾಗಿ 853 ಮಿ.ಮೀ. ಸಾಮಾನ್ಯ ಮಳೆಗಿಂತ 882 ಮಿ.ಮೀ. ಮಳೆ ದಾಖಲಾಗಿತ್ತು.

ಜಲಾಶಯಗಳಲ್ಲಿ ನೀರಿನ ಪ್ರಮಾಣ ಇಳಿಕೆ: ಮುಂಗಾರು ಮಳೆ ಕೊರತೆಯಿಂದ ರಾಜ್ಯದ 14 ಪ್ರಮುಖ ಜಲಾಶಯಗಳಲ್ಲಿನ ನೀರಿನ ಪ್ರಮಾಣ ವೇಗವಾಗಿ ಕುಸಿಯುತ್ತಿದೆ. ಒಟ್ಟು 896 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯವಿರುವ ಜಲಾಶಯಗಳಲ್ಲಿ ಸುಮಾರು 206 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಜಲಾಶಯಗಳಿಗೆ ಹರಿದು ಬರುವ ನೀರಿನ ಪ್ರಮಾಣ ಕಡಿಮೆಯಾಗಿದೆ. ರಾಜ್ಯದ ಜಲಾಶಯಗಳಲ್ಲಿ ಒಟ್ಟು ಸಾಮರ್ಥ್ಯದ ಕೇವಲ 23 ರಷ್ಟು ನೀರು ಮಾತ್ರ ಉಳಿದಿದೆ.

ಸರ್ಕಾರದಿಂದ ಮುಂಜಾಗ್ರತ ಕ್ರಮ: ಮುಂಗಾರು ಮಳೆ ಕ್ಷೀಣಿಸಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮುಂಜಾಗ್ರತೆ ವಹಿಸಿದ್ದು, ಬರ ನಿರ್ವಹಣೆಗೆ ಈಗಾಗಲೇ ಜಿಲ್ಲೆಗಳ ಮೇಲುಸ್ತುವಾರಿಯನ್ನು ಸಚಿವರಿಗೆ ವಹಿಸಲಾಗಿದ್ದು, ಸಿಎಂ ಡಿ.ಕೆ ಶಿವಕುಮಾರ್ ಅಧಿಕಾರಿಗಳ ಜತೆಗೆ ಸಭೆ ನಡೆಸಿದ್ದಾರೆ.

ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವಸಿದ್ಧತೆಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಸನ್ನದ್ಧರಾಗುವಂತೆ ಕರೆ ನೀಡಿದ್ದಾರೆ.

ಇಂದಿನಿಂದ ಎಸ್‌ಐಆರ್

ಪುಟ ೧ ➡ ಈಗಾಗಲೇ ಶೇ.91.61 ಮ್ಯಾಪಿಂಗ್ ಮಾಡಲಾಗಿದೆ. ಮನೆ-ಮನೆಗೆ ಭೇಟಿ ನೀಡುವ ಪ್ರಕ್ರಿಯೆಯಲ್ಲಿ ಬಿಎಲ್‌ಒಗಳು ತಮಗೆ ನಿಯೋಜಿಸಲಾದ ಮತಗಟ್ಟೆ ವ್ಯಾಪ್ತಿಯಲ್ಲಿರುವ ಪ್ರತಿ ಮನೆಗೂ ಖುದ್ದಾಗಿ ಭೇಟಿ ನೀಡಿ, ಹೆಸರಿರುವ ಎಲ್ಲಾ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸುತ್ತಾರೆ. ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಹಿ ಮಾಡಿದ ನಂತರ, ಹೆಚ್ಚಿನ ಪ್ರಕ್ರಿಯೆ ಮತ್ತು ಡಿಜಿಟಲೀಕರಣಕ್ಕಾಗಿ ಬೂತ್ ಮಟ್ಟದ ಅಧಿಕಾರಿಗಳು ಅವುಗಳನ್ನು ಸಂಗ್ರಹಿಸುತ್ತಾರೆ. ವಿತರಣಾ ಪ್ರಕ್ರಿಯೆಯ ಸಮಯದಲ್ಲಿ, ಸ್ಟಿಕರ್ ಅಂಟಿಸಲಾಗುತ್ತದೆ. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಸಂಗ್ರಹಿಸಲು ಬೂತ್ ಮಟ್ಟದ ಅಧಿಕಾರಿಗಳು ಅಗತ್ಯವಿರುವಲ್ಲಿ ಮನೆಗಳಿಗೆ ಕನಿಷ್ಠ 3 ಬಾರಿ ಭೇಟಿ ನೀಡುತ್ತಾರೆ ಎಂದು ಅನ್ಬುಕುಮಾರ್ ವಿವರಿಸಿದರು.

ಎಸ್‌ಐಆರ್ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕ

ಪುಟ ೧ ➡ ಈ ಎಲ್ಲಾ ಪ್ರಕ್ರಿಯೆಯ ಮಾಹಿತಿಯನ್ನು ಎಲ್ಲಾ ರೀತಿಯ ಸಾಮಾಜಿಕ ವೇದಿಕೆಯಲ್ಲಿ, ಮತದಾರರ ಗಮನಕ್ಕೆ ತಂದೇ ಮಾಡಲಾಗುವುದು ಎಂದು ಅನ್ಬುಕುಮಾರ್ ತಿಳಿಸಿದರು. ಕರಡು ಮತದಾರ ಪಟ್ಟಿ ಬಿಡುಗಡೆಯ ನಂತರ ಅನುಮಾನಗಳಿದ್ದರೆ ಮತದಾರರಿಗೆ ನೋಟಿಸ್ ನೀಡಿ, ಗುರುತಿಸಲಾದ 12 ದಾಖಲೆಗಳಲ್ಲಿ ಪಡೆಯಲಾಗುತ್ತದೆ. ಗಣತಿ ನಮೂನೆಗಳನ್ನು ಭರ್ತಿ ಮಾಡಲು ಆನ್‌ಲೈನ್‌ನಲ್ಲೂ ವ್ಯವಸ್ಥೆ ಕಲ್ಪಿಸಲಾಗಿದ್ದು, ಆಯೋಗದ ಅಧಿಕೃತ ವೆಬ್‌ಸೈಟ್ voters.eci.gov.in ಅಥವಾ ECINET ಮೊಬೈಲ್ ಆ್ಯಪ್ ಮೂಲಕ ಭರ್ತಿ ಮಾಡಬಹುದಾಗಿದೆ ಎಂದು ಹೇಳಿದರು.

ಮಾದರಿ ಚುನಾವಣೆ: ಭಾರತ ನಂ.1

ಪುಟ ೧ ➡ ಈ ವ್ಯವಸ್ಥೆಯೇ ಭಾರತೀಯ ಚುನಾವಣಾ ಪ್ರಕ್ರಿಯೆಯನ್ನು ವಿಶ್ವದಲ್ಲೇ ಅತ್ಯಂತ ವಿಶ್ವಾಸಾರ್ಹ ಹಾಗೂ ಪಾರದರ್ಶಕವಾಗಿಸಿದೆ ಎಂದು ಅವರು ಹೇಳಿದರು.

ಬಿಎಲ್‌ಒಗಳಿಗೆ ಸಿಇಸಿ ಸಂದೇಶ: ಇದಕ್ಕೂ ಮೊದಲು ಶ್ರೀನಗರದಿಂದ ಸುಮಾರು 12 ಕಿ.ಮೀ. ದೂರದಲ್ಲಿರುವ ಬಡ್ಗಾಮ್ ಜಿಲ್ಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬೂತ್ ಮಟ್ಟದ ಅಧಿಕಾರಿಗಳನ್ನು (ಬಿಎಲ್‌ಒ) ಉದ್ದೇಶಿಸಿ ಮಾತನಾಡಿದರು. ಚುನಾವಣಾ ವ್ಯವಸ್ಥೆಯ ಯಶಸ್ಸಿನಲ್ಲಿ ಬಿಎಲ್‌ಒಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಶ್ಲಾಘಿಸಿದರು. ಬಿಎಲ್‌ಒಗಳು ಪ್ರಜಾಪ್ರಭುತ್ವದ ಸ್ತಂಭಗಳಾಗಿದ್ದಾರೆ. ಮತದಾರರ ಮಾಹಿತಿಯನ್ನು ನಿಖರವಾಗಿ ನಿರ್ವಹಿಸುವುದರಿಂದ ಹಿಡಿದು ಚುನಾವಣಾ ಪ್ರಕ್ರಿಯೆಯ ಸುಗಮ ನಿರ್ವಹಣೆಯವರೆಗೆ ಅವರು ಪ್ರಮುಖ ಜವಾಬ್ದಾರಿಯನ್ನು ಹೊರುತ್ತಾರೆ ಎಂದು ಹೇಳಿದರು. ಜಮ್ಮು-ಕಾಶ್ಮೀರದ ಎಲ್ಲಾ ಮತದಾರರು, ಬಿಎಲ್‌ಒಗಳು, ಬಿಎಲ್‌ಒ ಮೇಲ್ವಿಚಾರಕರು, ಸಹಾಯಕ ಚುನಾವಣಾ ನೋಂದಣಿ ಅಧಿಕಾರಿಗಳು (ಎಇಆರ್‌ಒ), ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒ) ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಶುಭಾಶಯ ತಿಳಿಸಿದರು.

ಹತ್ತನೇ ತರಗತಿ ಮಕ್ಕಳಿಗಿಲ್ಲ ತ್ರಿಭಾಷಾ ನೀತಿ: ಸಿಬಿಎಸ್‌ಇ

ಪುಟ ೧ ➡ ಈಗಾಗಲೇ 2 ವಿದೇಶಿ ಭಾಷೆಗಳನ್ನು ಆಯ್ಕೆ ಮಾಡಿಕೊಂಡವರಿಗೆ ಅದನ್ನು ಮುಂದುವರಿಸಲು ಅವಕಾಶ ನೀಡಲಾಗುವುದು, ಆದರೆ ಒಂದು ಹೆಚ್ಚುವರಿ ಸ್ಥಳೀಯ ಭಾರತೀಯ ಭಾಷೆ ಅಧ್ಯಯನ ಮಾಡಬೇಕಾಗುತ್ತದೆ. ಸಿಬಿಎಸ್‌ಇ ಆದೇಶದ ವಿರುದ್ಧ ಹಲವು ವಿದ್ಯಾರ್ಥಿಗಳು ಮತ್ತು ಪೋಷಕರು ನ್ಯಾಯಾಲಯದ ಮೊರೆಹೋಗಿದ್ದರು ಈ ಬಗ್ಗೆ ಈಗ ಸಿಬಿಎಸ್‌ಇ ಶೈಕ್ಷಣಿಕ ನಿರ್ದೇಶಕ ಪ್ರಾಗ್ಯಾ ಎಂ. ಸಿಂಗ್ ಸ್ಪಷ್ಟನೆ ನೀಡಿದ್ದಾರೆ.

ಮಂಜೂರಾದ ಜಾಗ ಖಾಲಿ ಬಿಟ್ಟರೆ ಕ್ರಮ



ಪುಟ ೧ ➡ **ತ್ವರಿತವಾಗಿ ಕ್ರಮ ವಹಿಸಲು ಸೂಚನೆ:** ಶರಾವತಿ ಪಂಪ್ ಸ್ಟೋರೇಜ್, ಗೋವಾ ತಮ್ನಾರ್, ಕಳಸಾ ಬಂಡೂರಿ ಮತ್ತು ಬಿಡಿಎ ಫೆರಿಫೆರಲ್ ರಿಂಗ್ ರಸ್ತೆ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಅರಣ್ಯ ಇಲಾಖೆಗಳ ವಿವಿಧ ಹಂತಗಳಲ್ಲಿ ಬಾಕಿ ಇರುವ ಅರಣ್ಯ ಅನುಮತಿ ವಿಚಾರಗಳಲ್ಲಿ ತ್ವರಿತ ಗತಿಯಲ್ಲಿ ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಬೆಳೆನಾಶ, ಜಾನುವಾರು ಜೀವಹಾನಿ, ಮಾನವ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಮಾನವ ಗಾಯ, ಆಸ್ತಿನಾಶ, ಮೊದಲಾದವುಗಳಿಗಾಗಿ 2025-26ನೇ ಸಾಲಿನಲ್ಲಿ 63.06 ಕೋಟಿ ರೂ. ಪರಿಹಾರ ವಿತರಿಸಲಾಗಿದೆ ಎಂದು ಮಾನವ ಅರಣ್ಯಜೀವಿ ಸಂಘರ್ಷ ತಪ್ಪಿಸಲು ಕೈಗೊಂಡ ಕಾರ್ಯಗಳ ಬಗ್ಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ ಅವರು, ಪ್ರಾಣಿಗಳು ಸಹ ಈ ಎಲ್ಲಾ ಅಡೆತಡೆ ದಾಟಲು ನಾನಾ ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಹೀಗಾಗಿ ಅಧಿಕಾರಿಗಳು ಕೂಡ ಆಗಾಗ ಇತರೆ ಹೊಸ ಮಾರ್ಗೋಪಾಯಗಳ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ರಿತೇಶ್ ಕುಮಾರ್ ಸಿಂಗ್, ಅಂಜುಮ್ ಪರ್ವೇಜ್, ಕರ್ನಾಟಕ ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಸಿಎಂ ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಸ್ ಪಲ್ಟಿ: ಇಬ್ಬರ ಸಾವು, 42 ಮಂದಿಗೆ ಗಾಯ

• **ಕೊಳ್ಳೇಗಾಲ:** ತಾಲೂಕಿನ ಮಧುವನಹಳ್ಳಿ ಕ್ರಾಸ್ ಬಳಿ ಕೆಎಸ್‌ಆರ್‌ಟಿಸಿ ಬಸ್ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಇಬ್ಬರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿರುವ ಘಟನೆ ಜರುಗಿದೆ. ಪಟ್ಟಣದ ಭೀಮನಗರ ಜಾನ್ ಹನುಮಂತಪ್ಪ ಬೀದಿಯ ವಾಸಿ ಅಂಗನವಾಡಿ ಶಿಕ್ಷಕಿ ಪುಟ್ಟನಂಜಮ್ಮ(60) ಹಾಗೂ ಕುದೇರು ಗ್ರಾಮದ ಕೂಲಿ ಕಾರ್ಮಿಕ ಮಾದೇಶ(50) ಮೃತ ದುರ್ದೈವಿಗಳು. ಮ.ಬೆಟ್ಟದಿಂದ ಕೆ.ಎ-57 ಎಫ್-3964 ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ 67 ಪ್ರಯಾಣಿಕರು ತುಂಬಿದ್ದು, ಬಸ್ ಟೈರ್ ಸಿಡಿದ ಪರಿಣಾಮ ರಸ್ತೆ ಬದಿಯ ಕಿರು ಚಾನಲ್ ಮೇಲೆ ಚಾಲಕ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಈ ದುರ್ಘಟನೆಯಿಂದಾಗಿ ಸ್ಥಳದಲ್ಲೇ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಉಳಿದ 42 ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ದಾಖಲಿಸಿದ್ದಾರೆ.

ಪಾಕಿಸ್ತಾನದ ವಾಯುದಾಳಿಗೆ ಅಫ್ಘಾನ್‌ನ 36 ಮಂದಿ ಸಾವು

ಪುಟ ೧ ➡ ಅತ್ಯಂತ ಭೀಕರ ದಾಳಿ ಪಕ್ತಿಯಾ ಪ್ರಾಂತ್ಯದ ಚಮ್ಕಾನಿ ಜಿಲ್ಲೆಯ ಮಂಡೋಖೈಲ್ ಗ್ರಾಮದಲ್ಲಿ ನಡೆದಿದ್ದು, ಮೊದಲ ವೈಮಾನಿಕ ದಾಳಿಯು ಒಂದು ಕುಟುಂಬದ ಮನೆಯ ಮೇಲೆ ನಡೆದಿದ್ದ ಪರಿಣಾಮ, ಓರ್ವ ವೃದ್ಧ ಮತ್ತು ಒಂದು ಮಗು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬದುಕುಳಿದವರನ್ನು ರಕ್ಷಿಸಲು ಗ್ರಾಮಸ್ಥರು ಒಟ್ಟುಗೂಡಿದ್ದ ವೇಳೆ, ಪಾಕಿಸ್ತಾನಿ ವಿಮಾನವು ಎರಡನೇ ದಾಳಿಯನ್ನು ನಡೆಸಿತು ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

ಇದನ್ನು ಡಬಲ್-ಟ್ಯಾಪ್ ಸ್ಟ್ರೈಕ್ ಎಂದು ವಿವರಿಸಲಾಗಿದೆ. ಇದು ವಿವಾದಾತ್ಮಕ ಯುದ್ಧ ತಂತ್ರವಾಗಿದ್ದು, ಆರಂಭಿಕ ದಾಳಿಯ ಸ್ವಲ್ಪ ಸಮಯದ ನಂತರ ಅದೇ ಸ್ಥಳವನ್ನು ಮತ್ತೆ ಹೊಡೆಯಲಾಗುತ್ತದೆ. ಎರಡನೇ ದಾಳಿ ನಡೆದಾಗ ನಿವಾಸಿಗಳು ಗಾಯಗೊಂಡವರಿಗೆ ಸಹಾಯ ಮಾಡಲು ಧಾವಿಸುತ್ತಿದ್ದರು ಎಂದು ಚಮ್ಕಾನಿ ಜಿಲ್ಲೆಯ ಉಪ ಮುಖ್ಯಸ್ಥ ಖಾಲಿದ್ ಅಹ್ಮದ್ ಸಜಾದ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪಾಕ್ ಸಮರ್ಥನೆ: ಕರಾಚಿಯಲ್ಲಿನ ಪಾಕಿಸ್ತಾನ ರೇಂಜರ್ಸ್ ಪ್ರಧಾನ ಕಚೇರಿಯ ಮೇಲೆ ಶನಿವಾರದ ದಾಳಿ ಸೇರಿದಂತೆ ಅನೇಕ ಭಯೋತ್ಪಾದಕ ಘಟನೆಗಳಿಗೆ ಪ್ರತಿಕ್ರಿಯೆಯಾಗಿ, ವಾಯುದಾಳಿಗಳಲ್ಲಿ 29 ಭಯೋತ್ಪಾದಕರನ್ನು ಕೊಂದು, ಭಯೋತ್ಪಾದಕರ ಅಡಗುತಾಣಗಳನ್ನು ಗುರಿಯಾಗಿಸಿಕೊಂಡಿದ್ದೇವೆ ಎಂದು ಪಾಕಿಸ್ತಾನ ಸಮರ್ಥಿಸಿಕೊಂಡಿದೆ.

ಕಾರು ಅಡ್ಡಗಟ್ಟಿ ಚಿನ್ನ ವ್ಯಾಪಾರಿ ದರೋಡೆ

• **ಮಂಗಳೂರು:** ಪತ್ನಿ ಮತ್ತು ಮಗನ ಜತೆ ಮುಂಬಯಿಯಿಂದ ಕಾರಿನಲ್ಲಿ ಕೇರಳಕ್ಕೆ ತೆರಳುತ್ತಿದ್ದ ಚಿನ್ನದ ವ್ಯಾಪಾರಿಯನ್ನು ಅಡ್ಡಗಟ್ಟಿ ಲಕ್ಷಾಂತರ ಮೌಲ್ಯದ ಚಿನ್ನ ಮತ್ತು ನಗದು ಅಪಹರಿಸಿದ ಘಟನೆ ಸೋಮವಾರ ಮುಂಜಾನೆ ಬೈಕಂಪಾಡಿಯಲ್ಲಿ ನಡೆದಿದೆ.

ಕೇರಳದ ಪಯ್ಯನ್ನೂರು ನಿವಾಸಿ, ಚಿನ್ನದ ವ್ಯಾಪಾರಿ ವಿಕಾಸ್ ತನ್ನ ಪತ್ನಿ ಹಾಗೂ ಪುತ್ರನೊಂದಿಗೆ ಕಾರಿನಲ್ಲಿ ಕೇರಳಕ್ಕೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಸೋಮವಾರ ಮುಂಜಾನೆ ಸುಮಾರು 3 ಗಂಟೆಗೆ ಬೈಕಂಪಾಡಿ ಬಳಿ ಎರಡು ಇನ್ನೋವಾ ಕಾರುಗಳು ಹಾಗೂ ಒಂದು ಸ್ವಿಫ್ಟ್ ಕಾರಿನಲ್ಲಿ ಬಂದ 7ರಿಂದ 8 ಮಂದಿ ಅಪರಿಚಿತರು ವಿಕಾಸ್ ಅವರ ಕಾರನ್ನು ಅಡ್ಡಗಟ್ಟಿದ್ದಲ್ಲದೆ, ಪತ್ನಿ ಮತ್ತು ಮಗನ ಸಮೇತ ಕಾರನ್ನು ದುಷ್ಕರ್ಮಿಗಳು ಒಯ್ದಿದ್ದಾರೆ. ಬಳಿಕ ಕೂಳೂರು ಬಳಿ ಪತ್ನಿ, ಮಗನನ್ನು ಕಾರಿನಿಂದ ಇಳಿಸಿ ಆರೋಪಿಗಳು ಕಾರಿನೊಂದಿಗೆ ಪರಾರಿಯಾಗಿದ್ದಾರೆ.

ಈ ಸಂದರ್ಭದಲ್ಲಿ ಉದ್ಯಮಿ ಪತ್ನಿಯ ಕೊರಳು, ಕಿವಿಯಲ್ಲಿದ್ದ ಯಾವುದೇ ಚಿನ್ನಾಭರಣವನ್ನು ತೆಗೆದುಕೊಳ್ಳದೆ ಇರುವುದು ವಿಶೇಷವಾಗಿದೆ. 180ಗ್ರಾಂ ಚಿನ್ನ ಮತ್ತು ನಗದು ಸಹಿತ ಸುಮಾರು 20ಲಕ್ಷ ರೂ. ಮೌಲ್ಯದ ಸೊತ್ತು ದೋಚಿದ್ದಾರೆ ಎಂದು ಪಣಂಬೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಲವ್ ಜಿಹಾದ್: ಯುವತಿ ಸಾವು

ಪುಟ ೧ ➡ ನೇಣು ಹಾಕಿದ್ದ ಹಗ್ಗ ಕತ್ತರಿಸಿದ ಸ್ಥಿತಿಯಲ್ಲಿ ಕಂಡುಬಂದಿದೆ. ಅಲ್ಲದೆ ಸ್ಥಳದಲ್ಲಿ ಕೆಲವು ಮಾತ್ರೆಗಳು ಪತ್ತೆಯಾಗಿದ್ದು, ವಿಷ ಸೇವಿಸಿರುವ ಸಾಧ್ಯತೆಗಳೂ ದಟ್ಟವಾಗಿದೆ. ರೂಮ್‌ನಲ್ಲಿ ಒಂದು ಡೈರಿ ಸಿಕ್ಕಿದ್ದು, ಅದರಲ್ಲಿ ಹಲವು ವಿಚಾರಗಳನ್ನು ಬರೆಯಲಾಗಿದೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪೊಲೀಸ್ ವಿರುದ್ಧ ಆರೋಪ: ಸಂಜೀತ್ ಅಲಿ ವಿರುದ್ಧ ನಾವು ಈಗಾಗಲೇ ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ, ಪೊಲೀಸರು ಆತನ ವಿರುದ್ಧ ಕ್ರಮ ಕೈಗೊಂಡಿದ್ದರೆ ಸುರಭಿ ಬದುಕಿರುತ್ತಿದ್ದಳು ಎಂದು ಮೃತ ಯುವತಿಯ ಮಾವ ಶಂಕರನಾರಾಯಣ ತಿಳಿಸಿದ್ದಾರೆ. ಕಳೆದ ವರ್ಷ ಸುರಭಿ ಮನೆಗೆ ಬಾರದೇ ನಾಪತ್ತೆಯಾಗಿದ್ದಳು. ಪುತ್ರಿ ನಾಪತ್ತೆಯಾದ ಹಿನ್ನೆಲೆಯಲ್ಲಿ ಬನಶಂಕರಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಕೇಸ್ ದಾಖಲಾಗಿತ್ತು. ಬಳಿಕ ಪೊಲೀಸರು ಸ್ನೇಹಿತರ ಮನೆಯಲ್ಲಿದ್ದ ಸುರಭಿಯನ್ನು ಪತ್ತೆ ಮಾಡಿ ಪೋಷಕರಿಗೆ ಒಪ್ಪಿಸಿದ್ದರು ಎನ್ನಲಾಗಿದೆ. ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆ ಸೇರಿರುವ ಸಂಜೀತ್ ಅಲಿಗೆ ಪ್ರಜ್ಞೆ ಬಂದ ನಂತರವಷ್ಟೇ ಇದು ಕೊಲೆಯೋ ಅಥವಾ ಇಬ್ಬರೂ ಸೇರಿ ಮಾಡಿಕೊಂಡ ಆತ್ಮಹತ್ಯೆಯೋ ಎಂಬುದು ಸ್ಪಷ್ಟವಾಗಲಿದೆ ಎಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಎಸ್‌ಪಿ ಕುಶಾಲ್ ಚೌಕ್ಸೆ ತಿಳಿಸಿದ್ದಾರೆ. ಪ್ರಸ್ತುತ ನಂದಿಗಿರಿಧಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲವ್ ಜಿಹಾದ್ ಎಂದ ಬಜರಂಗ ದಳ: ಈ ಘಟನೆ ಲವ್ ಜಿಹಾದ್‌ನ ಭಾಗ ಎಂಬುದು ಸ್ಪಷ್ಟವಾಗಿದೆ. ಈಗಾಗಲೇ ಯುವತಿಯ ತಾಯಿ ಸಹ ಅದನ್ನು ಬಹಿರಂಗಪಡಿಸಿದ್ದಾರೆ. ಆಕೆಗೆ ಮಾದಕವಸ್ತು ನೀಡಿ ಮಾದಕವ್ಯಸನಿಯನ್ನಾಗಿಸಿದ್ದ ಎಂದು ತಿಳಿದುಬಂದಿದೆ. ಈ ಘಟನೆ ಹಿಂದೆ ದೊಡ್ಡ ಜಾಲವಿದ್ದು, ಸಮಗ್ರ ತನಿಖೆ ಆಗಬೇಕು. ಅಗತ್ಯವೆನಿಸಿದರೆ ಈ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ ವರ್ಗಾಯಿಸಬೇಕು ಎಂದು ಬಜರಂಗದಳ ಮುಖಂಡ ಕೃಷ್ಣಮೂರ್ತಿ ಆಗ್ರಹಿಸಿದ್ದಾರೆ.

ಮಗಳಿಗೆ ನಿರಂತರ ಕಾಟ ಕೊಡುತ್ತಿದ್ದ: ತಾಯಿ ಕಣ್ಣೀರು

ಪುಟ ೧ ➡ ಇವರಿಂದ ದೂರವಿಡಲು ಆಕೆಗೆ ಬೇರೆ ಕಡೆ ವಿದ್ಯಾಭ್ಯಾಸ ಕೊಡಿಸಿದರೂ, ಆತ ಅಲ್ಲಿಗೂ ಹುಡುಕಿಕೊಂಡು ಬಂದು ಕಾಟ ಕೊಡುತ್ತಿದ್ದ. ಆವನು ನನ್ನ ಮಗಳನ್ನು ಸಂಪೂರ್ಣವಾಗಿ ಮರುಳು ಮಾಡಿದ್ದ. ಅಷ್ಟೇ ಅಲ್ಲ, ಆಕೆಯನ್ನು ಡ್ರಗ್ ಅಡಿಕ್ಟ್ ಮಾಡಿದ್ದ. ನಾನು ಕಷ್ಟಪಟ್ಟು ಎರಡು ಮೂರು ಕಡೆ ಚಿಕಿತ್ಸೆ ಕೊಡಿಸಿ ಆಕೆಯನ್ನು ಗುಣಮುಖಳನ್ನಾಗಿ ಮಾಡಿದ್ದೆ. ಇತ್ತೀಚೆಗೆ ಆಕೆ ಆರೋಗ್ಯವಾಗಿದ್ದಳು. ಆದರೆ ಈಗ ಲವ್ ಜಿಹಾದ್‌ಗೆ ಬಲಿಯಾಗಿದ್ದಾಳೆ ಎಂದು ತಾಯಿ ಗೀತಾ ಕಣ್ಣೀರು ಹಾಕಿದ್ದಾರೆ. ಮುದ್ದೇನಹಳ್ಳಿಯಲ್ಲಿ ಶನಿವಾರ ಸತ್ಸಂಗ ಇದೆ, ನಾನು ಅಲ್ಲೇ ಇರುತ್ತೇನೆ ಎಂದು ತಾಯಿಗೆ ಹೇಳಿಹೋಗಿದ್ದಳು. ಆದರೆ ಸಂಜೀತ್ ಅಲಿ ಮತ್ತೊಮ್ಮೆ ಆಕೆಯನ್ನು ಹುಡುಕಿಕೊಂಡು ಬಂದು ಮರುಳು ಮಾಡಿ ಹೋಂ ಸ್ಟೇಗೆ ಕರೆದೊಯ್ದಿದ್ದಾನೆ. ಅವನೇ ನಂಜು ಕುಡಿಸಿ ನನ್ನ ಮಗಳನ್ನು ಕೊಲೆ ಮಾಡಿದ್ದಾನೆ. ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂದು ಮೃತಳ ತಾಯಿ ಒತ್ತಾಯಿಸಿದ್ದಾರೆ.

ಅಧಿಕಾರಿಗಳ ಅಪರಾಧ ಪ್ರಮಾಣ ವಿರಳ



• **ಬೆಂಗಳೂರು:** ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅತೀ ವಿರಳ ಎಂದು ಹೈಕೋರ್ಟ್ ಸೋಮವಾರ ಮೌಖಿಕವಾಗಿ ಹೇಳಿತು.

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಇಂಡಿ ತಮಗೆ ವಿಧಿಸಿರುವ ಶಿಕ್ಷೆ ಅಮಾನತುಗೊಳಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ಕೋರಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್, ಜಿ. ಬಸವರಾಜು ಅವರ ವಿಭಾಗೀಯ ಪೀಠವು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಸರ್ಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ಹೇಯ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅತೀ ವಿರಳ ಎಂದು ಹೇಳಿತು.

ವಿಚಾರಣೆಯ ವೇಳೆ ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು ಅತಿ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಯು ರಾಜಕೀಯ ವಿರೋಧಿಯ ಕೊಲೆ ಪಿತೂರಿ ನಡೆಸಿದ್ದಾರೆ. ಅಲ್ಲದೇ, ನೈಜ ಆರೋಪಿಗಳನ್ನು ರಕ್ಷಿಸುವ ಕೆಲಸ ಮಾಡಲಾಗಿದೆ.

ತನಿಖೆಯು ಸಿಬಿಐ ಹೆಗಲಿಗೆ ಬಿದ್ದಿದ್ದರಿಂದ ವಿನಯ್ ಕುಲಕರ್ಣಿ ಮತ್ತಿತರರ ಯೋಜನೆ ವಿಫಲವಾಗಿದೆ. ಸಿಬಿಐ ಕೊಲೆ ಪ್ರಕರಣವನ್ನು ಭೇದಿಸಿದ್ದು, 7-14ನೇ ಆರೋಪಿಗಳು ನೈಜ ಅಪರಾಧಿಗಳು ಪಿತೂರಿ ನಡೆಸಿದ್ದಾರೆಂದು ಪತ್ತೆ ಹಚ್ಚಿದೆ. ಇಂಥ ಅತ್ಯುನ್ನತ ಜವಾಬ್ದಾರಿ ಸ್ಥಾನದಲ್ಲಿರುವ ಜನಪ್ರತಿನಿಧಿಗೆ ಜಾಮೀನು ನೀಡುವುದು ಹೇಗೆ ಎಂದರು.

ಈ ಹಂತದಲ್ಲಿ ನ್ಯಾ.ನವಾಜ್ ಅವರು ಸರ್ಕಾರಿ ಅಧಿಕಾರಿಗಳು ಅಥವಾ ರಾಜಕಾರಣಿಗಳು ಹೇಯ ಕೃತ್ಯಗಳಲ್ಲಿ ಭಾಗವಹಿಸುವುದು ಬೇರೆ ರಾಜ್ಯಗಳಲ್ಲಿ ಹೆಚ್ಚು, ರಾಜ್ಯದಲ್ಲಿ ವಿರಳ. ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಹೇಯ ಕೃತ್ಯಗಳಲ್ಲಿ ಭಾಗಿಯಾಗಿರುವ ಉದಾಹರಣೆಗಳಿವೆ ಎಂದರು. ಆಗ ರಾಜು ಅವರು, ಕರ್ನಾಟಕದಲ್ಲಿ ಹೀನ ಕೃತ್ಯಗಳಲ್ಲಿ ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಭಾಗಿಯಾಗುವುದು ಕಡಿಮೆ ಎಂದು ಕೇಳಲು ಸಂತೋಷವಾಗುತ್ತದೆ. ಇಂಥ ಟ್ರೆಂಡ್ ಆರಂಭವಾದರೆ ಅದನ್ನು ಎಳೆಯದರಲ್ಲಿ ಮೊಟಕು ಹಾಕಬೇಕಿದೆ.

ಕನ್ನಡಿಗರಿಗೆ ಕಾಂಗ್ರೆಸ್ ಮತ್ತೊಮ್ಮೆ ಮಹಾದ್ರೋಹ: ಆರ್.ಅಶೋಕ

• ಬೆಂಗಳೂರು: ನಾಡದ್ರೋಹಿ ಕೈ ಸರ್ಕಾರವು ಕನ್ನಡಿಗರಿಗೆ ಮತ್ತೊಮ್ಮೆ ಮಹಾದ್ರೋಹ ಮಾಡಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಮುಂಗಾರು ಕ್ಷೀಣಿಸಿ ಕರ್ನಾಟಕದಲ್ಲಿ ಬರದ ಛಾಯೆ ಆವರಿಸಿದೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹನಿ



ನೀರಿಗೂ ಜನ ಪರದಾಡುವ ಭೀಕರ ಪರಿಸ್ಥಿತಿ ಎದುರಾಗಿದೆ. ಆದರೆ, ಈ ಕಳ್ಳ ಕಾಂಗ್ರೆಸ್ ಸರ್ಕಾರ ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುತ್ತಿದೆ ಎಂದು ದೂರಿದ್ದಾರೆ. ಕುಡಿಯುವ ನೀರಿನ ನೆಪವೊಡ್ಡಿ ಕಾವೇರಿ ಕೊಳ್ಳದ ಜೀವನಾಡಿ ಕೆಆರ್‌ಎಸ್ ಡ್ಯಾಂನಿಂದ ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸಲಾಗುತ್ತಿದೆ!.

ಕಳೆದ ಮೂರು ದಿನಗಳಿಂದ ಪ್ರತಿದಿನ 2,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದು ಕನ್ನಡಿಗರ ಬೆನ್ನಿಗೆ ಚೂರಿ ಇರಿಯುತ್ತಿರುವ ಚೂರಿಯಲ್ಲದೆ ಮತ್ತಿನ್ನೇನು ಮುಖ್ಯಮಂತ್ರಿಗಳೇ? ಈ ನಾಡದ್ರೋಹಿ ಕಾಂಗ್ರೆಸ್ ಇತಿಹಾಸವೇ ಇಷ್ಟು, ಅಧಿಕಾರವಿಲ್ಲದಾಗ ನಮ್ಮ ನೀರು ನಮ್ಮ ಹಕ್ಕು ಎಂದು ನಾಟಕದ ಬೊಬ್ಬೆ ಅಧಿಕಾರ ಸಿಕ್ಕಾಗ ನಮ್ಮ ನೀರು ತಮಿಳುನಾಡಿನ ಹಕ್ಕು ಎನ್ನುತ್ತಾ ಅಧಿಕಾರಕ್ಕಾಗಿ ತಮಿಳುನಾಡಿನ ಎದುರು ಸಂಪೂರ್ಣ ಶರಣಾಗತಿ ಆಗುವುದು. ನಾಡಿನ ಜನತೆಯ ಹಿತ ಕಾಯದೆ ಹೈಕಮಾಂಡ್ ಆಣತಿಯಂತೆ ತಮಿಳುನಾಡಿನ ಜೊತೆ ರಾಜಿ ಮಾಡಿಕೊಳ್ಳುವುದು ಎಂದು ಟೀಕಿಸಿದ್ದಾರೆ.

ನೀರಿಲ್ಲದೆ, ಬೆಳೆಯಿಲ್ಲದೆ ಕಾವೇರಿ ಕೊಳ್ಳದ ನಮ್ಮ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅವರ ಶವಯಾತ್ರೆ ಮಾಡುತ್ತೀರಾ? ಬೆಂಗಳೂರಿನ ಜನ ಟ್ಯಾಂಕರ್ ಮಾಫಿಯಾ ಸುಲಿಗೆಗೆ ಸಿಕ್ಕಿ ಪರದಾಡಿದರೆ ಟ್ಯಾಂಕರ್ ಯಾತ್ರೆ ಮಾಡುತ್ತೀರಾ? ಎಂದು ಅಶೋಕ ಪ್ರಶ್ನಿಸಿದ್ದಾರೆ. ಕನ್ನಡ ನಾಡಿನ ಜನತೆಗೆ ಕನಿಷ್ಠ ನೀರಿನ ಭದ್ರತೆ, ನೀರಿನ ಹಕ್ಕು ನೀಡಲಾಗದ ಈ ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಜನತೆ ತಕ್ಕ ಪಾಠ ಕಲಿಸುವುದು ನಿಶ್ಚಿತ ಎಂದವರು ಎಚ್ಚರಿಸಿದ್ದಾರೆ.



ಚಿಕ್ಕಮಗಳೂರಿನಲ್ಲಿ ಎಸ್‌ಐಆರ್ ಕುರಿತು ಅರಿವು ಮೂಡಿಸಲು ಸೋಮವಾರ ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ನಡೆಸಿದರು. ಶಿಕ್ಷಕರು ಮತ್ತು ಸ್ಥಳೀಯರು ಸಾಥ್ ನೀಡಿದರು.

ಐತಿಹಾಸಿಕ ಸಿಸ್ಟರ್-ಸಿಟಿ ಒಪ್ಪಂದಕ್ಕೆ ಮುಂದು: ಗೃಹಸಚಿವ ಪರಮೇಶ್ವರ್

• ಬೆಂಗಳೂರು: ಪೆರು ಗಣರಾಜ್ಯದೊಂದಿಗಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ, ಅದರ ರಾಜಧಾನಿ ಲಿಮಾನಂತಹ ಪ್ರಮುಖ ನಗರ ಹಾಗೂ ಬೆಂಗಳೂರು ನಗರದ ನಡುವೆ ಐತಿಹಾಸಿಕ ಸಿಸ್ಟರ್-ಸಿಟಿ ಒಪ್ಪಂದ ಮಾಡಿಕೊಳ್ಳಲು ಕರ್ನಾಟಕ ಸರ್ಕಾರ ಅತ್ಯಂತ ಉತ್ಸುಕವಾಗಿದೆ ಎಂದು ಡಿಸಿಎಂ ಡಾ.ಜಿ. ಪರಮೇಶ್ವರ್ ತಿಳಿಸಿದ್ದಾರೆ.

• ಪೆರು ರಾಜಧಾನಿ ಲಿಮಾ-ಬೆಂಗಳೂರು ಬಾಂಧವ್ಯ ಗಟ್ಟಿಗೊಳಿಸುವ ಹಿನ್ನೆಲೆ



ಭಾರತ ಮತ್ತು ಪೆರು ನಡುವಿನ 63 ವರ್ಷಗಳ ನಿರಂತರ ರಾಜತಾಂತ್ರಿಕ ಬಾಂಧವ್ಯ ಹಾಗೂ ಪೆರು ಗಣರಾಜ್ಯದ 205ನೇ ಸ್ವಾತಂತ್ರ್ಯ ದಿನಾಚರಣೆಯಂಗವಾಗಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಉನ್ನತ ಮಟ್ಟದ ರಾಜತಾಂತ್ರಿಕ ಸಮಾರಂಭದಲ್ಲಿ ಅವರು ಮಾತನಾಡಿದರು. ಈ ವೇಳೆ ಪೆರುವಿನ ಲ್ಯಾಟಿನ್ ಅಮೆರಿಕನ್ ವಿಮೋಚನಾ ಚಳವಳಿಗಳು ಮತ್ತು ಮಹಾತ್ಮ ಗಾಂಧಿ ಅವರ ನೇತೃತ್ವದ ಭಾರತದ ಸ್ವಾತಂತ್ರ್ಯ ಹೋರಾಟದ ನಡುವಿನ ಆಳವಾದ ಸಾಮ್ಯತೆಗಳನ್ನು ಸ್ಮರಿಸಿದರು.

ಭಾರತದ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಶೇ. 40ಕ್ಕಿಂತ ಹೆಚ್ಚಿನ ಪಾಲನ್ನು ಹೊಂದುವ ಮೂಲಕ ಪ್ರಥಮ ಸ್ಥಾನದಲ್ಲಿದೆ. ಈ ಕ್ಷೇತ್ರದಲ್ಲಿ ಇಡೀ ದೇಶವನ್ನೇ ಮುನ್ನಡೆಸುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಅಭೂತಪೂರ್ವ ಯಶಸ್ಸು, ಅಲ್ಲಿ ಹರಿದುಬಂದ ಬೃಹತ್ ಹೂಡಿಕೆಗಳು ರಾಜ್ಯದ ಪ್ರಗತಿಯನ್ನು ಮತ್ತಷ್ಟು ಸಾಬೀತುಪಡಿಸಿವೆ ಎಂದು ಮಾಹಿತಿ ನೀಡಿದರು.

ಇದು ಭವಿಷ್ಯದಲ್ಲಿ ಉಭಯ ದೇಶಗಳ ನಡುವಿನ 10 ಬಿಲಿಯನ್ ಡಾಲರ್ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ದೊಡ್ಡ ಮುನ್ನುಡಿಯಾಗಲಿದೆ ಎಂದು ಡಾ. ಪರಮೇಶ್ವರ್ ವಿಶ್ವಾಸ ವ್ಯಕ್ತಪಡಿಸಿದರು. ಪೆರು ರಾಯಭಾರಿ ಜೇವಿಯರ್ ಮ್ಯಾನುಯೆಲ್ ಪಾಲಿನಿಚ್ ವೆಲಾರ್ಡೆ, ಬೆಂಗಳೂರಿನಲ್ಲಿರುವ ಪೆರುವಿನ ಗೌರವ ಕಾನ್ಸುಲ್ ವಿಕ್ರಮ್ ವಿಶ್ವನಾಥ್ ಹಾಗೂ ಉನ್ನತ ಅಧಿಕಾರಿಗಳು ಇದ್ದರು.

ಕಿರುಸುದ್ದಿ

ರೈತರ ಮನಸ್ಸಿಗೆ ನೋವಾಗುವ ಯೋಜನೆ ಬೇಡ: ಸೋಮಣ್ಣ

• ಚನ್ನಪಟ್ಟಣ: ರೈತರ ಮನಸ್ಸಿಗೆ ನೋವಾಗುವ ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳಬಾರದು. ರಾಜ್ಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಜನರಿಗೆ ಬೇಡವಾದ ಯೋಜನೆಗಳನ್ನು ಬಲವಂತವಾಗಿ ಜಾರಿಗೊಳಿಸುವ ಅಗತ್ಯ ಇಲ್ಲ



ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು. ಚನ್ನಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ತಾವು ಈಗಾಗಲೇ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದಾಗಿ ಹೇಳಿದರು. ಸಿಎಂ ಆಗಿ ಅಧಿಕಾರ ವಹಿಸಿ ಕೊಂಡು ಒಂದು ತಿಂಗಳಷ್ಟೇ ಆಗಿದೆ. ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶ ಕೊಡದೆ ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸಿ ಎಂದು ನಾನು ಸಲಹೆ ನೀಡಿದ್ದೇನೆ. ರೈತರಿಗೆ ಅನಾನುಕೂಲವಾಗುವ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಸೂಕ್ತವಲ್ಲ, ಬೇರೆ ಸೂಕ್ತ ಸ್ಥಳದಲ್ಲಿ ಟೌನ್‌ಶಿಪ್ ನಿರ್ಮಿಸಿದರೆ ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದರು. ಬೈರಮಂಗಲ ಕೆರೆಯ ಸಂರಕ್ಷಣೆ, ಶುದ್ಧೀಕರಣಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಸಿಎಂಗೆ ಸಲಹೆ ನೀಡಿರುವುದಾಗಿ ತಿಳಿಸಿದ ಅವರು, ರಾಜ್ಯದಲ್ಲಿ ಇನ್ನೂ ನೂರು ಟೌನ್‌ಶಿಪ್‌ಗಳನ್ನು ನಿರ್ಮಿಸುವ ಅವಕಾಶಗಳಿವೆ. ಆದರೆ ರೈತರ ಭಾವನೆಗಳಿಗೆ ಧಕ್ಕೆ ತರುವ ರೀತಿಯ ಯೋಜನೆಗಳನ್ನು ಕೈಗೊಳ್ಳಬಾರದು ಎಂಬುದೇ ನನ್ನ ಸ್ಪಷ್ಟ ಅಭಿಪ್ರಾಯ ಎಂದರು.

ಲಾರಿ-ಬಸ್ ಅಪಘಾತ: 12ಕ್ಕೂ ಹೆಚ್ಚು ಮಂದಿಗೆ ಗಾಯ

• ಚಿತ್ರದುರ್ಗ: ಜಿಲ್ಲೆಯ ಚಳ್ಳಕೆರೆ ತಾಲೂಕಿನ ಚಿಕ್ಕಮ್ಮನಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಲಾರಿ-ಬಸ್ ನಡುವೆ ಭೀಕರ ಅಪಘಾತ ಸಂಭವಿಸಿದೆ. ಬಸ್ಸಿನಲ್ಲಿದ್ದ 12ಕ್ಕೂ ಹೆಚ್ಚು ಮಂದಿಗೆ ಗಾಯವಾಗಿದ್ದು, ಓರ್ವನ ಸ್ಥಿತಿ ಗಂಭೀರವಾಗಿದ್ದು, ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಚಿಕ್ಕಮ್ಮನಹಳ್ಳಿ ಹೈವೇಯಲ್ಲಿ ಈ ಘಟನೆ ನಡೆದಿದೆ. ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಮತ್ತೊಂದು ಬದಿಯಲ್ಲಿ ಚಲಿಸುತ್ತಿದ್ದ ಬಸ್ಸಿಗೆ ಲಾರಿ ಡಿಕ್ಕಿಯಾಗಿದೆ. ಸಿಂಧನೂರು ಕಡೆಯಿಂದ ಬೆಂಗಳೂರಿಗೆ ಹೊರಟಿದ್ದ ಬಸ್ಸಿಗೆ ಲಾರಿ ಡಿಕ್ಕಿ ಹೊಡೆದಿದೆ. ಬಸ್ಸಿನಲ್ಲಿ ಒಟ್ಟು 34 ಮಂದಿ ಪ್ರಯಾಣಿಸುತ್ತಿದ್ದರು. ಗಾಯಾಳುಗಳನ್ನು ಚಳ್ಳಕೆರೆ ತಾಲೂಕು ಆಸ್ಪತ್ರೆಗೆ ದಾಖಲಿಸಿದ್ದು, ಸ್ಥಳಕ್ಕೆ ಎಸ್‌ಪಿ ಶಿವಕುಮಾರ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ತಳಕು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಶಿಕ್ಷಣದಲ್ಲಿ ಮತ ರಾಜಕೀಯ ಬೆರೆಸದಿರಿ: ಮಹದೇವಪ್ಪ

• ಬೆಂಗಳೂರು: ಎನ್‌ಸಿಇಆರ್‌ಟಿ 9ನೇ ತರಗತಿಯ ಪುಸ್ತಕದಿಂದ ಭಾರತದ ಸಂವಿಧಾನ ಪ್ರಸ್ತಾವನೆ ಮತ್ತು ಜಾತ್ಯಾತೀತತೆ ಎಂಬ ಅಂಶವನ್ನು ತೆಗೆದುಹಾಕಿ, ತುರ್ತು ಪರಿಸ್ಥಿತಿಯ ದುಷ್ಪರಿಣಾಮಗಳು ಎಂಬ ಅಂಶವನ್ನು ಸೇರಿಸಲಾಗಿದೆ. ಶೈಕ್ಷಣಿಕ ಪಠ್ಯದ ಮೂಲಕವೇ ಮಕ್ಕಳಲ್ಲಿ ರಾಜಕೀಯ ವಿಷವನ್ನು ತುಂಬುವ ಕೆಲಸ ಮಾಡುತ್ತಿದ್ದು ಶಿಕ್ಷಣದೊಳಗೆ ಮತ ರಾಜಕೀಯವನ್ನು ಬೆರೆಸುವ ಕೆಲಸವನ್ನು ಮಾಡುತ್ತಿರುವುದು ಖಂಡನೀಯವಾದ ಸಂಗತಿಯಾಗಿದೆ ಎಂದು ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದ್ದಾರೆ. ಜಾತ್ಯಾತೀತತೆ ಎಂದರೆ ಜಾತಿ ಮತ್ತು ಧರ್ಮದ ಬೇಧವಿಲ್ಲದೇ ಎಲ್ಲರನ್ನೂ ಸಮಾನವಾಗಿ ಕಾಣುವುದು ಎಂದರ್ಥ. ಭಾರತೀಯ ಜನಗಳಾದ ನಾವು ಎಂದು ಹೇಳುವ, ಐಕ್ಯತೆ ಮತ್ತು ಭ್ರಾತೃತ್ವತೆಯ ಸಂದೇಶದ ನಮ್ಮ ಸಂವಿಧಾನದ ಪೀಠಿಕೆ ತೆಗೆದು ಹಾಕಿ ಅಲ್ಲಿ ಸರ್ಕಾರದ ವಿರುದ್ಧ ಕೆಟ್ಟ ಭಾವನೆ ಬರುವಂತೆ ತುರ್ತು ಪರಿಸ್ಥಿತಿಯ ಅಧ್ಯಾಯ ಸೇರಿಸಿದ್ದು ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದು ಪ್ರಕಟಣೆಯಲ್ಲಿ ದೂರಿದ್ದಾರೆ.

ರಾಜ್ಯದ ವಿದ್ಯುತ್ ನಿಗಮ ಖಾಸಗೀಕರಣ ಕುರಿತು ಸಂಪುಟ ಸಭೆಯಲ್ಲಿ ಚರ್ಚೆ

ಅಭಿಪ್ರಾಯ ಪರಿಗಣನೆ

• ಬೆಂಗಳೂರು: ರಾಜ್ಯದ ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡದಿರುವ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ನೌಕರರ ಅಭಿಪ್ರಾಯ ಪರಿಗಣಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ವಿವಿಧ ಸಂಘಗಳ ಒಕ್ಕೂಟವು ಸೋಮವಾರ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಖಾಸಗೀಕರಣದ ವಿಚಾರದಲ್ಲಿ ತಾವೊಬ್ಬರೇ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. 2003ರಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಅವಕಾಶ ಕಲ್ಪಿಸುವ ಕಾನೂನನ್ನು ಬಿಜೆಪಿ ಸರ್ಕಾರವೇ ತಂದಿತ್ತು. ಆಗ ಅದರ ವಿರುದ್ಧ ಯಾರೂ ಧ್ವನಿ ಎತ್ತಲಿಲ್ಲ, ಈಗ ತಮ್ಮ ಬಳಿ ಬಂದು ಖಾಸಗೀಕರಣಕ್ಕೆ ಅವಕಾಶ ನೀಡಬೇಡಿ ಎಂದು ಮನವಿ ಮಾಡುತ್ತಿರುವುದಾಗಿ ಅವರು ಹೇಳಿದರು.

ವಿದ್ಯುತ್ ಮೂಲಸೌಕರ್ಯವನ್ನು ನಿರ್ಮಿಸಿದ್ದು ಸರ್ಕಾರ ಹಾಗೂ ಇಲಾಖೆಯ ಸಿಬ್ಬಂದಿ. ಆದರೆ, ಲಾಭ ಮಾತ್ರ ಖಾಸಗಿ ಕಂಪನಿಗಳಿಗೆ ಸಿಗುವಂತಾಗಬಾರದು. ಮುಂಬೈ, ದಿಲ್ಲಿ ಸೇರಿದಂತೆ ಹಲವು ನಗರಗಳಲ್ಲಿ ಖಾಸಗೀಕರಣ ನಡೆದಿರುವುದನ್ನು ಉಲ್ಲೇಖಿಸಿದರು. ನೌಕರರು ಸರ್ಕಾರದ ಬಗ್ಗೆ ಕಾಳಜಿ ವಹಿಸಿದರೆ ಸರ್ಕಾರವೂ ಅವರ ಹಿತಾಸಕ್ತಿಯನ್ನು ಕಾಪಾಡಲಿದೆ. 2028ರ ಚುನಾವಣೆಯಲ್ಲೂ ಇದೇ ರೀತಿಯ ಬೆಂಬಲ ಮುಂದುವರಿಯಬೇಕು ಎಂದು ಕರೆ ನೀಡಿದರು.

ಇಂಧನ ಸಚಿವ ಕೆ.ಜೆ. ಜಾರ್ಜ್ ನೇತೃತ್ವದಲ್ಲಿ ಇಲಾಖೆಯಲ್ಲಿ ಹಲವು ಅಭಿವೃದ್ಧಿ ಯೋಜನೆಗಳು ಜಾರಿಯಾಗಿವೆ. ತಮ್ಮ ಹಿಂದಿನ ಅವಧಿಯಲ್ಲಿ ಇಂಧನ ಭವನ ನಿರ್ಮಾಣ, ಸಿಬ್ಬಂದಿಯ ವೇತನ ಪರಿಷ್ಕರಣೆ ಅವಧಿಯನ್ನು ಏಳು ವರ್ಷದಿಂದ ಐದು ವರ್ಷಕ್ಕೆ ಇಳಿಕೆ ಹಾಗೂ ಇಲಾಖೆಯಲ್ಲಿ 25 ಸಾವಿರಕ್ಕೂ ಹೆಚ್ಚು ನೇಮಕಾತಿಗಳನ್ನು ಯಾವುದೇ ಲಂಚವಿಲ್ಲದೆ ನಡೆಸಲಾಗಿದೆ ಎಂದು ಹೇಳಿದರು.

ಇಂಧನ ಇಲಾಖೆ ಸಿಬ್ಬಂದಿ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು ಎಂದು ಡಿ.ಕೆ.ಶಿವಕುಮಾರ್ ಬಣ್ಣಿಸಿದರು. ಜನಜೀವನದಲ್ಲಿ ವಿದ್ಯುತ್ ಸಿಬ್ಬಂದಿಯ ಸೇವೆ ಅತ್ಯಂತ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು. ವಿದ್ಯುತ್ ನಿಗಮ ನೌಕರರ ಸಂಘದ ಅಧ್ಯಕ್ಷ ಕೆ. ಬಲರಾಮ್, ಪ್ರಧಾನ ಕಾರ್ಯದರ್ಶಿ ಶಿವರಾಂ, ಖಜಾಂಚಿ ವರದರಾಜ್, ಇಂಜಿನಿಯರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ದೇಸಾಯಿ ಮತ್ತಿತರರಿದ್ದರು.



ಇಂಧನ ಭದ್ರತೆ ಮತ್ತಷ್ಟು ಬಲ

ಮುಂದಿನ 25 ವರ್ಷಗಳ ವಿದ್ಯುತ್ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿದೆ. ರೈತರ ಸಹಭಾಗಿತ್ವದಲ್ಲಿ 10 ಸಾವಿರ ಎಕರೆ ಪ್ರದೇಶದಲ್ಲಿ ಸೌರ ಉದ್ಯಾನವನ ಅಭಿವೃದ್ಧಿಪಡಿಸಲಾಗಿದ್ದು, ಮತ್ತೆ 10 ಸಾವಿರ ಎಕರೆ ಭೂಮಿ ನೀಡಲು ರೈತರು ಮುಂದೆ ಬಂದಿದ್ದಾರೆ. ಗೃಹಜ್ಯೋತಿ ಯೋಜನೆ ಅಡಿ 1.67 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, ಇದಕ್ಕೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗಿದೆ. ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಗಾಗಿ 21 ಸಾವಿರ ಕೋಟಿ ರೂ. ಅನುದಾನ ನೀಡಲಾಗುತ್ತಿದೆ ಎಂದು ಕೆ.ಜೆ.ಜಾರ್ಜ್ ತಿಳಿಸಿದರು.

ಮತ ಬ್ಯಾಂಕ್‌ಗಾಗಿ ಓಲೈಕೆ: ಬಿವೈವಿ

• ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಅಧಿಕಾರಾವಧಿಯಲ್ಲಿ ಮತ್ತೆ ವಕ್ಫ್ ಭೂತ ತಲೆ ನುಗ್ಗಿಸಿದೆ! ಸಾವಿರಾರು ರೈತರ ಭೂಮಿ ಪಹಣಿಗಳನ್ನು ವಕ್ಫ್ ಹೆಸರಿನಲ್ಲಿ ಕುಕ್ಕಿ ತಿನ್ನಲು ಹದ್ದಿನ ಕಣ್ಣು ಹಾಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

ವ್ಯವಸ್ಥಿತ ಸಂಚು

ಕಂದಾಯ ಇಲಾಖೆಯ ಮೂಲಕ ನಮ್ಮ ರೈತರ ಭೂಮಿಯ ಮೇಲೆ ಹದ್ದಿನ ಕಣ್ಣಿಟ್ಟಿರುವ ಕಾಂಗ್ರೆಸ್ ಸರ್ಕಾರ, ಭೂದಾಖಲೆಗಳಲ್ಲಿ ನ್ಯಾಯಾಲಯದ ತೀರ್ಪನ್ನು ನುಸುಳಿಸಿ, ವಕ್ಫ್ ಹೆಸರಿನಲ್ಲಿ ರೈತರ ಜಮೀನುಗಳ ಹಕ್ಕನ್ನು ಕಿತ್ತುಕೊಳ್ಳಲು ವ್ಯವಸ್ಥಿತ ಸಂಚು ರೂಪಿಸಿದೆ ಎಂದು ರೈತರೇ ಆತಂಕಪಡುತ್ತಿದ್ದಾರೆ ಎಂದಿದ್ದಾರೆ.



ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸುದೀರ್ಘ ಪೋಸ್ಟ್ ಒಂದನ್ನು ಅವರು ಹಾಕಿದ್ದಾರೆ. ತಲೆತಲಾಂತರಗಳಿಂದ ಬೆವರು ಸುರಿಸಿ, ಉಳುಮೆ ಮಾಡಿ, ಮಣ್ಣನ್ನು ನಂಬಿ ಬದುಕುತ್ತಿರುವ ಮಣ್ಣಿನ ಮಕ್ಕಳಿಗೆ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಗಂಭೀರ ದ್ರೋಹವೆಸಗಿದೆ.

ಭೂ ನ್ಯಾಯ ಮಂಡಳಿಗಳ ಮೂಲಕ ರೈತರಿಗೆ ಹಕ್ಕು ನೀಡುವ ಸಂದರ್ಭದಲ್ಲಿ, ರಾಜ್ಯ ಕಾಂಗ್ರೆಸ್ ಸರ್ಕಾರ ವಕ್ಫ್ ಮಂಡಳಿ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳನ್ನು ಮಂಡಳಿಯಿಂದ ಮೊದಲೇ ಯಾಕೆ ಬಿಡುಗಡೆಗೊಳಿಸಲಿಲ್ಲ? ಈ ಕಾಂಗ್ರೆಸ್ ಸರ್ಕಾರದ ಈ ಪ್ರಮಾದದಿಂದ ರೈತರು ಸಮಸ್ಯೆ ಎದುರಿಸುವಂತಾಗಿದೆ. ರಾಜ್ಯ ಸರ್ಕಾರ ಕೂಡಲೇ ಅಗತ್ಯ ನಿರ್ಧಾರ ತೆಗೆದುಕೊಂಡು ನಮ್ಮ ರೈತರ ಹಿತಾಸಕ್ತಿ ರಕ್ಷಿಸದೇ ಹೋದಲ್ಲಿ ರಾಜ್ಯದೆಲ್ಲೆಡೆ ಪಕ್ಷ ಬೀದಿಗಿಳಿದು ರೈತರ ಪರವಾಗಿ ಹೋರಾಡಲಿದೆ ಎಂದು ಎಚ್ಚರಿಸಿದ್ದಾರೆ. ಕೇವಲ ತಮ್ಮ ಮತ ಬ್ಯಾಂಕ್ ಓಲೈಕೆಗಾಗಿ, ಈ ಕಾಂಗ್ರೆಸ್ ಸರ್ಕಾರ ರಿಯಲ್ ಎಸ್ಟೇಟ್ ಏಜೆಂಟರಂತೆ ವರ್ತಿಸುತ್ತಾ ಲ್ಯಾಂಡ್ ಜಿಹಾದ್‌ಗೆ ಬೆನ್ನೆಲುಬಾಗಿ ನಿಂತಿರುವುದು ಅತ್ಯಂತ ಖಂಡನೀಯ ಹಾಗೂ ಅಕ್ಷಮ್ಯ ಅಪರಾಧ. ಇದು ಕೇವಲ ಆರೋಪವಲ್ಲ, ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ರಾಜ್ಯ ಸರ್ಕಾರದ ಅಂಕಿ-ಅಂಶಗಳೇ ಈ ಗಂಭೀರ ಪರಿಸ್ಥಿತಿಯನ್ನು ಬಿಚ್ಚಿಡುತ್ತಿವೆ.

ರೈತರ ಭೂ ದಾಖಲೆಗಳಲ್ಲಿ ಸೃಷ್ಟಿಸಿರುವ ಇಂತಹ ಗೊಂದಲಗಳಿಗೆ ರಾಜ್ಯ ಸರ್ಕಾರ ತಕ್ಷಣವೇ ಇತಿಶ್ರೀ ಹಾಡಬೇಕು. ವಕ್ಫ್ ಹೆಸರಿನಲ್ಲಿ ರೈತರ ಜಮೀನು ಕಬಳಿಸುವ ಧೋರಣೆ ಕೈಬಿಡಬೇಕು. ಇಲ್ಲದಿದ್ದರೆ, ಅನ್ನದಾತರ ಹಿತ ಕಾಯಲು ಮತ್ತು ಅವರ ಹಕ್ಕನ್ನು ರಕ್ಷಿಸಲು ಪಕ್ಷ ರಾಜ್ಯಾದ್ಯಂತ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾಗಲಿದೆ ಎಂದು ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ಅಕ್ರಮ ಮತದಾರರಿಗೆ ಅವಕಾಶವಿಲ್ಲ: ಸಿ.ಟಿ.ರವಿ

• ಚಿಕ್ಕಮಗಳೂರು: ಎಸ್‌ಐಆರ್ ಉದ್ದೇಶವೇ ನೈಜ ಮತದಾರರು ಅವಕಾಶ ಕಳೆದುಕೊಳ್ಳಬಾರದು, ಕಳ್ಳ ಮತಗಳು ಇರಬಾರದು ಎನ್ನುವುದು. ಆದರೆ, ಕಾಂಗ್ರೆಸ್ಸಿಗೆ ಅಕ್ರಮ ಮತದಾರರೂ ಇರಬೇಕು



ಎನ್ನುವ ಉದ್ದೇಶವಿದೆ. ಇದಕ್ಕೆ ಅವಕಾಶವಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ಎಸ್‌ಐಆರ್ ನಡೆಸುವುದು ಬಿಎಲ್‌ಒಗಳು. ಬಹುತೇಕ ಬಿಎಲ್‌ಒಗಳು ಶಿಕ್ಷಕರು, ಕಂದಾಯ ಇಲಾಖೆ ಅಧಿಕಾರಿಗಳೇ ಆಗಿರುತ್ತಾರೆ. ಕಾಂಗ್ರೆಸ್ ಸರ್ಕಾರ ತೋಳ ಬಂತು ತೋಳ ಎನ್ನುವ ರೀತಿಯಲ್ಲಿ ಜನರಲ್ಲಿ ಭೀತಿ ಹುಟ್ಟಿಸಿ, ತನಗೆ ಬೇಕಾದ ಮತಗಳನ್ನು ಮಾತ್ರ ಉಳಿಸಿಕೊಂಡು, ಉಳಿದ ಮತಗಳನ್ನು ಕತ್ತರಿಸುವ ಯೋಜನೆ ಹಾಕಿಕೊಂಡಂತಿದೆ. ಅದ್ದರಿಂದ ನಾವೂ ಸಹ ಇದನ್ನು ಎಚ್ಚರಿಕೆಯಿಂದ ಗಮನಿಸಲು ಸೂಚನೆ ನೀಡಿದ್ದೇವೆ ಎಂದು ತಿಳಿಸಿದರು.

ಮನೆ ಮನೆಗೆ ಬಂದು ಮ್ಯಾಪಿಂಗ್ ನಡೆಸಿ, ಸಿ ಫಾರ್ಮ್ ನೀಡಲಾಗಿದೆ. ಇದಾದ ಬಳಿಕ ಕರಡು ಮತದಾರರ ಪಟ್ಟಿ ಬರುತ್ತದೆ. ಏನಾದರೂ ದೋಷವಿದ್ದರೆ ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ಹೀಗಿರುವಾಗ, ಯಾವ ಆಧಾರದಲ್ಲಿ ಎಸ್‌ಐಆರ್ ವಿರುದ್ಧ ಕಾಂಗ್ರೆಸ್ಸಿಗರು ಆರೋಪ ಮಾಡುತ್ತಿದ್ದಾರೆ? ಮೂರ್ನಾಲ್ಕು ಕಡೆ ವೋಟ್ ಇರುವವರಿಗೆ ಅವಕಾಶ ಮುಂದುವರಿಯಬೇಕು ಎನ್ನುವುದು ಕಾಂಗ್ರೆಸ್ ಮನಸ್ಥಿತಿ ಎಂದು ಟೀಕಿಸಿದರು. ಸಿಎಎ ವಿರುದ್ಧವೂ ಹೀಗೇ ಮುಸ್ಲಿಮರ ಪೌರತ್ವ ಕಿತ್ತುಕೊಳ್ಳುತ್ತಾರೆ ಎಂದು ಸುಳ್ಳು ಹಬ್ಬಿಸಲಾಯಿತು. ಸ್ವತಃ ಪ್ರಧಾನ ಮಂತ್ರಿಗಳೇ ಇದು ಯಾರ ಪೌರತ್ವವನ್ನೂ ಕಿತ್ತುಕೊಳ್ಳುವುದಿಲ್ಲ, ಬದಲಿಗೆ ನಿರಾಶ್ರಿತರಿಗೆ ಪೌರತ್ವ ನೀಡುತ್ತದೆ ಎಂದು ಸ್ಪಷ್ಟಪಡಿಸಿದರು.

ನಾಡಬಾಂಬ್ ಮೂಲ ಪತ್ತೆಗೆ ಪೊಲೀಸರ ತೀವ್ರ ತನಿಖೆ

ಬಯಲಾಯ್ತು ಕಾರು ಸ್ಫೋಟ ರಹಸ್ಯ

• ತುಮಕೂರು: ಜಿಲ್ಲೆಯ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿ ನಡೆದ ಭೀಕರ ಕಾರು ಸ್ಫೋಟ ಪ್ರಕರಣ ಇಡೀ ರಾಜ್ಯವನ್ನೇ ನಡುಗಿಸಿತ್ತು. ರಮ್ಯಾ ಎಂಬ ಯುವತಿಯ ಅತಿಯಾದ ವ್ಯಾಮೋಹಕ್ಕೆ ಬಿದ್ದಿದ್ದ ನಾಗೇಂದ್ರ ಎಂಬ ಪಾಗಲ್ ಪ್ರೇಮಿ, ಆಕೆ ತನಗೆ ಸಿಗುವುದಿಲ್ಲ ಎಂಬ ಕಾರಣಕ್ಕೆ ನಾಡಬಾಂಬ್ ಸ್ಫೋಟಿಸಿಕೊಂಡು ಕಾರಿನಲ್ಲೇ ಸುಟ್ಟು ಬೂದಿಯಾಗಿದ್ದ. ಕೇವಲ ಎಸ್‌ಎಸ್‌ಎಲ್‌ಸಿ ಓದಿದ್ದ ನಾಗೇಂದ್ರ, ಅಂಕೋಲಾದಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಆದರೆ, ಒಬ್ಬ ಸಾಮಾನ್ಯ ಯುವಕನ ಕೈಗೆ ನಾಡಬಾಂಬ್ ಹೇಗೆ ಸಿಕ್ಕಿತು? ಜೂ.27ರಂದು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ನಾಗೇಂದ್ರ ಎಲ್ಲೆಲ್ಲಿ ಓಡಾಡಿದ್ದ ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕ ಹೊರಟ ಕಳ್ಳಂಬೆಳ್ಳ ಪೊಲೀಸರಿಗೆ ದಿಗಿಲು ಮೂಡಿಸುವ ಆಘಾತಕಾರಿ ಮಾಹಿತಿ ಲಭ್ಯವಾಗಿದೆ.

ನಾಗೇಂದ್ರನ ಕೊನೆ 3 ದಿನಗಳ ಓಡಾಟದ ಇತಿಹಾಸ ಪತ್ತೆ: ಪೊಲೀಸರ ತನಿಖೆ ವೇಳೆ ನಾಗೇಂದ್ರನ ಕೊನೆ 3 ದಿನಗಳ ಸಂಪೂರ್ಣ ಟ್ರಾವೆಲ್ ಹಿಸ್ಟರಿ ರಿವೀಲ್ ಆಗಿದೆ. ಜೂ.25ರಂದು ಬೆಂಗಳೂರಿಗೆ ಬಂದು ರಮ್ಯಾಳನ್ನು ಭೇಟಿಯಾಗಿದ್ದ ನಾಗೇಂದ್ರ, ಅಂದು ರಾತ್ರಿಯೇ ಅಂಕೋಲಾಗೆ ವಾಪಸ್ ಆಗಿದ್ದ. ಜೂ.26 ಇಡೀ ದಿನ ಅಂಕೋಲಾದ ಗಲ್ಲಿ ಗಲ್ಲಿಗಳಲ್ಲಿ ಸುತ್ತಾಡಿ, ಅದೇ ರಾತ್ರಿ ಮತ್ತೆ ಬೆಂಗಳೂರಿಗೆ ಬಂದಿದ್ದ. ಜೂ.27ರ ಬೆಳಗ್ಗೆ ಬೆಂಗಳೂರಿನ ಸಿದ್ದಾಪುರದಲ್ಲಿರುವ ರಮ್ಯಾಳ ಮನೆಯ ಬಾಗಿಲು ತಟ್ಟಿದ್ದ ನಾಗೇಂದ್ರ, ರಮ್ಯಾಳನ್ನು ಮಾತನಾಡಿಸಿಕೊಂಡು ಹೋದವನು ನೇರವಾಗಿ ಶಿರಾದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ಆದರೆ, ಈ ಮೂರು ದಿನಗಳ ಅವಧಿಯಲ್ಲಿ ನಾಗೇಂದ್ರ 10 ಜನರನ್ನು ಖುದ್ದಾಗಿ ಭೇಟಿಯಾಗಿದ್ದ ಹಾಗೂ 8 ಜನರ ಜತೆ ಫೋನ್ ಕಾಲ್ ಮೂಲಕ ಮಾತನಾಡಿದ್ದ ಎಂಬುದು ದೃಢಪಟ್ಟಿದೆ.

ನಾಡಬಾಂಬ್ ಸಿಕ್ಕಿದ್ದು ಹೇಗೆ?

ಪೊಲೀಸರು ನಾಗೇಂದ್ರನ ಸಂಪರ್ಕದಲ್ಲಿದ್ದ ಆ 10 ಜನರನ್ನು ವಿಚಾರಣೆ ನಡೆಸಿದರೂ ನಾಡಬಾಂಬ್ ಬಗ್ಗೆ ಯಾವುದೇ ಸುಳಿವು ಸಿಕ್ಕಿಲ್ಲ. ಏಕೆಂದರೆ, ಅವರೆಲ್ಲರೂ ನಾಗೇಂದ್ರನ ಸಂಬಂಧಿಕರು ಮತ್ತು ಸ್ನೇಹಿತರಾಗಿದ್ದಾರೆ. ಹಾಗಾದರೆ ಈ ನಾಡಬಾಂಬ್ ಎಲ್ಲಿಂದ ಬಂತು? ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಹಳಿಯಾಳ, ಜೋಯಿಡಾ ಮತ್ತು ದಾಂಡೇಲಿ ಅರಣ್ಯ ಭಾಗದಲ್ಲಿ ಕಾಡುಪ್ರಾಣಿಗಳ ಬೇಟೆಗೆ ಬಳಸುವ ನಾಡಬಾಂಬ್ ನಾಗೇಂದ್ರನ ಕೈಗೆ ಸಿಕ್ಕಿದ್ದು ಹೇಗೆ ಎಂಬುದು ಸದ್ಯದ ಯಕ್ಷಪ್ರಶ್ನೆಯಾಗಿದೆ.

ಪ್ರೀತಿಯ ಜಾಲಕ್ಕೆ ಬಿದ್ದು ಯುವಕನ ದಾರುಣ ಅಂತ್ಯ ನಾಗೇಂದ್ರ, ತನಗೆ ಚಿತ್ರಹಿಂಸೆ ಕೊಡುತ್ತಿದ್ದ, ತನ್ನ ಮೇಲೆ ಅನುಮಾನ ಪಡುತ್ತಿದ್ದ ಎಂದು ರಮ್ಯಾ ಆರೋಪ ಮಾಡುತ್ತಿದ್ದರೆ, ಇತ್ತ ನಾಗೇಂದ್ರನ ಸಂಬಂಧಿಕರು ಹಾಗೂ ಪರಿಚಯಸ್ಥರು ಆತನ ವ್ಯಕ್ತಿತ್ವಕ್ಕೆ ಉತ್ತಮ ಎಂದು ತಿಳಿಸಿದ್ದಾರೆ. ಊರಿನಲ್ಲಿ ಯಾರ ತಂಟೆಗೂ ಹೋಗದ ಉತ್ತಮ ವ್ಯಕ್ತಿಯಾಗಿದ್ದ ನಾಗೇಂದ್ರ, ಹಾಳಾಗಿದ್ದೇ ರಮ್ಯಾಳನ್ನು ಪ್ರೀತಿ ಮಾಡಿದ ಮೇಲೆ ಎಂದು ಆತನ ನೆಂಟರು ಮತ್ತು ಅಪ್ಪರು ಆಕ್ರೋಶ ಹೊರಹಾಕಿದ್ದಾರೆ. ಸಾವಿನ ರಹಸ್ಯದ ಜತೆಗೆ, ಆತ ಬಳಸಿದ ನಾಡಬಾಂಬ್‌ನ ಮೂಲ ಪತ್ತೆ ಮಾಡಲು ತನಿಖೆ ಚುರುಕುಗೊಳಿಸಿದ್ದಾರೆ.

ವಿದ್ಯುತ್ ಖಾಸಗೀಕರಣ: ಬಂದ್‌ಗೆ ಉತ್ತಮ ಪ್ರತಿಕ್ರಿಯೆ

• ಸಾಗರ: ವಿದ್ಯುತ್ ಖಾಸಗೀಕರಣ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಶಿವಮೊಗ್ಗ ಜಿಲ್ಲಾ ಘಟಕ ಸೋಮವಾರ ನೀಡಿದ ಸಾಗರ ಬಂದ್ ಭಾಗಶಃ ಯಶಸ್ಸು ಕಂಡಿದೆ.

ಸಾಗರ ಬಂದ್ ಹಿನ್ನೆಲೆಯಲ್ಲಿ ರೈತ ಸಂಘದ ಪ್ರಮುಖರು ಬೆಳಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಅಂಗಡಿ ಮುಂಗಟ್ಟು, ಹೋಟೆಲ್ ಮಾಲೀಕರ ಬಳಿ ತಮ್ಮ ವಹಿವಾಟು ನಿಲ್ಲಿಸುವ ಮೂಲಕ ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದ್ದರು.

ಇನ್ನು ಕೆಲವರು ಬಂದ್ ಮಾಡಲು ನಿರಾಕರಿಸಿದಾಗ ರೈತರು ನಿಮ್ಮ ಅಂಗಡಿಗಳಲ್ಲಿ ಮುಂದಿನ ದಿನಗಳಲ್ಲಿ ಯಾವುದೇ ವಸ್ತುಗಳನ್ನು ಖರೀದಿಸುವುದಿಲ್ಲ ಎನ್ನುವ ಎಚ್ಚರಿಕೆ ಸಹ ನೀಡಿದ್ದು ಕಂಡು ಬಂದಿತು.

ನಗರದ ಪ್ರಮುಖ ಬೀದಿಗಳಲ್ಲಿ ಬಹುತೇಕ ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚಿದ್ದರೇ, ಬಸ್ ಸೌಲಭ್ಯ, ಸರ್ಕಾರಿ ಕಚೇರಿ, ಬ್ಯಾಂಕ್, ಶಾಲಾಕಾಲೇಜು ಎಂದಿನಂತೆ ಕಾರ್ಯನಿರ್ವಹಿಸಿವೆ. ಸಾಗರದ ಮಹಾಗಣಪತಿ ದೇವಸ್ಥಾನದ ಬಳಿ ಮೆರವಣಿಗೆಗೆ ಜಿಪಂ ಮಾಜಿ ಸದಸ್ಯ ಬಿ.ಆರ್. ಜಯಂತ್ ಹಸಿರು ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು.

ಪ್ರತಿಭಟನೆಯಲ್ಲಿ ಸಾವಿರಾರು ರೈತರು ಪಾಲ್ಗೊಂಡಿದ್ದರೇ, ಗ್ರಾಮೀಣ ಭಾಗದಿಂದ ರೈತರು ನೂರಾರು ಟ್ರ್ಯಾಕ್ಟರ್‌ಗಳಲ್ಲಿ ಆಗಮಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮಳೆಯ ನಡುವೆಯೂ ರೈತರು ವಿದ್ಯುತ್ ಖಾಸಗೀಕರಣದ ವಿರುದ್ಧ ಘೋಷಣೆ ಕೂಗಿ, ಉಪವಿಭಾಗಾಧಿಕಾರಿಗಳ ಕಚೇರಿಗೆ ಆಗಮಿಸಿ ಮನವಿ ಸಲ್ಲಿಸಿದರು.

ಮುಂಗಾರು ಮಳೆ ಮಾತ್ರವಲ್ಲ ಹಿಂಗಾರಲ್ಲೂ ಕೊರತೆ ಸಾಧ್ಯತೆ

• ಮಡಿಕೇರಿ: ಈ ಸಾಲಿನಲ್ಲಿ ಮುಂಗಾರು ಮಾತ್ರವಲ್ಲದೆ, ಹಿಂಗಾರು ಅವಧಿಯಲ್ಲೂ ಮಳೆಯ ಕೊರತೆಯಾಗುವ ಸಂಭವವಿದ್ದು, ಈ ನಿಟ್ಟಿನಲ್ಲಿ ಸರಕಾರ ಹಾಗೂ ಇತರ ಸಂಸ್ಥೆಗಳು ಸೂಕ್ತ ಮುಂಜಾಗರೂಕತೆಯ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಬೆಂಗಳೂರಿನ ಹಿರಿಯ ಭೂವಿಜ್ಞಾನಿ ಎಚ್.ಎಸ್.ಎಂ.ಪ್ರಕಾಶ್ ಸಲಹೆ ಮಾಡಿದ್ದಾರೆ.

ಜಿಯೋಮೆಟಿಯೊರಾಲಜಿ (Geometeorology) ಅಧ್ಯಯನದ ಪ್ರಕಾರ, ಈಗಾಗಲೇ ಕಂಡು ಬಂದಿರುವ ಮಳೆಯ ಕೊರತೆಗೆ ಭಾರತದ ಸುತ್ತಮುತ್ತ ಹಾಗೂ ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಇರುವ ಅನಿಯ ಮೂಲಗಳಾದ ಜ್ವಾಲಾಮುಖಿಗಳ ಚಟುವಟಿಕೆಗಳು ಇಳಿಮುಖವಾಗಿರುವುದೇ ಕಾರಣ ಎಂದು ಅವರು ಹೇಳಿದ್ದಾರೆ.

ಮುಂದಿನ ಆರು ತಿಂಗಳುಗಳ ಚಟುವಟಿಕೆಗಳ ಮುನ್ಸೂಚನಾ ವರದಿಗಳ ಅಧ್ಯಯನದ ಪ್ರಕಾರ ಮುಂಗಾರು ಮಾತ್ರವಲ್ಲದೆ, 2026ರ ಹಿಂಗಾರು ಅವಧಿಯಾದ ಅಕ್ಟೋಬರ್, ನವೆಂಬರ್ ಡಿಸೆಂಬರ್ ತಿಂಗಳುಗಳಲ್ಲಿಯೂ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ. ಅದರಿಂದಾಗಿ ಮತ್ತಷ್ಟು ಕೊರತೆ ಉಂಟಾಗುವ ಸಾಧ್ಯತೆಯೂ ಇದೆ ಎಂದು ಅವರು ವಿವರಿಸಿದ್ದಾರೆ.

ಎಲ್ ನಿನೋ ಪರಿಸ್ಥಿತಿಗೂ ಸಹ ಸಮುದ್ರದೊಳಗಿನ ಭೀಕರ ಜ್ವಾಲಾಮುಖಿಗಳು ಕಾರಣ ಎನ್ನುವುದನ್ನು ವಿಜ್ಞಾನಿಗಳು ಗಮನಿಸಬೇಕು. ಇದರ ಬಗ್ಗೆ ಸರಕಾರ ಹಾಗೂ ಇತರ ಸಂಸ್ಥೆಗಳು ಸೂಕ್ತ ಮುಂಜಾಗರೂಕತೆಯ ಕ್ರಮಗಳನ್ನು ಜಾರಿಗೊಳಿಸಬೇಕೆಂದು ಅವರು ಸಲಹೆ ಮಾಡಿದ್ದಾರೆ.


ವಿಶಿಷ್ಟಚೇತನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಸರ್ಕಾರದ ಹೆಜ್ಜೆ | ಸುತ್ತೋಲೆಗೆ ಅಸಮಾಧಾನ

ವಿದ್ಯಾರ್ಥಿಗಳಿಗೆ ಮುಳ್ಳಾದ ಸರ್ಕಾರದ ಭಾಷಾ ವಿನಾಯಿತಿ

• ನಂದಿನಿ ಎನ್.

• ಬೆಂಗಳೂರು: ವಿಶಿಷ್ಟಚೇತನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಪದವಿಪೂರ್ವ ಕಾಲೇಜು (ಪಿಯುಸಿ) ವಿದ್ಯಾರ್ಥಿಗಳಿಗೆ ರಾಜ್ಯಸರ್ಕಾರ ನೀಡಿದ್ದ ಭಾಷಾ ವಿನಾಯಿತಿ ಅವರ ಇಂಜಿನಿಯರಿಂಗ್ ಶಿಕ್ಷಣದ ಕನಸನ್ನೇ ಮೊಟಕುಗೊಳಿಸಿದೆ.

ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ಕಲಿಯುತ್ತಿದ್ದ ವಿವಿಧ ನ್ಯೂನತೆಯುಳ್ಳ ಅಂಗವಿಕಲ ವಿದ್ಯಾರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆ ಆದೇಶದಂತೆ 2024-25 ಹಾಗೂ 2025- 26ನೇ ಸಾಲಿನಲ್ಲಿ ಒಂದು ಭಾಷಾ ವಿಷಯದಿಂದ ವಿನಾಯಿತಿ ನೀಡಿ ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆ ಪ್ರಕಾರ ಪ್ರಥಮ, ದ್ವಿತೀಯ ಪಿಯು ವಿದ್ಯಾರ್ಥಿಗಳು ಎರಡು ಭಾಷಾ ವಿಷಯಗಳಲ್ಲಿ ಒಂದನ್ನು ಮಾತ್ರ ಅಧ್ಯಯನ ಮಾಡಿ, ಮತ್ತೊಂದು ವಿಷಯವನ್ನು ಕೈಬಿಡಲು ಅವಕಾಶ ನೀಡಲಾಗಿತ್ತು. ಕೆಲ ವಿದ್ಯಾರ್ಥಿಗಳು ಕನ್ನಡ ವಿಷಯವನ್ನು (ಬಹುತೇಕ ನಗರ ಪ್ರದೇಶದ ಅಂಗವಿಕಲ ವಿದ್ಯಾರ್ಥಿಗಳು) ಕೈಬಿಟ್ಟು, ಕೆಲ



ವಿದ್ಯಾರ್ಥಿಗಳು ಇಂಗ್ಲಿಷ್ ವಿಷಯವನ್ನು (ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳು) ಕೈಬಿಟ್ಟು ಒಂದು ವಿಷಯ ಆಯ್ಕೆ ಮಾಡಿಕೊಂಡಿದ್ದರು. ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಒಂದು ವಿಷಯದ ಹೊರೆ ಕಡಿಮೆಯಾದ ಕಾರಣ ವಿಶೇಷಚೇತನ ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದರು. ಶೇಕಡಾವಾರು ಪರಿಗಣಿಸುವಾಗ ಪರೀಕ್ಷೆ ಬರೆದ ವಿಷಯಗಳ ಸರಾಸರಿ ಅಂಕಗಳನ್ನು ತೆಗೆದುಕೊಂಡು ಫಲಿತಾಂಶ ನೀಡಲಾಗಿತ್ತು.

ಪ್ರಕಟವಾಗದ ಇಂಜಿನಿಯರಿಂಗ್ ರ‍್ಯಾಂಕ್: ಉತ್ತಮ ಅಂಕಗಳೊಂದಿಗೆ ದ್ವಿತೀಯ ಪಿಯು ತೇರ್ಗಡೆಯಾಗಿದ್ದ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಪ್ರವೇಶದ ಕನಸುಗಳೊಂದಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಡೆಸಿದ 2026-27ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆದಿದ್ದರು. ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸುವ ವಿಶ್ವಾಸ ಹೊಂದಿದ್ದ ಅವರಿಗೆ ಸಿಇಟಿ ಫಲಿತಾಂಶ ಪ್ರಕಟವಾದಾಗ ತಮ್ಮ ಹೆಸರು ರ‍್ಯಾಂಕ್ ಪಟ್ಟಿಯಲ್ಲಿ ಇಲ್ಲದಿದ್ದನ್ನು ಕಂಡು ಗಾಬರಿಯಾಗಿದ್ದರು.

ಪ್ರಕಟವಾಗದ ಮೂರು ಕೋರ್ಸ್‌ಗಳ ಸೀಟು: ಇಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅಭ್ಯರ್ಥಿಗಳು ತಮಗೆ ಇಚ್ಛೆ ಇರುವ ಕಾಲೇಜು ಹಾಗೂ ಕೋರ್ಸಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಮೂರು ದಿನಗಳಷ್ಟೇ ಬಾಕಿ ಇದ್ದರೂ ಬಿ-ಫಾರ್ಮಾ, ಫಾರ್ಮಾ-ಡಿ, ಯೋಗ ಮತ್ತು ನ್ಯಾಚುರೋಪತಿ ಸೀಟುಗಳ ಲಭ್ಯತಾ ಪಟ್ಟಿ (ಸೀಟ್ ಮ್ಯಾಟ್ರಿಕ್ಸ್) ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ತಲುಪಿಲ್ಲ. ಇಂಜಿನಿಯರಿಂಗ್, ಪಶು ವೈದ್ಯಕೀಯ, ಕೃಷಿ,ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿಯನ್ನು ಕೆಇಎ ಈಗಾಗಲೇ ಪ್ರಕಟಿಸಿದ್ದು, ಆಯ್ಕೆ ದಾಖಲಿಸಲು ಜೂ.30ರ ಬೆಳಗ್ಗೆ 10ರವರೆಗೆ ಸಮಯ ನೀಡಲಾಗಿದೆ. ಆದರೆ, ಬಿ-ಫಾರ್ಮಾ, ಫಾರ್ಮಾ-ಡಿ, ಯೋಗ, ನ್ಯಾಚುರೋಪತಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಿದ್ಧತೆ ನಡೆಸುವ ವಿದ್ಯಾರ್ಥಿಗಳು ಸೀಟು ಲಭ್ಯತಾ ಪಟ್ಟಿ ಪ್ರಕಟವಾಗದ ಕಾರಣ ಅನಿವಾರ್ಯವಾಗಿ ಮೂರು ಕೋರ್ಸ್‌ಗಳನ್ನು ಕೈಬಿಟ್ಟು ಇತರ ಕೋರ್ಸ್‌ಗಳನ್ನು ನಮೂದಿಸುತ್ತಿದ್ದಾರೆ.

> ಈಗಾಗಲೇ ವೈದ್ಯಕೀಯ ಪ್ರವೇಶಕ್ಕೆ ನೀಟ್ ಫಲಿತಾಂಶ ವಿಳಂಬವಾಗುತ್ತಿದ್ದು ವೈದ್ಯಕೀಯ ಆಕಾಂಕ್ಷಿಗಳೂ ಸಿಇಟಿ ಕೌನ್ಸಿಲಿಂಗ್‌ನಲ್ಲಿ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ನಮೂದಿಸುತ್ತಿದ್ದಾರೆ. ಫಾರ್ಮಾ ಸೇರಿದಂತೆ ಅರೆ ವೈದ್ಯಕೀಯ ಕೋರ್ಸ್‌ಗಳ ವಿದ್ಯಾರ್ಥಿಗಳೂ ಇಂಜಿನಿಯರಿಂಗ್ ನಮೂದಿಸಿದರೆ ಇತರೆ ವಿದ್ಯಾರ್ಥಿಗಳಿಗೆ ಉತ್ತಮ ಕಾಲೇಜುಗಳ ಆಯ್ಕೆಗೆ ತೊಡಕಾಗುತ್ತದೆ. ನಂತರ ಅವರು ಬಿಟ್ಟು ಹೋದರೆ ನಮಗಿಂತ ಹಿಂದಿನ ವಿದ್ಯಾರ್ಥಿಗಳಿಗೆ ಒಳ್ಳೆಯ ಕಾಲೇಜುಗಳು, ವಿಭಾಗ ಸಿಗುತ್ತವೆ. ಇದು ಸರಿಯಾದ ಕ್ರಮವಲ್ಲ ಎಂದು ದೂರುತ್ತಾರೆ.
>
> ■ ಅಂಜನ್ ಕುಮಾರ್, ವಿದ್ಯಾರ್ಥಿ

ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ

ಗ್ರಾಮೀಣ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ಬದ್ಧ



ಶಿರಾಳಕೊಪ್ಪ: ರಾಜ್ಯದ ಜನರ, ವಿಶೇಷವಾಗಿ ರೈತರು, ಮಹಿಳೆಯರು, ಯುವಕರು ಹಾಗೂ ಬಡವರ ಅಭಿವೃದ್ಧಿಗಾಗಿ 2028ರ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸವನ್ನು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ವ್ಯಕ್ತಪಡಿಸಿದರು.

ತಾಲೂಕಿನ ಜಾವಗಟ್ಟೆಯಲ್ಲಿ ಶಾಸಕರ ಬೂತ್ ಪ್ರವಾಸ ಕಾರ್ಯಕ್ರಮದ ಅಂಗವಾಗಿ ತೊಗರ್ಸಿ ಭಾಗದ ಎಸ್ಸಿ ಮತ್ತು ಎಸ್ಟಿ ಸಮುದಾಯದ ಮುಖಂಡರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನೆಯಲ್ಲಿ ಎಂದಿಗೂ ಜಾತಿ ಅಥವಾ ಪಂಕ್ತಿ ಭೇದಕ್ಕೆ ಅವಕಾಶ ನೀಡಿಲ್ಲ ಎಂಬ ಹೆಮ್ಮೆ ನಮಗಿದೆ ಎಂದರು.

ಯಡಿಯೂರಪ್ಪ ನೇತೃತ್ವದ ಸರ್ಕಾರದ ಅವಧಿಯಲ್ಲಿ ಪ್ರಕೃತಿ ವಿಕೋಪದಿಂದ ಮನೆ ಕಳೆದುಕೊಂಡವರಿಗೆ 5 ಲಕ್ಷ ಪರಿಹಾರ ನೀಡಲಾಗುತ್ತಿತ್ತು. ಆದರೆ ಈಗ 1 ಲಕ್ಷ ಪರಿಹಾರ ಪಡೆಯುವುದೇ ಕಷ್ಟಕರವಾಗಿದೆ. ವಿದ್ಯುತ್ ಸಂಪರ್ಕಕ್ಕಾಗಿ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳಲು 3 ಲಕ್ಷವರೆಗೆ ವೆಚ್ಚವಾಗುತ್ತಿರುವುದು ರೈತರಿಗೆ ದೊಡ್ಡ ಹೊರೆ ಆಗಿದೆ ಎಂದು ಸರ್ಕಾರದ ವಿರುದ್ಧ ಟೀಕಿಸಿದರು.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಕೆ.ಎಸ್. ಗುರುಮೂರ್ತಿ ಮಾತನಾಡಿ, ರಾಜ್ಯದಲ್ಲಿ ಬರಗಾಲದ ಛಾಯೆ ಆವರಿಸಿದ್ದು, ತಾಲೂಕಿನಲ್ಲೂ ರೈತರ ಆತ್ಮಹತ್ಯೆಗಳು ನಡೆದಿವೆ. ಇಂತಹ ಸಂದರ್ಭದಲ್ಲಿ ಶಾಸಕರು ಗ್ರಾಮಗಳಲ್ಲಿ ವಾಸ್ತವ್ಯ ಹೂಡಿ ಜನರ ಸಮಸ್ಯೆಗಳನ್ನು ಆಲಿಸುತ್ತಿರುವುದು ಮಾದರಿ ಕಾರ್ಯವಾಗಿದ್ದು, ಗ್ರಾಮೀಣ ಜನರ ಬಗ್ಗೆ ಅವರಿಗಿರುವ ಕಾಳಜಿಯನ್ನು ತೋರಿಸುತ್ತದೆ ಎಂದು ಹೇಳಿದರು.

ಬಳಿಕ ಬಳ್ಳಿಗಾವಿ ಗ್ರಾಮದಲ್ಲಿ ಸಂಜೀವಿನಿ ಸ್ವಸಹಾಯ ಸಂಘಗಳ ಮಹಿಳೆಯರೊಂದಿಗೆ ಸಂವಾದ ನಡೆಸಿದ ವಿಜಯೇಂದ್ರ, ಅವರಿಗೆ ಮಹಿಳೆಯರು ಹಾಲಿನ ಖರೀದಿ ದರ ಕಡಿಮೆಯಾಗಿರುವುದು, ಪಶು ಆಹಾರದ ಬೆಲೆ ಹೆಚ್ಚಿರುವುದು ಹಾಗೂ ಗ್ರಾಹಕರಿಗೆ ಹಾಲು ದುಬಾರಿಯಾಗಿ ಮಾರಾಟವಾಗುತ್ತಿದ್ದರೂ ಅದರ ಲಾಭ ರೈತರಿಗೆ ತಲುಪುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ಇದೇ ವೇಳೆ ಮಳೂರು ಗ್ರಾಮಕ್ಕೆ ಇದುವರೆಗೆ ಬಸ್ ಸಂಪರ್ಕ ಕಲ್ಪಿಸಿಲ್ಲ, ತಕ್ಷಣ ಸಾರಿಗೆ ವ್ಯವಸ್ಥೆ ಒದಗಿಸಬೇಕು ಎಂದು ಗ್ರಾಮಸ್ಥರು ಮನವಿ ಸಲ್ಲಿಸಿದರು. ಅಲ್ಲದೆ ಗ್ರಾಮದ 150ಕ್ಕೂ ಹೆಚ್ಚು ಕುಟುಂಬಗಳಿಗೆ ಇನ್ನೂ ಹಕ್ಕುಪತ್ರ ದೊರೆತಿಲ್ಲ, ಶೀಘ್ರವೇ ಮಂಜೂರು ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಅರಣ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಕೆ. ರೇವಣಪ್ಪ, ತಾಲೂಕು ಬಿಜೆಪಿ ಅಧ್ಯಕ್ಷ ಸಂಕ್ಲಾಪುರ ಹನುಮಂತಪ್ಪ, ಜಾವಗಟ್ಟೆ ಈಶ್ವರ, ಮಳೂರು ಸುರೇಶ್ ಗೌಡ್ರು, ತಾಳಗುಂದ ಸತೀಶ್, ಬಳಿಕ ದಿನೇಶ್, ವೀರಣ್ಣ ನಿರಂಜನ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು. ಜಾವಗಟ್ಟೆ ಹಾಗೂ ಬಳ್ಳಿಗಾವಿ ಗ್ರಾಮಗಳಲ್ಲಿ ಗ್ರಾಮಸ್ಥರು ಸಿಡಿಮದ್ದು ಸಿಡಿಸಿ, ಡಾಂಕ್ ಮೇಳದೊಂದಿಗೆ ಭವ್ಯ ಸ್ವಾಗತ ಕೋರಿದರು.

ಮತದಾರರ ಹಕ್ಕು ಕಡಿತವಾಗಬಾರದು

ಹರಿಹರ: ನೈಜ ಮತದಾರರ ಹಕ್ಕು ಯಾವುದೇ ಕಾರಣಕ್ಕೂ ಕಡಿತವಾಗದಂತೆ ಗಮನಹರಿಸಬೇಕೆಂದು ಕಮ್ಯುನಿಸ್ಟ್ ಪಕ್ಷ ಹಾಗೂ ವಿವಿಧ ಸಮುದಾಯಗಳ ಮುಖಂಡರು ಅಧಿಕಾರಿಗಳಲ್ಲಿ ಒತ್ತಾಯಿಸಿದರು.

20 ವರ್ಷಗಳ ನಂತರ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಈಗ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಗಳು ಜೂ.30 ರಿಂದ ಒಂದು ತಿಂಗಳ ಕಾಲ ಮತದಾರರ ಮನೆ ಮನೆಗೆ ಭೇಟಿ ನೀಡಿ, ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಆಗಲಿದೆ.

ಜೊತೆಗೆ ರಾಜಕೀಯ ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟ್‌ಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವ ವಿಷಯ ತಿಳಿದಿದೆ ಎಂದ ಮುಖಂಡರು, ಬಿಎಲ್‌ಒ ಹಾಗು ಬಿಎಲ್‌ಎಜೊತೆಗೆ ಸ್ಥಳೀಯ ವಿವಿಧ ಸಮುದಾಯಗಳ ಮುಖಂಡರನ್ನು, ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು, ಸಮಾಜಮುಖಿ ಕಾರ್ಯಕರ್ತರನ್ನು ಇದರಲ್ಲಿ ಸೇರ್ಪಡೆಮಾಡಿದರೆ, ಮತದಾರರ ಪಟ್ಟಿ ಪರಿಷ್ಕರಣೆಗೆ ಹೆಚ್ಚು ಅನುಕೂಲ ವಾಗುವುದಲ್ಲದೇ ಪಾರದರ್ಶಕವಾಗಿಯೂ ಇರುತ್ತೆ ಎಂದು ಅಗ್ರಹಿಸಿದರು.

ಪ್ರಮುಖರಾದ ಎಚ್.ಕೆ.ಕೊಟ್ರಪ್ಪ, ಹೆಚ್. ನಿಜಗುಣ, ಮುಜಾಮಿಲ್ ಬಿಲ್ಲು, ಅಕಾಪ್ಸಲ್ಲ, ಅಬ್ದುಲ್‌ರಹೀಮ್, ಇಮ್ಮುರಾಜು, ಶ್ಯಾಮುವೆಲ್, ಜಿತೇಂದ್ರಮೂರ್ತಿ, ಬಿಣಕಾರ್ ಪರಮೇಶಪ್ಪ, ಕುಮಾರ್ ನಾಯಕ್ ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ

ನಗರ ಯೋಜನಾ ಪ್ರಾಧಿಕಾರ, ಹರಪನಹಳ್ಳಿ-583131 ವಿಜಯನಗರ ಜಿಲ್ಲೆ

mail: ka.harapanahalli.tmc@gmail.com Website: harapanahallitown.mrc.gov.in

ಕ್ರ.ಸಂ/ನ.ಯೋ.ಪ್ರಾ.ಹಹಳ್ಳಿ/ HRPN-LBPAS-10053/CLU/2026-27 ದಿನಾಂಕ: 24-06-2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಹರಪನಹಳ್ಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ1961ರ ಕಲಂ 69(ಎ)(ಬಿ)ರನ್ವಯ ಈ ಕೆಳಕಂಡಂತೆ ಅರ್ಜಿದಾರರು ಹರಪನಹಳ್ಳಿ ನಗರದ ಅನುಮೋದಿತ ಮಹಾಯೋಜನೆಯಲ್ಲಿ ಭೂ ಉಪಯೋಗ ಬದಲಾವಣೆ ಕೋರಿರುತ್ತಾರೆ.

ಅರ್ಜಿದಾರರ ಹೆಸರು	ಗ್ರಾಮ	ರಿ.ಸ.ನಂ	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಅರ್ಜಿದಾರರು ಕೋರಿರುವ ಭೂ ಉಪಯೋಗ	ವಿಸ್ತೀರ್ಣ ಎ-ಸೆಂ
ಶ್ರೀ ಹೆಚ್.ಸುರೇಂದ್ರನಾಥ್ ಬಿನ್ ಲೇಟ್ ಹೆಚ್.ಸದಾಶಿವಪ್ಪ	ಹರಪನಹಳ್ಳಿ	42/ಎ	ಉದ್ಯಾನವನ/ಬಯಲು ಜಾಗ ವಲಯ	ವಸತಿ ವಲಯ	02 ಎಕರೆ 02 ಸೆಂಟ್ಸ್ ಪೈಕಿ 01 ಎಕರೆ 25 ಸೆಂಟ್ಸ್

ಹರಪನಹಳ್ಳಿ ನಗರದ ಪ್ರಸ್ತಾಪಿತ ಜಮೀನಿನ ಸರ್ವೆ ನಂಬರ್ 42/ಎ ರಲ್ಲಿ ಕ್ಷೇತ್ರ 02 ಎಕರೆ 02 ಸೆಂಟ್ಸ್ ಪೈಕಿ 0.77 ಸೆಂಟ್ಸ್ ವಸತಿ ವಲಯದಲ್ಲಿದ್ದು, ಉಳಿದ 01 ಎಕರೆ 25 ಸೆಂಟ್ಸ್ ಉದ್ಯಾನವನ / ಬಯಲುಜಾಗ ವಲಯದಲ್ಲಿರುತ್ತದೆ. ಈ ಜಮೀನಿಗೆ ನೇರ ರಸ್ತೆ ಸಂಪರ್ಕ ವಿರುವುದಿಲ್ಲ, ಆದರೆ ಈ ಜಮೀನಿನ ದಕ್ಷಿಣದಲ್ಲಿ ಸರ್ವೆ ನಂಬರ್ 42/1ರ ಕ್ಷೇತ್ರ 02 ಎಕರೆ ಜಮೀನು ಹರಪನಹಳ್ಳಿಯಿಂದ ಕಾಯಕದಹಳ್ಳಿ ಹೋಗುವ ಹಾಲಿ 09.00 ಮೀಟರ್ ಅಗಲದ ರಸ್ತೆ ಸಂಪರ್ಕ ಪಡೆದು ಕೊಂಡಿರುತ್ತದೆ.

ಮುಂದುವರೆದು, ಸರ್ವೆ ನಂಬರ್ 42/ಎ ರಲ್ಲಿ ಅದರ ಕ್ಷೇತ್ರ 02 ಎಕರೆ 02 ಸೆಂಟ್ಸ್ ಹಾಗೂ ಸರ್ವೆ ನಂಬರ್ 42/1 ರಲ್ಲಿ ಅದರ ಕ್ಷೇತ್ರ 02 ಎಕರೆ ಒಟ್ಟು ಕ್ಷೇತ್ರ 04 ಎಕರೆ 02 ಸೆಂಟ್ಸ್ ಜಮೀನನ್ನು ಒಟ್ಟುಗೂಡಿಸಿ ಜಂಟಿಯಾಗಿ ವಿನ್ಯಾಸ ಅಭಿವೃದ್ಧಿ ಪಡಿಸುತ್ತೇವೆ ಎಂದು ಜಮೀನಿನ ಮಾಲೀಕರು ಒಪ್ಪಿಗೆ ಪತ್ರ ಸಲ್ಲಿಸಿರುತ್ತಾರೆ. ಅದರಂತೆ ಪ್ರಸ್ತಾಪಿತ ಜಮೀನಿನ ಸರ್ವೆ ನಂಬರ್ 02 ಎಕರೆ 02 ಸೆಂಟ್ಸ್ ಪೈಕಿ 0.77 ಸೆಂಟ್ಸ್ ವಸತಿ ವಲಯದಲ್ಲಿರುವ ಜಮೀನನ್ನು ಹೊರತು ಪಡಿಸಿ ಉಳಿದ ಕ್ಷೇತ್ರ 01 ಎಕರೆ 25 ಸೆಂಟ್ಸ್ ಉದ್ಯಾನವನ / ಬಯಲು ಜಾಗದಲ್ಲಿರುವ ಜಮೀನಿನಲ್ಲಿ ನಾಗರೀಕ ಸೌಲಭ್ಯ ಒಳಗೊಂಡಂತೆ ಯೋಜಿತ ಬೆಳವಣಿಗೆಯ ಒಟ್ಟುಗೂಡಿಸಿ ವಸತಿ ವಿನ್ಯಾಸವನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ.

ಆದ್ದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (ಎ)(ಬಿ) ರ ಪ್ರಕಾರ ಉದ್ಯಾನವನ /ಬಯಲುಜಾಗ ಉದ್ದೇಶದಿಂದ ವಸತಿ ಉದ್ದೇಶಕ್ಕಾಗಿ ಹೊಸ ಭೂ-ಉಪಯೋಗ ನಿಗದಿಪಡಿಸುವ ಸಂಬಂಧವಾಗಿ ಸಾರ್ವಜನಿಕರಿಂದ ಯಾವುದಾದರು ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಪೌರಾಯುಕ್ತರು/ಸದಸ್ಯ ಕಾರ್ಯದರ್ಶಿಗಳು, ನಗರ ಯೋಜನಾ ಪ್ರಾಧಿಕಾರ, ಹರಪನಹಳ್ಳಿ ಇವರಿಗೆ ಲಿಖಿತ ರೂಪದಲ್ಲಿ ಅಥವಾ ಮುದ್ದಾಂಗಿಯಾಗಲೀ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಸದಸ್ಯ ಕಾರ್ಯದರ್ಶಿ
ಹಾಗೂ ಪೌರಾಯುಕ್ತರು,ನಗರ ಯೋಜನಾ ಪ್ರಾಧಿಕಾರ,
ಹರಪನಹಳ್ಳಿ

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ-577501

ಅಶೋಕನಗರ ರಸ್ತೆ, ಪಿ.ಬಿ. ರೋಡ್, ಚಿತ್ರದುರ್ಗ. e-mail:cuda.cta@rediffmail.com, ದೂರವಾಣಿ ಸಂಖ್ಯೆ: 08194-222984

CUDA-LBPAS-00213/26-27/CLU ದಿನಾಂಕ: 24.06.2026

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ 14(ಎ) ರ ಮೇರೆಗೆ ಪ್ರಕಟಣೆ

ಈ ಕೆಳಗೆ ನಮೂದಿಸಿರುವ ಜಮೀನು ಸರ್ಕಾರದಿಂದ ಅಂಗೀಕೃತವಾಗಿರುವ ಮಹಾಯೋಜನೆ ಪರಿಷ್ಕೃತ-1ರ ಪ್ರಕಾರ ಕೃಷಿ ವಲಯದಲ್ಲಿರುವ ಪ್ರದೇಶವನ್ನು ವಾಣಿಜ್ಯೋಪಯೋಗದ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಅರ್ಜಿದಾರರು ಕೋರಿರುತ್ತಾರೆ. ಪ್ರಶ್ನಿತ ಜಮೀನಿನ ಪ್ರದೇಶವು ವೇಗವಾಗಿ ಬೆಳೆಯುತ್ತಿದ್ದು, ವಾಸದ ಉದ್ದೇಶದ ನಿವೇಶನಗಳಿಗೆ ಹೆಚ್ಚಿನ ಬೇಡಿಕೆಯಿರುತ್ತದೆ. ಆದುದರಿಂದ ಪ್ರಶ್ನಿತ ಜಮೀನನ್ನು ವಾಸದ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಂಡು ವಿನ್ಯಾಸ ಅನುಮೋದನೆ ಪಡೆದು, ಕೈಗೆಟುಕುವ ದರದಲ್ಲಿ ಸಾರ್ವಜನಿಕರಿಗೆ ನಿವೇಶನಗಳನ್ನು ಮಾರಾಟ ಮಾಡುವ ಸಾರ್ವಜನಿಕ ಹಿತಾಸಕ್ತಿಯ ಅಂಶವನ್ನು ಒಳಗೊಂಡಿದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ. ಸದರಿ ಪ್ರದೇಶಕ್ಕೆ ಅನುಮೋದಿತ ಬಡಾವಣೆ ರಸ್ತೆಯಿಂದ ಸಂಪರ್ಕವಿರುತ್ತದೆ.

ಕ್ರ ಸಂ	ಅರ್ಜಿದಾರರ ಹೆಸರು	ಗ್ರಾಮ	ರಿ.ಸ.ನಂ.	ಕ್ಷೇತ್ರ		ಜಮೀನಿನ ಹಾಲಿ ಭೂ ಉಪಯೋಗ	ಅರ್ಜಿದಾರರು ಬಯಸಿದ ಭೂ ಉಪಯೋಗ
				ಎಕರೆ	ಗುಂಟೆ		
1	ಶ್ರೀಮತಿ ಸ್ವಪ್ನ.ಟಿ.ಬಿ ಬಿನ್ ಎಸ್ ಬದ್ರೀಶ ಮತ್ತು ಶ್ರೀ ಟಿ.ಆರ್. ಸುಂದರ ಲಕ್ಷ್ಮೀ ಕೋಂ ಟಿ.ಎ.ರಮೇಶ್ ಬಾಬು	ಮಲ್ಲಾಪುರ	37/1	2	04	ಕೃಷಿವಲಯ	ವಾಣಿಜ್ಯೋಪಯೋಗ
				ಪೈಕಿ 05 ಗುಂಟೆ 'ಖ' ಖರಾಬು ಹೊರತುಪಡಿಸಿ			
				1	39		
	ಎಸ್.ಮಹೇಶ್ವರಪ್ಪ ಬಿನ್ ಎಸ್.ಸೋಮಲಿಂಗಪ್ಪ	ಎಂ.ಕೆ.ಹಟ್ಟಿ	67/2	2	20		
			67/ಏ	1	06		
			67/ಬಿ	0	36		
			ಒಟ್ಟು	6	21		

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ 1961ರ ಕಲಂ 14(ಎ) ಮೇರೆಗೆ ಪ್ರಕಾರ ಮೇಲ್ಕಂಡ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರು ತಮ್ಮ ಸಲಹೆ/ಆಕ್ಷೇಪಣೆಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿನಗಳ ಒಳಗಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಗೆ ಲಿಖಿತವಾಗಿ ಸಲ್ಲಿಸಬಹುದಾಗಿರುತ್ತದೆ. 16 ದಿನಗಳ ಅವಧಿಯ ನಂತರ ಸಲ್ಲಿಸಲಾಗುವ ಸಲಹೆ/ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

DIPR/CTA/KSMCA/195/2026-27 ಸಹಿ/- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ತರೀಕೆರೆ

ಓ.ಎಸ್.ನಂ. :224/2013

ವಾದಿ : ಎಸ್.ಟಿ.ಬಸಪ್ಪ ಇವರ ವಿಶೇಷ ಮುಖ್ತಿಯಾರ್ ನಾಮದಾರರು.

ವಿರುದ್ಧ

ಪ್ರತಿವಾದಿಯರು : ಎಲ್.ಎಸ್.ಗಂಗಾಧರಪ್ಪ ಮತ್ತು ಇತರರು.

ಪತ್ರಿಕಾ ಪ್ರಕಟಣೆ

1ನೇ ಪ್ರತಿವಾದಿ : 1)ಎಲ್.ಎಸ್.ಗಂಗಾಧರ್ ಬಿನ್ ಲೇಟ್ ನಾಗಪ್ಪ, ಸುಮಾರು 50 ವರ್ಷ, ಅಮೀನ್, ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಶೃಂಗೇರಿ.2ನೇ ಪ್ರತಿವಾದಿ:2)ಬಿ.ಶಾರದಮ್ಮ ಕೋಂ ಲೇಟ್ ನಾಗಪ್ಪ, ಸುಮಾರು 74 ವರ್ಷ, ಗೃಹಿಣಿ, ವಾಸ: ಸದರಿಯವರು 1ನೇ ಪ್ರತಿವಾದಿಯ ವಿಳಾಸದಲ್ಲಿ ವಾಸವಾಗಿರುತ್ತಾರೆ. 4ನೇ ಪ್ರತಿವಾದಿ : 4)ಸಿ.ಎಸ್.ಮರಿಯಪ್ಪ ಬಿನ್ ಸಿದ್ದರಾಮಪ್ಪ, ಸುಮಾರು 53 ವರ್ಷ, ವ್ಯವಸಾಯಗಾರರು, ಚೀರನಹಳ್ಳಿ ಗ್ರಾಮ, ಶಿವನಿ ಹೋಬಳಿ, ತರೀಕೆರೆ ತಾಲ್ಲೂಕು.

ವಾದಿಯು ಮೇಲ್ಕಂಡ ದಾವೆಯನ್ನು ನಿಮ್ಮಗಳ ಮತ್ತು ಇತರರ ವಿರುದ್ಧ ಘೋಷಣಾತ್ಮಕ ಪರಿಹಾರ ಮತ್ತು ಅರ್ಧ ಭಾಗದ ಸ್ವತ್ತಿನ ಸ್ವಾಧೀನ ಮತ್ತು ಇತರ ಪರಿಹಾರ ಕೋರಿ ಸಲ್ಲಿಸಿದ್ದು, ನಿಮ್ಮನ್ನು ಸದರಿ ದಾವೆಯಲ್ಲಿ 1,2ಮತ್ತು 4ನೇ ಪ್ರತಿವಾದಿಯರನ್ನಾಗಿ ಮಾಡಿದ್ದು, ನಿಮಗೆ ಮೇಲಿನ ಮತ್ತು ಗೊತ್ತಿರುವ ವಿಳಾಸಕ್ಕೆ ನ್ಯಾಯಾಲಯದಿಂದ ಕಳುಹಿಸಿದಂತಹ ಸಮನ್ಸ್ ಜಾರಿಯಾಗದ ಪ್ರಯುಕ್ತ ನ್ಯಾಯಾಲಯದ ಆದೇಶದಂತೆ ಪತ್ರಿಕಾ ಪ್ರಕಟಣೆ ಹೊರಡಿಸುತ್ತಿದ್ದು, ಹಾಲಿ ದಾವೆಯು ದಿನಾಂಕ:08-07-2026 ರಂದು ನಿಮ್ಮ ಹಾಜರಾತಿಗೆ ಎಂದು ನಿಗದಿಯಾಗಿರುತ್ತದೆ. ಆದ್ದರಿಂದ ನೀವು ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ದಾವೆಯು ನಿಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನವಾಗುತ್ತದೆ ಎಂದು ತಿಳಿಯುವುದು.

ಬಿ.ಎಸ್.ಕಿರಣ್ ಕುಮಾರ್ ಮತ್ತು ಹೇಮಂತ್ ಕೆ.ಎಸ್.
ವಾದಿಯ ಪರ ವಕೀಲರುಗಳು
ತರೀಕೆರೆ, ದಿನಾಂಕ:29-06-2026

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ತರೀಕೆರೆ

ಮಾನ್ಯ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ತರೀಕೆರೆ

ಅಸಲು ದಾವೆ ನಂ. :38/2023

ವಾದಿ : ರಮೇಶ್ ರಾವ್, ವಿರುದ್ಧ

ಪ್ರತಿವಾದಿಗಳು : ಮಂಜೋಜಿರಾವ್ ಮತ್ತು ಇತರರು.

4 ರಿಂದ 6ನೇ ಪ್ರತಿವಾದಿಯರು: 4)ಶ್ರೀ ಜಗದೀಶ್ ಬಿನ್ ರಾಜಾರಾವ್,ಸುಮಾರು 40 ವರ್ಷ, ಟೈಲರ್ ಕಸುಬು. 5)ಶ್ರೀ ರವಿ ಬಿನ್ ರಾಜಾರಾವ್, ಸುಮಾರು 38 ವರ್ಷ, ಟೈಲರ್ ಕಸುಬು. 6) ಶ್ರೀಮತಿ ಗಾಯತ್ರಿ ಕೋಂ ಲೇಟ್ ಪ್ರಕಾಶ್, ಸುಮಾರು 40 ವರ್ಷ, ವ್ಯವಸಾಯ. ಎಲ್ಲರ ವಾಸ ಹುಣಸಘಟ್ಟ ಗ್ರಾಮ, ಅಮೃತಾಪುರ ಹೋಬಳಿ, ತರೀಕೆರೆ ತಾಲ್ಲೂಕು.

ವಾದಿ ಮೇಲ್ಕಂಡ ಪ್ರಕರಣವನ್ನು ನಿಮ್ಮಗಳ ಮತ್ತು ಇತರರ ವಿರುದ್ಧ ಅಂದರೆ, ಜಗದೀಶ್, ರವಿ, ಗಾಯತ್ರಿ, ಇವರ ವಿರುದ್ಧ ಓ.ಎಸ್.ನಂ.38/2023 ಅನ್ನು ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಪ್ರತಿವಾದಿಯರ ಸಂಖ್ಯೆ 4 ರಿಂದ 6ರವರು ನಿಮಗೆ ನಿಮ್ಮ ಮೇಲಿನ ವಿಳಾಸಕ್ಕೆ ನ್ಯಾಯಾಲಯದಿಂದ ಕಳುಹಿಸಿದಂತಹ ಸಮನ್ಸ್ ಜಾರಿಯಾಗದ ಪ್ರಯುಕ್ತ ನ್ಯಾಯಾಲಯದ ಆದೇಶದಂತೆ ಪತ್ರಿಕಾ ಪ್ರಕಟಣೆ ಹೊರಡಿಸುತ್ತಿದ್ದು, ಹಾಲಿ ಪ್ರಕರಣವು ದಿನಾಂಕ:10-07-2026 ರಂದು ನಿಮ್ಮ ಹಾಜರಾತಿಗೆ ಎಂದು ನಿಗದಿಯಾಗಿರುತ್ತದೆ. ಆದ್ದರಿಂದ ನೀವು ಆ ದಿನ ಬೆಳಿಗ್ಗೆ 11ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ದಾವೆಯು ನಿಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನವಾಗುತ್ತದೆ ಎಂದು ತಿಳಿಯುವುದು.

ಹೆಚ್.ಶಿವಕುಮಾರ್ ನಾಯಕ್
ವಾದಿಯ ಪರ ವಕೀಲರು
ತರೀಕೆರೆ

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ತರೀಕೆರೆ

ಮಾನ್ಯ ಘನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ : ಕಡೂರು:ಆರ್.ಎ.ನಂ.59/2019

ಮೇಲ್ಮನವಿದಾರರು - ಮೋಹನ್ ಕುಮಾರ್

ವಿರುದ್ಧ

ಎದುರುದಾರರು - ಚಂದ್ರಮ್ಮ ಮತ್ತು ಇತರರು

ಎದುರುದಾರರು-4 (ಬಿ) :- ಮಧುಸೂದನ್ ಬಿನ್ ಲಕ್ಷ್ಮೀದೇವಿ ಸುಮಾರು 40 ವರ್ಷ, ಕೂಲಿ ಕೆಲಸ

ಎದುರುದಾರರು-4 (ಸಿ) :- ಶ್ರೀಮತಿ ಭವ್ಯ ಬಿನ್ ಲಕ್ಷ್ಮೀದೇವಿ ಯಾನೆ ಲಕ್ಷ್ಮಮ್ಮ, ಕೋಂ ವೆಂಕಟೇಶ, ಸುಮಾರು 38 ವರ್ಷ, ಗೃಹಿಣಿ,

ಇಬ್ಬರು ವಾಸ- ಶ್ರೀ ವೀರಭಿಂದ್ರೇಶ್ವರ ದೇವಸ್ಥಾನ ಹಿಂಭಾಗ, ಅಜ್ಜಂಪುರ ಟೌನ್, ಅಜ್ಜಂಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಮೇಲ್ಮನವಿದಾರರು ಮೇಲ್ಕಂಡ ಮೇಲ್ಮನವಿಯನ್ನು ಎದುರುದಾರರ ವಿರುದ್ಧ ಈ ಹಿಂದೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂಬ್ರ 154/2019 ರಲ್ಲಿ ದಿನಾಂಕ 18-09-2019 ರಂದು ಹೊರಡಿಸಿರುವ ಆದೇಶ ವಿರುದ್ಧ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ಮೇಲ್ಕಂಡ 4 (ಬಿ) ಮತ್ತು (ಸಿ) ಅದ ನೀವುಗಳು ಮೇಲೆ ತಿಳಿಸಿದ ವಿಳಾಸದಲ್ಲಿ ವಾಸವಾಗಿದ್ದೀರೆಂದು ಸಹ ನ್ಯಾಯಾಲಯದ ಮುಖಾಂತರ ಸಮನ್ಸ್ ಕಳುಹಿಸಿದ್ದರೂ ಸಹ ನೀವು ಅದನ್ನು ಪಡೆದುಕೊಂಡಿರುವುದಿಲ್ಲ ಎಂದು ಮೇಲ್ಮನವಿದಾರರು ತಿಳಿಸಿದ್ದರ ಮೇರೆಗೆ ಮೇಲ್ಕಂಡ ನಿಮಗೆ ಈ ಪ್ರಕಟಣೆಯ ಮೂಲಕ ತಿಳಿಯಪಡಿಸುತ್ತಿದೇನೆಂದರೆ ಸದರಿ ಕೇಸು ದಿನಾಂಕ: 03-08-2026 ಕ್ಕೆ ನ್ಯಾಯಾಲಯದ ಮುಂದೆ ನಿಮ್ಮ ಹಾಜರಾತಿಗಾಗಿ ಹಿಯರಿಂಗ್ ಇದ್ದು, ಆ ದಿವಸ ನೀವು ನ್ಯಾಯಾಲಯದ ಮುಂದೆ ಬೆಳಗ್ಗೆ 11-00 ಗಂಟೆಗೆ ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ಆಕ್ಷೇಪಣೆ ಸಲ್ಲಿಸಬೇಕು, ತಪ್ಪಿದಲ್ಲಿ ನ್ಯಾಯಾಲಯವು ನಿಮ್ಮನ್ನು ಏಕಪಕ್ಷೀಯ ಎಂದು ಆದೇಶ ಮಾಡಿ, ನಿಮ್ಮ ಗೈರು ಹಾಜರಾತಿಯಲ್ಲಿ ಮೇಲ್ಮನವಿಯನ್ನು ವಿಚಾರಣೆಯನ್ನು ನಡೆಸಿ ಸದರಿ ಮೇಲ್ಮನವಿಯನ್ನು ಇತ್ಯರ್ಥಪಡಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸುತ್ತಿದೆ.

ಕರಡು ಪತ್ರಿಕಾ ಪ್ರಕಟಣೆಯನ್ನು ಅನುಮೋದಿಸಿದ ದಿನಾಂಕ 15-06-2026

ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/-
(ಬಿ.ಆರ್.ರೇಣುಕ)
ಮೇಲ್ಮನವಿದಾರರ ಪರ ವಕೀಲರು
ಸ್ಥಳ : ಕಡೂರು
ದಿನಾಂಕ :29-06-2026

ಸಹಿ/-
ಪ್ರಧಾನ ಮಾನ್ಯ ಲಿಪಿಕಾಧಿಕಾರಿಗಳು,
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧಾನ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಅ.-1/ಟೆಂಡರ/2026-27/1962 ದಿನಾಂಕ: 25/06/2026

ಇ-ಟೆಂಡರ್ / ಮರುಟೆಂಡರ್ ಹಾಗೂ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ (Call-1 & Call-5)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2026-27 ನೇ ಸಾಲಿನ 2059-ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆ ಅಡಿ 3 ಕಾಮಗಾರಿಗಳು, 2216-ವಸತಿ ಗೃಹ ಕಟ್ಟಡಗಳ ನಿರ್ವಹಣೆ ಅಡಿ 6 ಕಾಮಗಾರಿಗಳು, 3054-ಜಿಮ್ಮಾರ ನಿರ್ವಹಣೆ ಅಡಿ 1 ಕಾಮಗಾರಿ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಅಡಿ 7 ಕಾಮಗಾರಿಗಳು ಹಾಗೂ 4059- ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿ 1 ಕಾಮಗಾರಿ, ಹೀಗೆ ಒಟ್ಟು 19 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 4.80 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 400.00 ಲಕ್ಷ ಇದರ ಕಾಮಗಾರಿಗಳಿಗೆ ಟೆಂಡರ್ /ಮರುಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ. 19 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ:06-07-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:08-07-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:10-07-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 13-07-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕ್ರ.ಸಂ. 1 ರಿಂದ 18 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ : 10-07-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:13-07-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 15-07-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):17-07-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಣೆಗಳಿಗಾಗಿ ಇಲಾಖೆಯ ವೆಬ್‌ಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www. kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-BD/0338/NCA/2026-27

ಕರ್ನಾಟಕ ಸರ್ಕಾರ – (ಜಲಸಂಪನ್ಮೂಲ ಇಲಾಖೆ)

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಇಂಜನಿಯರಿಂಗ್ ವಿಭಾಗ ಮಲವಗೊಪ್ಪ, ನಿಧಿಗೆ ಅಂಚೆ, ಶಿವಮೊಗ್ಗ-577222

ನಂ: ಭಅಪ್ರಾ/ಇಂವಿ/ಟೆಂಡರ್/ಶಾಂತಾ/2026-27/204

ದಿನಾಂಕ: 25.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ Kg-2 ರ ಪ್ರಕಾರ ಟೆಂಡರ್ ಆಹ್ವಾನ (IFT - 06/2026-27) Head of Account :- 4705- Capital Grant

ಮಾನ್ಯ ಅಧೀಕ್ಷಕ ಇಂಜಿನಿಯರ್, ಭದ್ರಾ ಅಚ್ಚುಕಟ್ಟು, ಶಿವಮೊಗ್ಗ ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ-1999, ನಿಯಮಗಳು-2000 ರ ಹಾಗೂ ನಿಯಮಾವಳಿಗಳು 2017ರ ಪ್ರಕಾರ ಕಾರ್ಯಪಾಲಕ ಇಂಜಿನಿಯರ್, ಇಂಜಿನಿಯರಿಂಗ್ ವಿಭಾಗ, ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲವಗೊಪ್ಪ, ಶಿವಮೊಗ್ಗ ಇವರು ಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ನೀರು ಬಳಕೆದಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ರೈತರ ಜಮೀನುಗಳಲ್ಲಿ ಕಳೆ ಕತ್ತರಿಸಲು ಮತ್ತು ಸಸಿಗಳನ್ನು ನೆಡಲು ಹೂಲ ಬೆಳೆಗಳನ್ನು ಹಾಕಲು ಗುಂಡಿ ತೆಗೆಯಲು ಅನುಕೂಲವಾಗುವ ಯಂತ್ರೋಪಕರಣಗಳನ್ನು (Power Operated Brush Cutter/ Weed Slasher,Post Hole Digger & HDP/HTP Power Sprayer) ಒದಗಿಸಲು ತಂಯಾರಕರು/ ವಿತರಕರು/ ಅಧಿಕೃತ ಸರಬರಾಜುದಾರರುಗಳಿಂದ ಅಲ್ಪಾವಧಿ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಲ್ಲಿ kppp ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವಿವರ ಕೆಳಗಿನಂತಿದೆ.1. ಟೆಂಡರನ್ನು ಕೆಪಿಪಿಪಿ-ಪೋರ್ಟಲ್‌ನಲ್ಲಿ access ಮಾಡಬಹುದಾದ ದಿ: 29.06.2026 ರಿಂದ ದಿ:10.07.2026 ರವರೆಗೆ. 2. ಭರ್ತಿ ಮಾಡಿದ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿ: 10.07.2026 ಸಂಜೆ 04.00 ಗಂಟೆವರೆಗೆ 3. ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (ದ್ವಿ ಲಕೋಟೆ ಪದ್ಧತಿ): 13.07.2026 ಸಂಜೆ 11.00 ಗಂಟೆಯ ನಂತರ 4. ಆರ್ಥಿಕ ಬಿಡ್ ತೆರೆಯುವ ದಿ: 15.07.2026 ಬೆಳಿಗ್ಗೆ 11.00 ಗಂಟೆಯ ನಂತರ

ಗೂಡ್ಸ್/ ಇಕ್ವಿಪ್ಮೆಂಟ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇಂಜನಿಯರಿಂಗ್ ವಿಭಾಗ, ಭದ್ರಾಕಾಡಾ, ಶಿವಮೊಗ್ಗ ಇವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಅಥವಾ ವೆಬ್ ಸೈಟ್ http://www.kppp.karnataka.gov.in ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜನಿಯರ್ ಇಂಜನಿಯರಿಂಗ್ ವಿಭಾಗ ಭದ್ರಾಕಾಡಾ, ಶಿವಮೊಗ್ಗ

ವಾ.ಸಾ.ಇ/ಶಿವ/ಕ್ಷೇತ್ರ/ಶಾಂತಾ/26-27/04/439

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಅಬ್ದುಲ್ ಸಮದ್ ಬಿನ್ ದಿವಂಗತ ಕೆ.ಇ.ಅಬ್ದುಲ್ಲ, ಕಣ್ಣೂರು ವಾಸ ಮತ್ತು ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಆದ ನಾನು ಈ ಕೆಳಕಂಡಂತೆ ತಿಳಿಯಪಡಿಸುತ್ತೇನೆ. ನಮ್ಮ ಸಮಸ್ತ ಕುಟುಂಬಕ್ಕೆ ಸೇರಿದ ಮೂಲತಃ ನನ್ನ ತಂದೆ ಕೆ.ಇ.ಅಬ್ದುಲ್ಲ ಬಿನ್ ಇಬ್ರಾಹಿಂ ಬ್ಯಾರಿ ಇವರಿಗೆ ತೀರ್ಥಹಳ್ಳಿ ತಹಶೀಲ್ದಾರರವರು ದಿನಾಂಕ: 4/4/1981ರಂದು ಮಂಜೂರು ಮಾಡಿದ ಎಸ್.ಸಿ.153/80-81 ನಂಬರ್ ಹೊಂದಿರುವ ತೀರ್ಥಹಳ್ಳಿ ತಾಲ್ಲೂಕು, ಆಗುಂಬೆ ಹೋಬಳಿ ಕಣ್ಣೂರು ಗ್ರಾಮದ ಸ.ನಂ.72ರಲ್ಲಿರುವ 60 X 40 ಅಡಿ ವಿಸ್ತೀರ್ಣದ ನಿವೇಶನ ಸಂಖ್ಯೆ:21ರ ಮೂಲ ಹಕ್ಕು ಪತ್ರವು ದಿನಾಂಕ: 01/06/2026ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ, ತೀರ್ಥಹಳ್ಳಿ ತಾಲ್ಲೂಕು ಕಛೇರಿ ಸಮೀಪ ನನ್ನ ಗಮನಕ್ಕೆ ಬಾರದೆ ನನ್ನ ಕೈಯಿಂದಲೇ ಎಲ್ಲೋ ಕಳೆದು ಹೋಗಿರುತ್ತದೆ. ಆದರೆ ಇದುವರೆವಿಗೂ ಮೂಲ ಹಕ್ಕುಪತ್ರವು ಸಿಕ್ಕಿರುವುದಿಲ್ಲ. ಸ್ವತ್ತಿನ ಖಾತೆಯು ನಮ್ಮ ತಂದೆಯ ಮರಣಾನಂತರ ನನ್ನ ಹಿರಿಯ ಸಹೋದರ ಕೆ.ಎ.ಮಹಮ್ಮದ್ ಅಲಿ ಬಿನ್ ಕೆ.ಇ.ಅಬ್ದುಲ್ಲ ಇವರ ಹೆಸರಿಗೆ ಖಾತೆ ವರ್ಗಾವಣೆಗೊಂಡಿರುತ್ತದೆ. ಮೂಲ ಹಕ್ಕು ಪತ್ರವು ನನ್ನ ತಂದೆಯ ಎಲ್ಲ ವಾರಸುದಾರರು/ಮಕ್ಕಳ ಒಪ್ಪಿಗೆಯೊಂದಿಗೆ ನನ್ನ ವಶದಲ್ಲಿದ್ದು ಇರುತ್ತದೆ. ಹಾಲಿ ನಿವೇಶನದಲ್ಲಿ ಆರ್‌ಸಿಸಿ ವಾಸದ ಮನೆ ಇದ್ದು, ಹಾಲಿ ಇ-ಸ್ವತ್ತು ಸಂಖ್ಯೆ:152400703100200448 ಮತ್ತು ಆರೇಹಳ್ಳಿ ಗ್ರಾಮ ಪಂಚಾಯತಿಯ ಸ್ವತ್ತಿನ ಸಂಖ್ಯೆ:338/2 391/2 353/2 ಪ್ರಕಾರ ಖಾತೆ ದಾಖಲು ಕಂಡಿರುತ್ತದೆ. ಮೂಲ ಹಕ್ಕು ಪತ್ರವನ್ನು ಯಾವುದೇ ಬ್ಯಾಂಕ್, ಹಣಕಾಸು ಸಂಸ್ಥೆ ವಗೈರೆಗಳಲ್ಲಿ, ಹಣಕಾಸು ನೆರವಿಗಾಗಿ ಆಧಾರ ಮಾಡಿರುವುದಿಲ್ಲ,ಅಡಮಾನ ಇಟ್ಟಿರುವುದಿಲ್ಲ,ಮೂಲ ಹಕ್ಕುಪತ್ರ ನನ್ನ ಬಳಿ ಇರುವುದಿಲ್ಲವೆಂದು ಇದನ್ನು ಪ್ರಮಾಣಪೂರ್ವಕವಾಗಿ ಪ್ರಕಟಣೆ ಕೊಡುತ್ತಿದ್ದೇನೆ.

ಗೌರವಾನ್ವಿತ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ

ಪಿ.ಆರ್.ಮಿಸ್.ನಂ : 85/2026

ಅರ್ಜಿದಾರರು: 1)ಶ್ರೀಮತಿ ನಾಗಮ್ಮ ಕೋಂ ನಾಗಪ್ಪ, ವಯಸ್ಸು 72 ವರ್ಷ,ಮನೆಕೆಲಸ, ವಾಸ: ಮಲ್ಲಸಮುದ್ರ ಗ್ರಾಮ, ಹೊಸದುರ್ಗ ತಾಲ್ಲೂಕು. 2)ಶಿವರುದ್ರಪ್ಪ.ಎಸ್. ಬಿನ್ ಲೇಟ್ ಸಿದ್ದರಾಮಪ್ಪ, ವಯಸ್ಸು 70 ವರ್ಷ, ವ್ಯವಸಾಯ, ಚಿ.ವಡೇರಹಳ್ಳಿ ಗ್ರಾಮ, ರಾಮಗಿರಿ ಹೋಬಳಿ, ಹೊಳಲ್ಕೆರೆ ತಾಲ್ಲೂಕು.3)ಜಯಮ್ಮ ಕೋಂ ಕಲ್ಲಪ್ಪ, ವಯಸ್ಸು 68 ವರ್ಷ, ಮನೆಕೆಲಸ, ವಾಸ: ಮಲ್ಲಪ್ಪನಹಳ್ಳಿ ಗ್ರಾಮ, ಹೊಸದುರ್ಗ ತಾಲ್ಲೂಕು.

ವಿರುದ್ಧ

ಎದುರುದಾರರು : ಮಾನ್ಯ ತಹಶೀಲ್ದಾರರು, ಜನನ ಮತ್ತು ಮರಣ ನೋಂದಣಾಧಿಕಾರಿಗಳು, ತಾಲ್ಲೂಕು ಕಛೇರಿ, ಹೊಳಲ್ಕೆರೆ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1 ರಿಂದ 3ನೇ ಅರ್ಜಿದಾರರ ತಾಯಿಯಾದ ಶ್ರೀಮತಿ ಶಾಂತಮ್ಮ ಕೋಂ ಸಿದ್ದರಾಮಪ್ಪ ರವರು ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ, ಚಿ.ವಡೇರಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ದಿನಾಂಕ:05-01-1980 ರಂದು ಮರಣ ಹೊಂದಿರುತ್ತಾರೆ ಎಂದು ಮರಣ ಸಮರ್ಥನಾ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಶ್ರೀಮತಿ ಶಾಂತಮ್ಮ ಕೋಂ ಸಿದ್ದರಾಮಪ್ಪ ರವರ ಮರಣ ಸಮರ್ಥನಾ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಕರಾರು ಇದ್ದಲ್ಲಿ ಹೊಳಲ್ಕೆರೆ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಿನಾಂಕ:30-07-2026 ರಂದು ಬೆಳಿಗ್ಗೆ 11 ಗಂಟೆಗೆ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯರಿ. ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ದಿನಾಂಕ:23-06-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
ಶ್ರೀ ಪಿ.ಆರ್.ಲಿಂಗರಾಜು,
ವಕೀಲರು, ಹೊಳಲ್ಕೆರೆ
ದಿನಾಂಕ:23-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಹೊಳಲ್ಕೆರೆ

ಮಾನ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ

ಕಮರ್ಷಿಯಲ್ ಅಸಲು ದಾವೆ ನಂ. : 53/2024

ವಾದಿ : ಕೆನರಾ ಬ್ಯಾಂಕ್, ಗೋಪಾಳ ಶಾಖೆ, ಶಿವಮೊಗ್ಗ ಸಿಟಿ, ಇವರ ಬ್ರಾಂಚ್ ಮ್ಯಾನೇಜರ್,

ವಿರುದ್ಧ

ಪ್ರತಿವಾದಿಗಳು : ಮೆ॥ ಅಲ್ಟ್ರಾ ಗಾರ್ಮೆಂಟ್ಸ್, ಪ್ರೊ.ಶ್ರೀಮತಿ ಗಂಗಮ್ಮ ಮತ್ತು ಇನ್ನೊಬ್ಬರು.

2ನೇ ಪ್ರತಿವಾದಿ : ಶ್ರೀಮತಿ ನಾಗಮ್ಮ ಕೋಂ ಮೂರ್ತಪ್ಪ, ಸುಮಾರು 36 ವರ್ಷಗಳು, ವಾಸ: ಅರಕೆರೆ ಗ್ರಾಮ, ದಾನವಾಡಿ, ಭದ್ರಾವತಿ ತಾಲ್ಲೂಕು,ಶಿವಮೊಗ್ಗ ಜಿಲ್ಲೆ.

ತಿಳುವಳಿಕೆ

ವಾದಿಯಾದ ಕೆನರಾಬ್ಯಾಂಕ್, ಗೋಪಾಳ ಶಾಖೆ, ಶಿವಮೊಗ್ಗ ಸಿಟಿ, ಇವರು ಬಾಕಿ ಸಾಲ ವಸೂಲಾತಿಗಾಗಿ ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಪ್ರತಿವಾದಿಯಾದ ಮೆ॥ ಅಲ್ಟ್ರಾ ಗಾರ್ಮೆಂಟ್ಸ್, ಇದರ ಮಾಲೀಕರು ಶ್ರೀಮತಿ ಗಂಗಮ್ಮ ಮತ್ತು ಪ್ರೊಪ್ರೈಟರ್ ಆದ ಶ್ರೀಮತಿ ಗಂಗಮ್ಮ ಮತ್ತು 2ನೇ ಪ್ರತಿವಾದಿ ಶ್ರೀಮತಿ ನಾಗಮ್ಮ ಇವರುಗಳ ವಿರುದ್ಧ ದಾವಾ ಹೂಡಿದ್ದು, 2ನೇ ಪ್ರತಿವಾದಿಯಾದ ನಿಮಗೆ ಈ ನ್ಯಾಯಾಲಯದಿಂದ ನಿಮ್ಮ ವಿಳಾಸಕ್ಕೆ ಕಳುಹಿಸಲಾದ ಸಮನ್ಸ್‌ಗಳನ್ನು ಮತ್ತು ಈ ನ್ಯಾಯಾಲಯದಿಂದ ನಿಮ್ಮ ವಿಳಾಸಕ್ಕೆ ಆರ್‌ಪಿಎಡಿ ಮೂಲಕ ಕಳುಹಿಸಲಾಗಿದ್ದ ನೋಟೀಸುಗಳನ್ನು ನೀವು ಸ್ವೀಕರಿಸದೇ ಇರುವುದರಿಂದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕಮರ್ಷಿಯಲ್ ಅಸಲು ದಾವೆಯು ದಿನಾಂಕ:31-07-2026 ರಂದು ಬೆಳಿಗ್ಗೆ 11 ಗಂಟೆಗೆ ನಿಮ್ಮ ಹಾಜರಾತಿಗಾಗಿ ಮಾನ್ಯ ನ್ಯಾಯಾಲಯದಲ್ಲಿ ನಿಗದಿಪಡಿಸಲಾಗಿದೆ. ಅದ ಕಾರಣ ಆ ದಿನ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರ ನೀವು ನಿಯೋಜಿಸಲ್ಪಟ್ಟ ವಕೀಲರ ಮೂಲಕವಾಗಲಿ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಈ ದಾವೆಯನ್ನು ಏಕಪಕ್ಷೀಯವಾಗಿ ನ್ಯಾಯಾಲಯವು ತೀರ್ಮಾನಿಸಲಾಗುವುದೆಂದು ತಿಳಿಯುವುದು.

ಎನ್.ಎಸ್.ಜಗದೀಶ
ವಾದಿ ಪರ ವಕೀಲರು
ಶಿವಮೊಗ್ಗ

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ದಲ್ಲಿ, ಸೊರಬ

ಸಿ.ಮಿಸ್.ನಂ. : 149/2026

ಅರ್ಜಿದಾರರು: ಚಂದ್ರಪ್ಪ ಬಿನ್ ಗದಿಗೆಪ್ಪ

ವಿರುದ್ಧ

ಎದುರುದಾರರು : ತಹಶೀಲ್ದಾರರವರು, ಸೊರಬ ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಕೇಸಿನಲ್ಲಿನ ಅರ್ಜಿದಾರರ ಹೆಂಡತಿಯಾದ ನಿರ್ಮಲಾ ಕೋಂ ಚಂದ್ರಪ್ಪ ಇವರು ದಿನಾಂಕ:24-11-2021 ರಂದು ಸೊರಬ ತಾಲ್ಲೂಕು ಜಡೆ ಹೋಬಳಿ, ಕೆಲ ಗುಂದ ಗ್ರಾಮದ ನಮ್ಮ ಮನೆಯ ಹಿಂಭಾಗದ ಬಾವಿಯಲ್ಲಿ ಮೃತ ಹೊಂದಿರುತ್ತಾರೆ. ಅರ್ಜಿದಾರರು ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್. ನಂ.:149/2026 ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರದಾದರೂ ತಕರಾರು ಇದ್ದಲ್ಲಿ, ಅರ್ಜಿದಾರರಿಗಾಗಲೀ, ಎದುರುದಾರರಿಗಾಗಲೀ ಸೇರುವುದಾದಲ್ಲಿ ಸದರಿ ಅರ್ಜಿಯ ವಿಚಾರಣೆಯು ದಿನಾಂಕ:31-07-2026 ರಂದು ಬೆಳಿಗ್ಗೆ 11 ಗಂಟೆಗೆ ಸದ್ರಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪರ ವಕೀಲರ ಮೂಲಕ ವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ವ್ಯಕ್ತಪಡಿಸಿಕೊಳ್ಳಬಹುದಾಗಿದೆ.

ಅರ್ಜಿದಾರರ ಪರ ವಕೀಲರು
ಶ್ರೀಮತಿ ಮಂಜಮ್ಮ ಸಿ.ಬಿ.
ವಕೀಲರು, ಸೊರಬ.
ರೋಲ್.ನಂ.ಕೆ.ಎ.ಆರ್. 1736/2011
ಮೊಬೈಲ್ ನಂ.9740682443

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ

ಮಾನ್ಯ ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊನ್ನಾಳಿ

ಅಸಲು ದಾವೆ ನಂಬ್ರ : 345/2016

ವಾದಿಗಳು : ಶ್ರೀ ಮಲ್ಲೇಶಪ್ಪ ಮತ್ತು ಇತರರು.

ವಿರುದ್ಧ

ಪ್ರತಿವಾದಿಗಳು : ಶ್ರೀಮತಿ ಹಾಲಮ್ಮ ಮತ್ತು ಇತರರು.

ಮಧ್ಯಂತರ ಅರ್ಜಿಯಲ್ಲಿನ 5ನೇ ಪ್ರಸ್ತಾವಿತ ಪ್ರತಿವಾದಿ : ಶ್ರೀಮತಿ ಮಂಜಮ್ಮ ತಂದೆ ಲೇಟ್ ಹಾಲಪ್ಪ, ವಯಸ್ಸು ಸುಮಾರು 55 ವರ್ಷ, ವಾಸ: ಕೊಡತಾಳಿಂಗನಹಳ್ಳಿ ಗ್ರಾಮ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ದಾವೆಯ ವಾದಿಗಳಾದ ಶ್ರೀ ಮಲ್ಲೇಶಪ್ಪ ಮತ್ತು ಇನ್ನೊಬ್ಬರು ಗೌರವಾನ್ವಿತ ಮಾನ್ಯ ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊನ್ನಾಳಿ ಈ ನ್ಯಾಯಾಲಯದಲ್ಲಿ ನಿಮ್ಮನ್ನು ಪ್ರಸ್ತಾವಿತ 5ನೇ ಪ್ರತಿವಾದಿಯನ್ನಾಗಿ (Proposed Defendant No.5) ಸೇರಿಸಲು ಮಧ್ಯಂತರ ಅರ್ಜಿಯನ್ನು (Impleading Application) ಸಲ್ಲಿಸಿರುತ್ತಾರೆ. ನ್ಯಾಯಾಲಯದಿಂದ ನಿಮಗೆ ಜಾರಿಗೆ ಕಳುಹಿಸಲಾದ ನೋಟೀಸುಗಳು ನಿಮ್ಮ ಮೇಲೆ ಜಾರಿ ಮಾಡಲಾಗದೇ ಹಿಂತಿರುಗಿರುವ ಕಾರಣ, ಗೌರವಾನ್ವಿತ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 5, ನಿಯಮ 20ರನ್ವಯ ಪತ್ರಿಕಾ ಪ್ರಕಟಣೆಯ ಮೂಲಕ ನಿಮಗೆ ಈ ನೋಟೀಸನ್ನು ಜಾರಿ ಗೊಳಿಸಲು ಆದೇಶಿಸಿದೆ. ಆದುದರಿಂದ, ಈ ಪ್ರಕಟಣೆಯ ಮೂಲಕ ನಿಮಗೆ ತಿಳಿಸುವುದೇನೆಂದರೆ, ನೀವು ಖುದ್ದಾಗಿ ಅಥವಾ ನ್ಯಾಯವಾದಿಗಳ ಮೂಲಕ ದಿನಾಂಕ:23-07-2026 ರಂದು ಬೆಳಿಗ್ಗೆ 11 ಗಂಟೆಗೆ ಹೊನ್ನಾಳಿ ಗೌರವಾನ್ವಿತ ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಮುಂದೆ ಹಾಜರಾಗಿ ಆಕ್ಷೇಪಣೆಗಳು ಏನಾದರು ಇದ್ದರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿಯೇ ಸದರಿ ಅರ್ಜಿಯನ್ನು ವಿಲೇವಾರಿ ಮಾಡಲಾಗುವುದು ಹಾಗೂ ಸೂಕ್ತ ಆದೇಶ ಹೊರಡಿಸಲಾಗುವುದು ಎಂದು ತಿಳಿಯತಕ್ಕದ್ದು. ಘನ ನ್ಯಾಯಾಲಯದ ಆದೇಶ ಮತ್ತು ಆಜ್ಞೆಯ ಮೇರೆಗೆ ನ್ಯಾಯಾಲಯದ ಮುದ್ರೆ ಮತ್ತು ನನ್ನ ಸಹಿಯೊಂದಿಗೆ ನೀಡಲಾಗಿದೆ ಹಾಗೂ ನನ್ನ ಸಹಿಯೊಂದಿಗೆ ದಿನಾಂಕ:24-06-2026 ರಂದು ನೀಡಲ್ಪಟ್ಟಿದೆ.

ಶ್ರೀ ಜಿ.ಎಸ್.ರವಿಕುಮಾರ್,
ವಕೀಲರು ಮತ್ತು ನೋಟರಿ, ಹೊನ್ನಾಳಿ
ಸ್ಥಳ : ಹೊನ್ನಾಳಿ
ದಿನಾಂಕ: 24-06-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು, ಮಾನ್ಯ ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಹೊನ್ನಾಳಿ

ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ

ಎಫ್.ಡಿ.ಪಿ.ನಂ : 29/2024

ಅರ್ಜಿದಾರರು: ಕೆ.ಇಮ್ಮಣ್ಣ ವಿರುದ್ಧ

ಎದುರುದಾರರು : ನೇಮೋಜಿರಾವ್ ಮತ್ತು ಇತರರು.

11ನೇ ಎದುರುದಾರರು : ಶ್ರೀಮತಿ ಸರೋಜಮ್ಮ ಕೋಂ ಕೇಶೋಜಿರಾವ್ ಕೋಂ ಸೋಮಶೇಖರ, 50 ವರ್ಷ, ವಾಸ: ಕೇರಳಿ ಬಿಸ್ಲಿಹಳ್ಳ, ಶಿಕ್ಷಕರು, ದೇವರಾಜ್ ಅರಸ್ ಬಡಾವಣೆ, ಶಿರಾಳಕೊಪ್ಪ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

12(ಸಿ)ಎದುರುದಾರರು : ಶ್ರೀಮತಿ ರಾಜಿ ಬಿನ್ ನಾಗಲಿಂಗಶೆಟ್ಟಿ ವಯಸ್ಸು ಸುಮಾರು 32 ವರ್ಷ, ವಾಸ: ದೇವರಾಜ್ ಅರಸ್ ಬಡಾವಣೆ, ಕೆ.ಇ.ಬಿ.ಹತ್ತಿರ, ಶಿರಾಳಕೊಪ್ಪ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಪ್ರಕಟಣೆ

ಮೇಲ್ಕಂಡ ಕೇಸಿನಲ್ಲಿ ವಾದಿ ಇಮ್ಮಣ್ಣರವರು ಮೇಲ್ಕಂಡ ನ್ಯಾಯಾಲಯದಲ್ಲಿ ಅಸಲು ದಾವಾ ನಂ.219/1987ರಲ್ಲಿ ಹಿನ್ನೆ ದಾವಾ ಹೂಡಿದ್ದು, ಸದರಿ ಕೇಸಿನಲ್ಲಿ ದಿನಾಂಕ:01-07-2004 ಆದೇಶ ಮಾಡಿದ್ದು, ದಾವಾ ಷೆಡ್ಯೂಲ್ ಐಟಂ ನಂ.6 ರಿಂದ 12 ರವರೆಗೆ ಮತ್ತು ಐಟಂ ನಂ.14, 15 ಸ್ವತ್ತುಗಳಲ್ಲಿ 1/3 ಭಾಗವನ್ನು ವಿಂಗಡಿಸಿ ವಾದಿಗೆ ಕೊಡಲು ನ್ಯಾಯಾಲಯದ ಆದೇಶವಾಗಿದ್ದು, ಸದರಿ ಸ್ವತ್ತುಗಳನ್ನು ವಿಂಗಡಿಸಿ ಸ್ವಾಧೀನ ಕೊಡಲು ಕೋರಿಕೊಂಡು ನ್ಯಾಯಾಲಯದಲ್ಲಿ ಈ ಅರ್ಜಿಯನ್ನು ಹಾಕಲ್ಪಟ್ಟಿದ್ದು ತಮ್ಮಗಳ ಗಮನಕ್ಕೆ ತರಲು ನ್ಯಾಯಾಲಯದಿಂದ ನೋಟೀಸ್ ಕೊಡಲಾಗಿದ್ದು, ಸದರಿ ನೋಟೀಸ್ ನಿಮಗೆ ಜಾರಿಯಾಗಿರುವುದಿಲ್ಲ, ಆದ್ದರಿಂದ ಈ ಪ್ರಕಟಣೆಯನ್ನು ನೀಡಲಾಗಿದ್ದು, ಈ ಕೇಸಿನ ಹಿಯರಿಂಗ್ (ಮುದ್ದತ್ತು) ದಿನಾಂಕ:27-07-2026ರಂದು ಇದ್ದು ಆ ದಿನ ತಾವು ಮೇಲ್ಕಂಡ ನ್ಯಾಯಾಲಯಕ್ಕೆ 11 ಗಂಟೆಗೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಖುದ್ದಾಗಿ ಅಥವಾ ವಕೀಲರ ಮೂಲಕ ಸಲ್ಲಿಸುವುದು ಇಲ್ಲವಾದಲ್ಲಿ, ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ತೀರ್ಮಾನಿಸಲಾಗುವುದು.

ಅರ್ಜಿದಾರರ ಪರ ವಕೀಲರು
ಎಂ.ಕರಿಬಸಪ್ಪ,
ವಕೀಲರು,
ಶಿವಮೊಗ್ಗ

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.ನ್ಯಾಯಾಲಯ, ಶಿವಮೊಗ್ಗ

IN THE COURT OF HON'BLE PRL CIVIL JUDGE AT HONNALI .

O.S. No. 189/2016

Plaintiff : Lalithamma Dead by Lrs.

V/s

Defendants : Basavalingamma and Others.

Address: Defendant No.2: Renukamma D/o Late Murigeppa Aged about 43 years, R/o Chikkabasuru Village, Honnali Tq, Davanagere Dist.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ವಾದಿಯು ನ್ಯಾಯಾಲಯದಲ್ಲಿ ಪ್ರತಿವಾದಿಗಳ ವಿರುದ್ಧ ಸದರಿ ದಾವಾ ಹೂಡಿದ್ದು ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾವೆಯನ್ನು ಹೂಡಿರುತ್ತಾರೆ. ಸದರಿ ಕೇಸಿನಲ್ಲಿ ಈ ಮೇಲೆ ಹೇಳಿದ ಪ್ರತಿವಾದಿ ನಂ.2 ರವರ ನ್ಯಾಯಾಲಯದ ಮೂಲಕ ಜಾರಿ ಮಾಡುವ ಸಮನ್ಸ್ ಮತ್ತು ಅಂಚೆ ಮೂಲಕ ಕಳುಹಿಸಿದ ಆರ್.ಪಿ.ಎ.ಡಿ. ಯು ಕಾರಣಾಂತರದಿಂದ ಜಾರಿಯಾಗದೇ ವಾಪಸ್ಸು ಬಂದಿರುತ್ತದೆ. ಆದ್ದರಿಂದ ಮೇಲ್ಕಂಡ ಪ್ರತಿವಾದಿ ನಂ.2 ರವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಮೇಲೆ ಹೇಳಿದ ಕೇಸು ದಿನಾಂಕ:17-07-2026 ರಂದು ಇದ್ದು, ಆ ದಿನ ಬೆಳಿಗ್ಗೆ 11 ಗಂಟೆಗೆ ನೀವುಗಳು ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಮೇಲೆ ತಿಳಿಸಿದ ನ್ಯಾಯಾಲಯದ ಮುಂದೆ ಹಾಜರಾಗತಕ್ಕದ್ದು, ತಪ್ಪಿದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿಯೇ ಕೇಸು ತೀರ್ಮಾನವಾಗುತ್ತದೆಂದು ತಿಳಿಯಿರಿ. ನ್ಯಾಯಾಲಯದ ಮುದ್ರೆ ಹಾಗೂ ನನ್ನ ಸಹಿಯೊಂದಿಗೆ ದಿನಾಂಕ:29-06-2026 ರಂದು ನೀಡಲ್ಪಟ್ಟಿದೆ.

ವಾದಿಯ ಪರ ವಕೀಲರು
ಮೇಘರಾಜ್.ಸಿ, ವಕೀಲರು
ಹೊನ್ನಾಳಿ
ದಿನಾಂಕ:29-06-2026

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ಹೊನ್ನಾಳಿ ಸಿವಿಲ್ ನ್ಯಾಯಾಲಯ

ಶಿವಮೊಗ್ಗದ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

ಪಿ ಅಂಡ್ ಎಸ್.ಸಿ.ನಂ : 15/2026

ಅರ್ಜಿದಾರರು: 1)ಶ್ರೀಮತಿ ಕೆ.ಸಂಧ್ಯಾ ಕೋಂ ಲೇಟ್ ಕೃಷ್ಣಪ್ರಸಾದ್ ಪಿ.ಎಸ್. 69 ವರ್ಷ, 2)ಶ್ರೀಮತಿ ಕೆ.ಶಿಲ್ಪಶ್ರೀ ಬಿನ್ ಲೇಟ್ ಕೃಷ್ಣಪ್ರಸಾದ್ ಪಿ.ಎಸ್. 37 ವರ್ಷ, 3)ಶ್ರೀಮಾನ ಸಮೀಕ್ಷಾ ಪಿ.ಕೆ. ಬಿನ್ ಲೇಟ್ ಕೃಷ್ಣಪ್ರಸಾದ್.ಪಿ.ಎಸ್. 43 ವರ್ಷ, ಎಲ್ಲರೂ ವಾಸ: #29, 1ನೇ ಕ್ರಾಸ್, ಎ.ಎನ್.ಕೆ.ರಸ್ತೆ, ವೆಂಕಟೇಶನಗರ, ಶಿವಮೊಗ್ಗ.

ವಿರುದ್ಧ

ಎದುರುದಾರರು : ಯಾರೂ ಇಲ್ಲ.

ಸಾರ್ವಜನಿಕ ತಿಳುವಳಿಕೆ

1ನೇ ಅರ್ಜಿದಾರರು, ಮೃತ ಕೃಷ್ಣಪ್ರಸಾದ್ ಪಿ.ಎಸ್. ಇವರ ಧರ್ಮಪತ್ನಿಯಾಗಿದ್ದು, 2 ಮತ್ತು 3ನೇ ಅರ್ಜಿದಾರರು ಅವರ ಮಕ್ಕಳಾಗಿರುತ್ತಾರೆ.ಆ ಅರ್ಜಿದಾರರು ಸದರಿ ಕೃಷ್ಣಪ್ರಸಾದ್ ಪಿ.ಎಸ್. ಇವರ ವಾರಸುದಾರರಾಗಿದ್ದು, ಮೃತರ ಹೆಸರಿನಲ್ಲಿ ಅನುಸೂಚಿಯಲ್ಲಿ ಕಂಡ ಪೆನ್ಷನ್ ಹಣ ಕೇಳಿರುವುದಾಗಿದ್ದು, ಸದರಿ ಮೇಲಿನಂತೆ ಬಾಬ್ತು ವಾರಸು ದಾರಿಕೆ ಪ್ರಮಾಣಪತ್ರ ಪಡೆಯುವ ಸಲುವಾಗಿ ಈ ಮೇಲ್ಕಂಡ ಅರ್ಜಿಯನ್ನು ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಯಾರದಾದರೂ ತಕರಾರು ಇದ್ದಲ್ಲಿ, ಮೇಲ್ಕಂಡ ನ್ಯಾಯಾಲಯದಲ್ಲಿ ದಿನಾಂಕ:05-08-2026 ರಂದು ಬೆಳಿಗ್ಗೆ 11 ಗಂಟೆಗೆ ಖುದ್ದಾಗಿಯಾಗಲೀ ಅಥವಾ ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮೇಲ್ಕಂಡ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

SCHEDULE : Amount of Rs.1,79,161/-deposited as per the revised pension and due drawn statement submitted by Canara Bank, S.M.Circle, Shivamogga, with respect to PPO.No.181644 of the deceased P.S.Krishna Prasad.

ಅರ್ಜಿದಾರರ ಪರ ವಕೀಲರು
ಕೆ.ಜಿ.ವಾದಿರಾಜ್,
ಆರ್.ಎಸ್.ಶಿವಕುಮಾರ್
ನ್ಯಾಯವಾದಿಗಳು, ಕಚೇರಿ 1-ಎ
ಕ್ರಾಸ್ ಗಾಂಧಿನಗರ, ಶಿವಮೊಗ್ಗ
ದಿನಾಂಕ:25-06-2026

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಶಿವಮೊಗ್ಗ

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.



ಕಾಲ್ಚೆಂಡಿನ ಸಮರ

ಫಿಫಾ ವಿಶ್ವಕಪ್ | ಯುಎಸ್‌ಎ, ಮೆಕ್ಸಿಕೋ, ಕೆನಡಾ | ಜೂನ್ 11-ಜುಲೈ 19

೧೨

ಹೊಸ ದಿಗಂತ

ಮಂಗಳವಾರ, 30 ಜೂನ್ 2026
ಶಿವಮೊಗ್ಗ

ಮಂಗಳವಾರದ ಪಂದ್ಯ (ನಾಕೌಟ್)

ನೆದರ್‌ಲೆಂಡ್-ಮೊರಾಕ್ಕೊ, ಬೆಳಗ್ಗೆ 6.30
ಐವರಿಕೋಸ್ಟ್-ನಾರ್ವೆ, ರಾತ್ರಿ 10.30
ಫ್ರಾನ್ಸ್-ಸ್ವೀಡನ್, ಮಧ್ಯರಾತ್ರಿ 2.30
ಮೆಕ್ಸಿಕೋ-ಈಕ್ವೆಡೊರ್, ಬುಧವಾರ ಬೆಳಗ್ಗೆ 6.30

ಕಿರುಸುದ್ದಿ

ಟೆಸ್ಟ್ ಚಾಂಪಿಯನ್‌ಶಿಪ್: 5ನೇ ಸ್ಥಾನಕ್ಕೇರಿದ ಭಾರತ

ದುಬೈ: ವೆಸ್ಟ್ ಇಂಡೀಸ್ ವಿರುದ್ಧ ಇನ್ನಿಂಗ್ಸ್ ಮತ್ತು 217 ರನ್‌ಗಳ ಹೀನಾಯ ಸೋಲುಂಡ ಶ್ರೀಲಂಕಾ, 2025-27ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ 3ನೇ ಸ್ಥಾನದಿಂದ 6ನೇ ಸ್ಥಾನಕ್ಕೆ ಕುಸಿದಿದೆ. ಇದರಿಂದ ಶುಭ್ಮನ್ ಗಿಲ್ ನೇತೃತ್ವದ ಭಾರತ ತಂಡವು ಒಂದು ಸ್ಥಾನದ ಬಡ್ತಿ ಪಡೆದು ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ. 17 ತಿಂಗಳ ಬಳಿಕ ಟೆಸ್ಟ್ ಪಂದ್ಯವೊಂದನ್ನು ಗೆದ್ದ ವೆಸ್ಟ್ ಇಂಡೀಸ್ ಚಾಂಪಿಯನ್‌ಶಿಪ್ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಿಂದ 8ನೇ ಸ್ಥಾನಕ್ಕೇರಿದೆ. ಇದರಿಂದ ಪಾಕಿಸ್ತಾನ 9ನೇ (ಕೊನೆಯ) ಸ್ಥಾನಕ್ಕೆ ಕುಸಿದಿದೆ. ತಮ್ಮ ಮುಂದಿನ ವೆಸ್ಟ್ ಇಂಡೀಸ್ ಸರಣಿಯಲ್ಲಿ ಟೆಸ್ಟ್ ಗೆಲ್ಲುವವರೆಗೆ ಪಾಕ್ ಕೊನೆಯ ಸ್ಥಾನದಲ್ಲೇ ಇರಲಿದೆ.

87 ಮೀ+ ಜ್ಯಾವೆಲಿನ್ ಎಸೆದ 3ನೇ ಭಾರತೀಯ ರೋಹಿತ್



ಭುವನೇಶ್ವರ್: ಭಾರತೀಯ ಅಥ್ಲೆಟಿಕ್ಸ್ ಇತಿಹಾಸದಲ್ಲಿಯೇ 87 ಮೀ.ಗಿಂತ ಹೆಚ್ಚು ದೂರ ಜ್ಯಾವೆಲಿನ್ ಎಸೆದ ಮೂರನೇ ಅಥ್ಲೀಟ್ ಎಂಬ ದಾಖಲೆಯನ್ನು ರೋಹಿತ್ ಯಾದವ್ ಬರೆದಿದ್ದಾರೆ. ಭುವನೇಶ್ವರದಲ್ಲಿ ನಡೆದ ಅಂತರರಾಜ್ಯ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 87.05 ಮೀ. ದೂರ ಜ್ಯಾವೆಲಿನ್ ಎಸೆದಿದ್ದರು. ಈ ಹಿಂದೆ ನೀರಜ್ ಚೋಪ್ರಾ ಮತ್ತು ಕಿಶೋರ್ ಜೆನಾ ಈ ದಾಖಲೆ ಬರೆದಿದ್ದಾರೆ.

ವೈಭವ್ ಸಿದ್ಧ, ಆದರೆ ಸಂಜು ವಿಶ್ವಕಪ್ ರೂವಾರಿ: ರಯಾನ್

ಬೆಲ್‌ಫಾಸ್ಟ್: ಐರ್ಲೆಂಡ್ ವಿರುದ್ಧ ಭಾರತೀಯರು ಟಿ20 ಸರಣಿ ಸೋಲುಂಡಿದ್ದು, 15ರ ಹರೆಯದ ಬ್ಯಾಟರ್ ವೈಭವ್ ಸೂರ್ಯವಂಶಿ ಅವರನ್ನು ಆಡಿಸದಿರುವ ಬಗ್ಗೆ ಭಾರೀ ಟೀಕೆ ವ್ಯಕ್ತವಾಗಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿದ ಭಾರತ ತಂಡದ ಸಹಾಯಕ ಕೋಚ್ ರಯಾನ್ ಟೆನ್ ಡೊಶೆಟ್, ಹೌದು. ವೈಭವ್ ಸೂರ್ಯವಂಶಿ ಅವರು ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಲು ಎಲ್ಲಾ ರೀತಿಯಲ್ಲೂ ಸಿದ್ಧರಿದ್ದಾರೆ. ಅದರಲ್ಲಿ ಯಾವುದೇ ಸಂಶಯಗಳಿಲ್ಲ. ಆದರೆ ಮೂರು ತಿಂಗಳ ಹಿಂದೆ ಭಾರತದ ಟಿ20 ವಿಶ್ವಕಪ್ ಗೆಲುವಿನಲ್ಲಿ ಸಂಜು ಸ್ಯಾಮ್ಸನ್ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದ್ದಾರೆ. ಖಂಡಿತವಾಗಿ ವೈಭವ್ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಆಟಗಾರರಿಗೆ ಆತ್ಮವಿಶ್ವಾಸ ತುಂಬುವುದು ಮುಖ್ಯ. ದೀರ್ಘಾವಧಿ ಗುರಿಯೊಂದಿಗೆ ನಾವು ತಂಡ ಕಟ್ಟುತ್ತಿದ್ದೇವೆ. ವೈಭವ್ ಆಡುವುದನ್ನು ನೋಡಲು ನಾವೂ ನಿಮ್ಮಷ್ಟೇ ಉತ್ಸುಕರಾಗಿದ್ದೇವೆ. ಆದರೆ ಆಡಿಸುವುದಕ್ಕೆ ಪ್ರಕ್ರಿಯೆ ಅನುಸರಿಸಬೇಕು ಎಂದು ಟೆನ್ ಡೊಶೆಟ್ ಹೇಳಿದ್ದಾರೆ.

ಶೂಟೌಟ್‌ನಲ್ಲಿ ಗೆದ್ದ ಭಾರತ

ಹೊಸದಿಲ್ಲಿ: ಎಫ್‌ಐಎಚ್ ಪ್ರೊ ಲೀಗ್ 2025-26 ಹಾಕಿಯಲ್ಲಿ ಭಾರತ ಹಾಗೂ ಇಂಗ್ಲೆಂಡ್ ನಡುವಿನ ರೋಚಕ ಪಂದ್ಯವು ಫುಲ್‌ಟೈಮ್ ವೇಳೆಗೆ ಗೋಲ್ ಕಾಣದೆ ಟೈ ಆಗಿದ್ದು, ಶೂಟೌಟ್‌ನಲ್ಲಿ ಭಾರತ 3-2 ಗೋಲ್‌ಗಳ ಅಂತರದಿಂದ ಗೆಲುವು ಸಾಧಿಸಿದೆ. ಗೆಲುವಿನೊಂದಿಗೆ ಭಾರತ ತನ್ನ ಎಫ್‌ಐಎಚ್ ಪ್ರೊ ಲೀಗ್ ಋತು ಮುಕ್ತಾಯಗೊಳಿಸಿದೆ. ಭಾರತದ ಪರ ಗೋಲ್ ಕೀಪರ್ ಮೋಹಿತ್, ಸೂರಜ್ ಕರ್ಕೇರಾ ಎದುರಾಳಿ ಆಟಗಾರರು ಗೋಲ್ ಹೊಡೆಯದಂತೆ ನೋಡಿಕೊಂಡರು. ಇಂಗ್ಲೆಂಡ್ ವಿರುದ್ಧ ಗೆಲುವು ಸಾಧಿಸಿದ ಭಾರತೀಯ ಪುರುಷರ ತಂಡ ಬೋನಸ್ ಅಂಕವನ್ನು ಸಂಪಾದಿಸಿದೆ. ಇದರಿಂದ 16 ಪಂದ್ಯಗಳಿಂದ 19 ಅಂಕಗಳೊಂದಿಗೆ ಭಾರತ 8ನೇ ಸ್ಥಾನ ಸಂಪಾದಿಸಿದೆ. 19 ಅಂಕಗಳನ್ನು ಹೊಂದಿರುವ ಸ್ಪೇನ್ ಭಾರತಕ್ಕಿಂತ(4) ಹೆಚ್ಚು 5 ಗೆಲುವು ಸಾಧಿಸಿದ್ದು, 7ನೇ ಸ್ಥಾನ ಸಂಪಾದಿಸಿದೆ. ಶೂಟೌಟ್‌ನಲ್ಲಿ ಭಾರತ ಪರ ಅಭಿಷೇಕ್, ಶಿಲಾನಂದ್ ಲಾಕ್ರಾ, ಹಾರ್ದಿಕ್ ಸಿಂಗ್ ಸ್ಕೋರ್ ಮಾಡಿದರು. ಸುಖ್‌ಜೀತ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್ ಗೋಲ್ ಹೊಡೆಯಲಿಲ್ಲ. ಇಂಗ್ಲೆಂಡ್ ಪರ ಕೇವಲ ಜಾಕ್ ವ್ಯಾಲೇಸ್ ಮತ್ತು ಡೇವಿಡ್ ಗುಡ್‌ಫೀಲ್ಡ್ ಗೋಲ್ ದಾಖಲಿಸಿದ್ದರು.

ಕೆನಡಾ ಪಾಲಿಗೆ ಯುಸ್ಟಾಕಿಯೊ ಹೀರೋ | ಕಮರಿದ ದಕ್ಷಿಣ ಆಫ್ರಿಕಾ ವಿಶ್ವಕಪ್ ಕನಸು

ನನಸಾದ ಕೆನಡಾ ಪ್ರಿಕ್ವಾರ್ಟರ್ ಕನಸು

ಕ್ಯಾಲಿಫೋರ್ನಿಯಾ: ಕೆನಡಾ ಇದೇ ಮೊದಲ ಬಾರಿಗೆ ವಿಶ್ವಕಪ್ ಇತಿಹಾಸದಲ್ಲಿ ಪ್ರಿಕ್ವಾರ್ಟರ್ ಫೈನಲ್ (16ರ ಸುತ್ತನ್ನು) ಪ್ರವೇಶಿಸಿದೆ. ಈ ಬಾರಿಯ ವಿಶ್ವಕಪ್‌ನ ಮೊದಲ ನಾಕೌಟ್ (32ರ ಸುತ್ತಿನ) ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಏಕೈಕ ಗೋಲಿನ ಗೆಲುವು ಸಾಧಿಸಿದೆ. ಎಕ್ಸ್ಟ್ರಾ ಟೈಮ್‌ನಲ್ಲಿ ಸ್ಟೀಫನ್ ಯುಸ್ಟಾಕಿಯೊ ಗೋಲ್ ಹೊಡೆಯುತ್ತಲೇ ಕೆನಡಾ ಕೋಚ್, ಆಟಗಾರರು ಮೈದಾನಕ್ಕಿಳಿದು ಸಂಭ್ರಮಿಸಿದರು. ಕೆಂಪು ಬಣ್ಣದ ಧಿರಿಸಲ್ಲಿದ್ದ ಕೆನಡಾ ಅಭಿಮಾನಿಗಳ ಮಹಾಪೂರ ಸಂಭ್ರಮಪಟ್ಟಿತು.

> ಇದೇ ಮೊದಲ ಬಾರಿ ವಿಶ್ವಕಪ್ ನಾಕೌಟ್ ಗೆದ್ದ ಕೆನಡಾ

ಮೊದಲಾರ್ಧ ಯಾವುದೇ ಗೋಲ್ ದಾಖಲಾಗಲಿಲ್ಲ, 90 ನಿಮಿಷಗಳವರೆಗೂ ಎರಡೂ ತಂಡಗಳು ಯಾವುದೇ ಗೋಲ್ ಹೊಡೆಯದೆ ಮತ್ತು ಹೊಡೆಯಲೂ ಬಿಡದೆ ಒತ್ತಡ ಹೇರಿದ್ದರು. ಆದರೆ ಕೊನೆಯ ಕ್ಷಣಗಳಲ್ಲಿ ಸಿಕ್ಕ ಸಣ್ಣದೊಂದು ಅವಕಾಶವನ್ನು ಸ್ಟೀಫನ್ ಯುಸ್ಟಾಕಿಯೊ ಬಳಸಿಕೊಂಡರು. ಕೆನಡಾ ನಾಕೌಟ್ ಗೆಲುವಿನ ಸಂಪೂರ್ಣ ಶ್ರೇಯಸ್ಸು ಸ್ಟೀಫನ್ ಯುಸ್ಟಾಕಿಯೊ ಅವರಿಗೆ ಸಲ್ಲುತ್ತದೆ. 90+2 ನಿಮಿಷದಲ್ಲಿ ಗೋಲ್ ಹೊಡೆದು ಯುಸ್ಟಾಕಿಯೊ, ಕೆನಡಾದ ಮೈಲಿಗಲ್ಲು ಗೆಲುವಿನ ರೂವಾರಿಯಾದರು. ಎಕ್ಸ್ಟ್ರಾ ಟೈಮ್‌ನ ಎರಡನೇ ನಿಮಿಷದಲ್ಲೇ ಯುಸ್ಟಾಕಿಯೊ ಗೋಲ್ ದಾಖಲಿಸಿದರು.

ಜು.4ರಂದು ಹ್ಯೂಸ್ಟನ್‌ನಲ್ಲಿ ನಡೆಯಲಿರುವ ಪ್ರಿಕ್ವಾರ್ಟರ್‌ನಲ್ಲಿ ನೆದರ್‌ಲೆಂಡ್ ಅಥವಾ ಮೊರಾಕ್ಕೊ ತಂಡವನ್ನು ಕೆನಡಾ ಎದುರಿಸಬೇಕಿದೆ.

ಟೊರೊಂಟೊದಲ್ಲಿ ಸ್ವರ್ಗ: ಕೆನಡಾದಲ್ಲಿ ಚಳಿಗಾಲ ಹಾಕಿ ಹಾಗೂ ಬೇಸಿಗೆಗಾಲದಲ್ಲಿ ಪುರುಷರ ಫುಟ್ಬಾಲ್ ರಾಷ್ಟ್ರೀಯ ತಂಡ ಪ್ರಾಬಲ್ಯ ಮೆರೆಯುತ್ತವೆ. ಅದೇ ರೀತಿ ಈ ಬಾರಿ ವಿಶ್ವಕಪ್‌ನಲ್ಲಿ ಕೆನಡಾ ಅದ್ಭುತ ಪ್ರದರ್ಶನ ನೀಡಿ ಕ್ವಾರ್ಟರ್‌ಗೇರಿದೆ. 1985 ಮತ್ತು 2000ದಲ್ಲಿ ಕೊಂಕಾಕಾಫ್ ಗೋಲ್ಡ್ ಕಪ್ ಚಾಂಪಿಯನ್‌ಶಿಪ್ ಗೆದ್ದಿರುವುದು ಬಿಟ್ಟರೆ 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಕೆನಡಾ ಸ್ವರ್ಣ ಪದಕ ಗೆದ್ದಿತ್ತು. ಆದರೆ ವಿಶ್ವಕಪ್‌ನಲ್ಲಿ ಇದೇ ಮೊದಲ ಬಾರಿ ಪ್ರಿಕ್ವಾರ್ಟರ್ ಪ್ರವೇಶಿಸಿದೆ.



ಹೊರಬಿದ್ದ ದ.ಆಫ್ರಿಕಾ

ದಕ್ಷಿಣ ಆಫ್ರಿಕಾ ಪೆನಾಲ್ಟಿ ಏರಿಯಾದಿಂದ ಸಿಕ್ಕ ಚೆಂಡನ್ನು ಯುಸ್ಟಾಕಿಯೊ ಬಲವಾಗಿ ಹೊಡೆದಿದ್ದು, ಗೋಲಿ ರಾನ್‌ವೆನ್ ವಿಲಿಯಮ್ಸ್ ಬಲಬದಿಗೆ ಡೈವ್ ಹೊಡೆದರೂ ಚೆಂಡನ್ನು ತಡೆಯಲು ಸಾಧ್ಯವಾಗಲಿಲ್ಲ. ಎಕ್ಸ್ಟ್ರಾ ಟೈಮ್‌ನಲ್ಲೂ ಸಮಬಲದ ಹೋರಾಟ ನೀಡಿದ ದಕ್ಷಿಣ ಆಫ್ರಿಕಾ ನಾಕೌಟ್ ಪಂದ್ಯವನ್ನು ಪೆನಾಲ್ಟಿ ಶೂಟೌಟ್‌ನತ್ತ ಕೊಂಡೊಯ್ಯುವ ಸಾಧ್ಯತೆಯಿತ್ತು. ಸ್ಟೀಫನ್ ಗೋಲ್ ಹೊಡೆದ ಬಳಿಕವೂ ಸಮಬಲ ಸಾಧಿಸಲು ದಕ್ಷಿಣ ಆಫ್ರಿಕಾ ತನ್ನ ಶಕ್ತಿಮೀರಿ ಪ್ರಯತ್ನ ನಡೆಸಿದರೂ ಗೋಲ್ ದಾಖಲಿಸುವಲ್ಲಿ ಯಶಸ್ವಿಯಾಗಲಿಲ್ಲ.

> ನನ್ನಲ್ಲಿದ್ದ ಎಲ್ಲಾ ಸಾಮರ್ಥ್ಯ ಒಟ್ಟುಗೂಡಿಸಿ ಗೋಲ್ ಹೊಡೆದುಬಿಟ್ಟೆ
>
> ■ ಸ್ಟೀಫನ್ ಯುಸ್ಟಾಕಿಯೊ, ಕೆನಡಾ ಆಟಗಾರ

» ಕೆನಡಾ 1-0 ದಕ್ಷಿಣ ಆಫ್ರಿಕಾ

» 90+2 ಸ್ಟೀಫನ್ ಯುಸ್ಟಾಕಿಯೊ (ಕೆನಡಾ)

ಫೇವರಿಟ್ಸ್‌ಗೆ ಸುಲಭ ಹಾದಿ

ಬಹುನಿರೀಕ್ಷೆಯ ಫಿಫಾ ವಿಶ್ವಕಪ್ 2026ರ ನಾಕೌಟ್ ಹಂತ ಈಗಾಗಲೇ ಆರಂಭವಾಗಿದ್ದು, ಈ ಬಾರಿ ವಿಶ್ವಕಪ್‌ನಲ್ಲಿ ಕೆನಡಾ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಮೊದಲ ತಂಡ. ಫುಟ್ಬಾಲ್ ಪಂಡಿತರ ಪ್ರಕಾರ, ಇವ್ಯಾವೂ ಫೇವರಿಟ್‌ಗಳಲ್ಲ, ಕಪ್ ಗೆಲ್ಲುವ ಫೇವರಿಟ್‌ಗಳಾದ ಅರ್ಜೆಂಟೀನಾ, ಫ್ರಾನ್ಸ್ ನಂತಹ ತಂಡಗಳು ಸುಲಭ ಹಾದಿಯನ್ನು ಹೊಂದಿವೆ.

ಅರ್ಜೆಂಟೀನಾ: ಲಿಯೊನೆಲ್ ಮೆಸ್ಸಿ ನೇತೃತ್ವದ ಹಾಲಿ ಚಾಂಪಿಯನ್ನರು ಶನಿವಾರ ಪದಾರ್ಪಣಾ ವಿಶ್ವಕಪ್‌ನಲ್ಲಿ ನಾಕೌಟ್‌ಗೇರಿದ ಕೇಪ್ ವರ್ಡೆಯನ್ನು ಎದುರಿಸಲಿದ್ದಾರೆ. ಕೇಪ್ ವರ್ಡೆ ಚಮತ್ಕಾರ ಮಾಡದಿದ್ದರೆ ಅರ್ಜೆಂಟೀನಾ ಗೆಲ್ಲುವ ಸಾಧ್ಯತೆ. ಪ್ರಿಕ್ವಾರ್ಟರ್‌ನಲ್ಲಿ ಮೆಸ್ಸಿ ಬಳಗವು ಸುಲಭ ಬೇಟೆಗಳಾದ ಆಸ್ಟ್ರೇಲಿಯಾ ಅಥವಾ ಈಜಿಪ್ಟನ್ನು ಎದುರಿಸಲಿದೆ. ಕ್ವಾರ್ಟರ್ ಫೈನಲ್‌ನಲ್ಲಿ 11ನೇ ರ‍್ಯಾಂಕ್‌ನ ಕೊಲಂಬಿಯಾ ಹಾಗೂ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಅಥವಾ ಬ್ರೆಜಿಲ್ ಎದುರಿಸುವ ಸಾಧ್ಯತೆಯಿದೆ. ಮತ್ತೊಮ್ಮೆ ಅರ್ಜೆಂಟೀನಾ ಮತ್ತು ಫ್ರಾನ್ಸ್ ಫೈನಲ್ ನಿರೀಕ್ಷೆಯಿದೆ.

ಫ್ರಾನ್ಸ್: ಕಿಲಿಯನ್ ಎಂಬಾಪ್ಪೆ ಅವರ ಫ್ರಾನ್ಸ್ ಬುಧವಾರ ಸ್ವೀಡನ್ ಸವಾಲನ್ನು ಎದುರಿಸಲಿದೆ. 2018ರ ಚಾಂಪಿಯನ್ನರು ಲಯದಲ್ಲಿರುವ ಎಂಬಾಪ್ಪೆ ಹೊಂದಿದ್ದು, ಸ್ವೀಡನ್ ವಿರುದ್ಧ ಗೆಲ್ಲಬಹುದು. 16ರ ಸುತ್ತಿನಲ್ಲಿ ಜರ್ಮನಿ ಅಥವಾ ಪರಗ್ವೆ ಸಿಗಲಿವೆ. ಕ್ವಾರ್ಟರ್‌ನಲ್ಲಿ ಮೊರಾಕ್ಕೊ ಸಿಗಲಿದೆ. ಒಂದು ವೇಳೆ ಸ್ಪೇನ್ ರೊನಾಲ್ಡೊರ ಪೋರ್ಚುಗಲ್ ಎದುರು ಸೋತರೆ, ಫ್ರಾನ್ಸ್ ಫೈನಲ್ ಹಾದಿ ಇನ್ನಷ್ಟು ಸುಲಭ.

ಇಂಗ್ಲೆಂಡ್: ಹ್ಯಾರಿ ಕೇನ್ ಅವರ ಇಂಗ್ಲೆಂಡ್ 32ರ ಸುತ್ತಿನಲ್ಲಿ ಬುಧವಾರ ಡಿಆರ್ ಕಾಂಗೊವನ್ನು ಎದುರಿಸಲಿದೆ. 1966ರ ಚಾಂಪಿಯನ್ನರು ಈ ಬಾರಿ ಕಪ್ ಗೆಲ್ಲುವ ಗುರಿ ಹೊಂದಿದೆ. 16ರ ಸುತ್ತಿನಲ್ಲಿ ಮೆಕ್ಸಿಕೊ ಅಥವಾ ಈಕ್ವೆಡೊರ್ ಎದುರಿಸಬೇಕಿದೆ. ಇಂಗ್ಲೆಂಡ್ ಗೆದ್ದರೆ, ಕ್ವಾರ್ಟರ್‌ನಲ್ಲಿ 5ನೇ ರ‍್ಯಾಂಕ್‌ನ ಬ್ರೆಜಿಲ್ ಸಿಗಲಿದೆ.

ಅತ್ತ ದರಿ, ಇತ್ತ ಹುಲಿ

ಇದು ಅಕ್ಷರಶಃ ಕ್ರಿಸ್ಟಿಯಾನೋ ರೊನಾಲ್ಡೊರ ಪೋರ್ಚುಗಲ್ ಪರಿಸ್ಥಿತಿ. ತನ್ನ ಗುಂಪಿನ ಕೊನೆಯ ಪಂದ್ಯದಲ್ಲಿ ಕೊಲಂಬಿಯಾ ವಿರುದ್ಧ ಡ್ರಾ ಸಾಧಿಸಿದ ಪೋರ್ಚುಗಲ್, 32ರ ಸುತ್ತಿನಲ್ಲಿ ಜು.3ರಂದು ಕ್ರೊವೇಷಿಯಾ ಎದುರಿಸಲಿದೆ. 16ರ ಸುತ್ತಿನಲ್ಲಿ ಸ್ಪೇನ್ ಅಥವಾ ಆಸ್ಟ್ರಿಯಾ ಸಿಗಲಿವೆ. ಇದೆಲ್ಲ ಮೀರಿ ಕ್ವಾರ್ಟರ್‌ಗೇರಿದರೆ ಬೆಲ್ಜಿಯಂ, ಅಮೆರಿಕ, ಸೆನೆಗಲ್ ಅಥವಾ ಬೊಸ್ನಿಯಾ ಸಿಗಲಿವೆ. ಸೆಮಿಫೈನಲ್‌ನಲ್ಲಿ ಫ್ರಾನ್ಸ್, ನೆದರ್‌ಲೆಂಡ್, ಜರ್ಮನಿ ಅಥವಾ ಮೊರಾಕ್ಕೊ ಸಿಗಲಿವೆ. ಒಂದು ವೇಳೆ ಕೊಲಂಬಿಯಾ ವಿರುದ್ಧ ಗೆದ್ದಿದ್ದರೂ ಪೋರ್ಚುಗಲ್ ಕಠಿಣ ಎದುರಾಳಿಗಳನ್ನೇ ಎದುರಿಸಬೇಕಿತ್ತು.

ಎವಿಸಿ ವಾಲಿಬಾಲ್: ಐತಿಹಾಸಿಕ ಸಾಧನೆಗೈದ ಭಾರತ

ಭಾರತಕ್ಕೆ ಚೊಚ್ಚಲ ಕಂಚು



ಅಹಮದಾಬಾದ್: ಎವಿಸಿ ಪುರುಷರ ವಾಲಿಬಾಲ್ ಕಪ್‌ನಲ್ಲಿ ಭಾರತ ತಂಡವು ಚೊಚ್ಚಲ ಕಂಚಿನ ಪದಕ ಗೆದ್ದು ಇತಿಹಾಸ ಸೃಷ್ಟಿಸಿದೆ. ತಮಗಿಂತ ಪ್ರಬಲವಾದ ಬಹ್ರೈನ್ ತಂಡವನ್ನು ಸೋಲಿಸಿ ಭಾರತೀಯರು ಕಂಚು ಗೆದ್ದುಕೊಂಡಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ 40ನೇ ಸ್ಥಾನದಲ್ಲಿದ್ದ ಬಹ್ರೈನ್ ತಂಡವನ್ನು ಸೋಲಿಸಿದ ಭಾರತ 18 ಸ್ಥಾನಗಳ ಬಡ್ತಿ ಪಡೆದು 42ನೇ ಸ್ಥಾನಕ್ಕೇರಿದೆ. 25-23, 23-25, 25-21, 25-17 ಅಂತರದ ಗೆಲುವು ಸಾಧಿಸಿದ ಭಾರತ, ಅರ್ಹವಾಗಿ ಇದೇ ಮೊದಲ ಬಾರಿಗೆ ವಾಲಿಬಾಲ್ ಕಪ್‌ನಲ್ಲಿ ಪೋಡಿಯಂ ಫಿನಿಶ್ ಕಂಡಿದೆ.

ವಾಲಿಬಾಲ್ ಕಪ್‌ನಲ್ಲಿ ಐತಿಹಾಸಿಕ ಕಂಚು ಗೆದ್ದ ಭಾರತೀಯ ಪುರುಷರ ತಂಡವನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸನ್ಮಾನಿಸಿದ್ದಾರೆ.

> ಇದು ಐತಿಹಾಸಿಕ ಪದಕ, ಭಾರತೀಯ ವಾಲಿಬಾಲ್‌ಗೆ ಐತಿಹಾಸಿಕ ಕ್ಷಣ. ಇದಿನ್ನೂ ಆರಂಭವಷ್ಟೇ. ಪ್ರತಿ ಸಾಧನೆಯೂ ಇನ್ನಷ್ಟು ದೊಡ್ಡ ಜವಾಬ್ದಾರಿ ಮತ್ತು ಹೆಚ್ಚಿನ ನಿರೀಕ್ಷೆಗಳನ್ನು ಹುಟ್ಟುಹಾಕುತ್ತವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಅಥ್ಲೀಟ್‌ಗಳ ಸ್ಥಿರತೆ ಕಾಯ್ದುಕೊಳ್ಳಲು ಬೇಕಾದ ಅಗತ್ಯ ನೆರವುಗಳನ್ನು ಸರ್ಕಾರ ನೀಡಲಿದೆ.
>
> ■ ಮನ್ಸುಖ್ ಮಾಂಡವೀಯ, ಕ್ರೀಡಾ ಸಚಿವ

ಗಾಂಧಿನಗರದಲ್ಲಿ ತಂಡದ ನಾಯಕ ಜೆರೋಮ್ ವಿನೀತ್ ಚಾರ್ಲ್ಸ್ ಮತ್ತು ಕೋಚ್ ಸರ್ಬಿಯಾದ ಡ್ರೇಗನ್ ಮಿಹೈಲೊವಿಕ್ ಅವರನ್ನು ಭೇಟಿಯಾಗಿ ಸಚಿವ ಮಾಂಡವೀಯ ಅಭಿನಂದಿಸಿದ್ದಾರೆ.

ಯುಎಸ್ ಓಪನ್ ಫೈನಲ್‌ನಲ್ಲಿ ಸು ಲಿ ಯಾಂಗ್ ಎದುರು ಸೋಲು

ಬ್ಯಾಡ್ಮಿಂಟನ್: ಕಿದಂಬಿ ಶ್ರೀಕಾಂತ್ ರನ್ನರ್‌ಅಪ್

ಕ್ಯಾಲಿಫೋರ್ನಿಯಾ: ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ತಾರಾ ಶಟ್ಲರ್ ಕಿದಂಬಿ ಶ್ರೀಕಾಂತ್ ಅವರು ರನ್ನರ್‌ಅಪ್ ಆಗಿ ಹೊರಹೊಮ್ಮಿದ್ದಾರೆ. ಇಲ್ಲಿನ ಫುಲರ್ಟನ್‌ನಲ್ಲಿ ಭಾನುವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ ಚೈನೀಸ್ ತೈಪೆ ಎದುರಾಳಿ ಸು ಲಿ ಯಾಂಗ್ ಎದುರು 15-21, 21-16, 9-21 ಅಂತರದಿಂದ ಶ್ರೀಕಾಂತ್ ಸೋತಿದ್ದಾರೆ. ಟೂರ್ನಿಯುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿದ ಶ್ರೀಕಾಂತ್ ಫೈನಲ್‌ನಲ್ಲಿ ನಿರಾಶಾದಾಯಕ ಸೋಲುಂಡಿದ್ದಾರೆ.

ತಮಗಿಂತ 9 ವರ್ಷ ಕಿರಿಯರಾದ ಚೈನೀಸ್ ತೈಪೆ ಎದುರಾಳಿಯ ಎದುರು ಸ್ಥಿರ ಪ್ರದರ್ಶನ ನೀಡುವಲ್ಲಿ 33ರ ಶ್ರೀಕಾಂತ್ ವಿಫಲರಾದರು. ಒಂದು ಗಂಟೆ ಮತ್ತು 9 ನಿಮಿಷಗಳ ಸೆಣಸಾಟದಲ್ಲಿ ಸು ಲಿ ಯಾಂಗ್ ಗೆಲುವು ಸಾಧಿಸಿದರು. ಆರಂಭಿಕ ಗೇಮ್‌ನಲ್ಲೇ 10-5ರ ಮುನ್ನಡೆಯೊಂದಿಗೆ ಸು ಒತ್ತಡ ಹೇರಿದ್ದರು. ಶ್ರೀಕಾಂತ್ ಕಂಬ್ಯಾಕ್ ಮಾಡಿ 10-10 ಸಮಬಲ ಸಾಧಿಸಿದರೂ ಸು ಸತತ 7 ಅಂಕಗಳನ್ನು ಸಂಪಾದಿಸಿದರು. ಎರಡನೇ ಗೇಮ್‌ನಲ್ಲಿ 15-13 ಮುನ್ನಡೆ ಪಡೆದುಕೊಂಡಿದ್ದ ಶ್ರೀಕಾಂತ್ 20-13ರವರೆಗೆ ಸು ಅಂಕ ಸಂಪಾದಿಸಲು ಬಿಡಲಿಲ್ಲ. ಅಂತಿಮವಾಗಿ ಶ್ರೀಕಾಂತ್ 21-16ರಿಂದ ಎರಡನೇ ಗೇಮ್ ತಮ್ಮದಾಗಿಸಿದ್ದರು. ಮೂರನೇ ಗೇಮ್‌ನಲ್ಲಿ 24ರ ಹರೆಯದ ಲಿ ಯಾಂಗ್ 9-7ರ ಮುನ್ನಡೆ ಸಾಧಿಸಿದ್ದರು. ಅಲ್ಲಿಂದ ಶ್ರೀಕಾಂತ್ ಅವರಿಗೆ ಒಂದೂ ಅಂಕ ಬಿಟ್ಟುಕೊಡಲಿಲ್ಲ. ಶ್ರೀಕಾಂತ್ ಮೂರನೇ ಗೇಮ್‌ನಲ್ಲಿ 9-21 ಅಂಕಗಳಿಂದ ಸೋಲುಂಡರು. ಶ್ರೀಕಾಂತ್ ಪ್ರಶಸ್ತಿ ಬರ ಎದುರಿಸುತ್ತಿದ್ದು, 2017ರ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಡೆಯದಾಗಿ ಪ್ರಶಸ್ತಿ ಮುಡಿಗೇರಿಸಿದ್ದರು.



ಸೆಮಿಯಲ್ಲಿ ಕ್ರೀಡಾ ಸ್ಫೂರ್ತಿ

ಸೆಮಿಫೈನಲ್‌ನಲ್ಲಿ ಜಪಾನ್ ಶಟ್ಲರ್ ಯುಷಿ ಒಕೊಮೊಟೊರನ್ನು ಶ್ರೀಕಾಂತ್ 22-20, 15-21, 21-19 ಅಂತರದಿಂದ ಸೋಲಿಸಿದ್ದರು. ವಿಶ್ವಕ ವಿವರಣೆಕಾರರ ಪ್ರಕಾರ ಇದು ಯುಎಸ್ ಓಪನ್‌ನ ಶ್ರೇಷ್ಠ ಪಂದ್ಯಗಳಲ್ಲೊಂದು. ಭಾರೀ ಸಂಖ್ಯೆಯಲ್ಲಿ ಸೇರಿದ್ದ ಜಪಾನಿ ಶಟ್ಲರ್ ಅಭಿಮಾನಿಗಳು ಪಂದ್ಯದ ವೇಳೆ ಶ್ರೀಕಾಂತ್ ಎದೆಗುಂದಿಸುವ ಪ್ರಯತ್ನಗಳನ್ನು ಮಾಡಿದ್ದರು. ಡಿಸೈಡರ್ ಗೇಮ್‌ನಲ್ಲಿ ಶ್ರೀಕಾಂತ್ 10-8 ಮುನ್ನಡೆ ಸಾಧಿಸಿದ್ದರು. ಈ ವೇಳೆ ಶ್ರೀಕಾಂತ್ ಮತ್ತು ಯುಷಿ ನಡುವೆ 17 ಹೊಡೆತಗಳ ರ‍್ಯಾಲಿ ನಡೆದಿತ್ತು. ಶ್ರೀಕಾಂತ್ ಅವರಿಗೆ ರೆಫರಿ ಅಂಕ ನೀಡಿದ್ದರು. ಜಪಾನ್ ಶಟ್ಲರ್ ರೆಫರಿಯೊಂದಿಗೆ ವಾಗ್ವಾದಕ್ಕೆ ಇಳಿದಿದ್ದರು. ಜಪಾನ್ ಅಭಿಮಾನಿಗಳು ಚೀಟ್, ಚೀಟ್ ಎಂದು ಬೊಬ್ಬೆ ಹಾಕಿದ್ದರು. ಮುನ್ನಡೆ 11-8 ಆಗಿದ್ದಾದರೂ ರೆಫರಿಯೊಂದಿಗೆ ಮಾತನಾಡಿದ ಶ್ರೀಕಾಂತ್ ಅಂಕವನ್ನು ಬಿಟ್ಟುಕೊಟ್ಟಿದ್ದರು. ಕೋಚ್ ಸಾಯಿ ಪ್ರಣೀತ್, ಪಾರುಪಲ್ಲಿ ಕಶ್ಯಪ್ ತಮ್ಮ ಆಟಗಾರನ ಕ್ರೀಡಾ ಸ್ಫೂರ್ತಿಯನ್ನು ಮೆಚ್ಚಿಕೊಂಡಿದ್ದಾರೆ.

ವಿಂಬಲ್ಡನ್: ಜಾರಿಬಿದ್ದ ಮಾಯಾ

ಲಂಡನ್: ಇತ್ತೀಚೆಗೆ ಫ್ರೆಂಚ್ ಓಪನ್ ಕಿರೀಟ ಮುಡಿಗೇರಿಸಿಕೊಂಡಿದ್ದ ಪೋಲೆಂಡ್ ತಾರೆ ಮಾಯಾ ಖಾಲ್ವಿನ್ಸ್ಕಾ, ವಿಂಬಲ್ಡನ್ 2026ರ ಮೊದಲ ಸುತ್ತಿನಲ್ಲಿ ಗಾಯಾಳುವಾಗಿ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಥೈಲಾಂಡ್ ಅರ್ಹತಾ ಸುತ್ತಿನ ಆಟಗಾರ್ತಿ ಮನಂಚಯಾ ಸವಾಂಗ್‌ಕಾವ್ ಅವರ ಎದುರು ಸುಲಭದಲ್ಲಿ ಗೆಲುವು ಸಾಧಿಸುವವರಿದ್ದ ಮಾಯಾ ಹಸಿರು ಹುಲ್ಲಿನ ಅಂಗಣದಲ್ಲಿ ಕಾಲು ಜಾರಿ ಬಿದ್ದಿದ್ದು, ಗಾಯಗೊಂಡಿದ್ದಾರೆ. ಮೊದಲ ಸೆಟ್ ಗೆದ್ದಿದ್ದ ಮಾಯಾ, ದ್ವಿತೀಯ ಸೆಟ್‌ನಲ್ಲಿ ಇನ್ನೇನು ಒಂದು ಅಂಕ ಗೆಲ್ಲಬೇಕೆನ್ನುವಷ್ಟರಲ್ಲಿ ಜಾರಿ ಬಿದ್ದಿದ್ದು, ವಿಂಬಲ್ಡನ್ ಪ್ರಶಸ್ತಿಯೂ ಕೈಜಾರಿದೆ. ಮೊದಲ ಸೆಟ್‌ನಲ್ಲಿ ಅವರು 6-2 ಅಂತರದಿಂದ ಗೆಲುವು ಸಾಧಿಸಿದ್ದು, ದ್ವಿತೀಯ ಸೆಟ್‌ನಲ್ಲಿ 5-2(40-30) ಅಂಕಗಳಿಂದ ಮುನ್ನಡೆಯನ್ನು ಸಾಧಿಸಿದ್ದರು. ಗಾಯಾಳು ಎಮ್ಮಾ ರಾದುಕಾನು ಸಹ ಗಾಯದಿಂದಾಗಿ ಸ್ಪರ್ಧೆಯಿಂದ ಹೊರಗುಳಿದಿದ್ದಾರೆ.

ಆಘಾತದಿಂದ ಬಚಾವಾದ ಸಿನ್ನರ್: ಪುರುಷರ ಹಾಲಿ ಚಾಂಪಿಯನ್ ಮತ್ತು ವಿಶ್ವ ನಂ.1 ಯಾನಿಕ್ ಸಿನ್ನರ್ ದೊಡ್ಡ ಆಘಾತದಿಂದ ಸ್ವಲ್ಪದರಲ್ಲೇ ಪಾರಾಗಿದ್ದಾರೆ.

ಇಲ್ಲಿ ವಿಂಬಲ್ಡನ್ ಮೊದಲ ಸುತ್ತಿನಲ್ಲಿ ಕೆಕ್ ಮಾನೊವಿಕ್ ವಿರುದ್ಧ 1-2 ಸೆಟ್‌ಗಳ ಹಿನ್ನಡೆ ಅನುಭವಿಸಿದ್ದ ಸಿನ್ನರ್ ಹೋರಾಡಿ ಗೆದ್ದಿದ್ದಾರೆ. ಅವರು 4-6, 6-3, 6-7, 6-2, 6-3 ಸೆಟ್ ಅಂತರದಿಂದ ಜಯಿಸಿದ್ದಾರೆ.

ಪುರುಷರ ರ‍್ಯಾಂಕಿಂಗ್, ಮಹಿಳಾ ಟಿ20 ವಿಶ್ವಕಪ್ ನಿರ್ಣಾಯಕ

ಒಲಿಂಪಿಕ್ಸ್ ಅರ್ಹತಾ ಮಾನದಂಡ ಪ್ರಕಟ

ಹೊಸದಿಲ್ಲಿ: 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ನಡೆಯಲಿರುವ ಕ್ರಿಕೆಟ್ ಸ್ಪರ್ಧೆಗೆ ಅರ್ಹತೆ ಪಡೆಯಲು ಪುರುಷರ ವಿಭಾಗದಲ್ಲಿ ಐಸಿಸಿ ಟಿ20 ತಂಡಗಳ ರ‍್ಯಾಂಕಿಂಗ್ ಹಾಗೂ ಮಹಿಳೆಯರ ವಿಭಾಗದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್‌ನ ಅಂತಿಮ ಸ್ಥಾನಮಾನವೇ ಪ್ರಮುಖ ಮಾನದಂಡವಾಗಲಿದೆ.

ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಐಸಿಸಿ) ಸೋಮವಾರ ಒಲಿಂಪಿಕ್ಸ್ ಕ್ರಿಕೆಟ್ ಅರ್ಹತಾ ಮಾನದಂಡವನ್ನು ಪ್ರಕಟಿಸಿದೆ. ಸುಮಾರು 100 ವರ್ಷಗಳ ಬಳಿಕ ಒಲಿಂಪಿಕ್‌ಗೆ ಮರಳುತ್ತಿರುವ ಕ್ರಿಕೆಟ್‌ನಲ್ಲಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಆರು ತಂಡಗಳು ಸ್ಪರ್ಧಿಸಲಿವೆ.

ಪುರುಷರ ರ‍್ಯಾಂಕಿಂಗ್‌ಗೆ ಆದ್ಯತೆ: ಅತ್ಯುನ್ನತ ರ‍್ಯಾಂಕಿಂಗ್ ಹೊಂದಿರುವ ನಾಲ್ಕು ರಾಷ್ಟ್ರಗಳ ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳಿಗೆ ನೇರ ಅರ್ಹತೆ(ಎನ್‌ಒಸಿ) ದೊರೆಯಲಿದೆ. 2026ರ ಡಿ.31ರಂದು ಪ್ರಕಟವಾಗುವ ಐಸಿಸಿ ಪುರುಷರ ಟಿ20 ತಂಡಗಳ ರ‍್ಯಾಂಕಿಂಗ್ ಪರಿಗಣಿಸಲಾಗುತ್ತದೆ. ಆತಿಥೇಯ ಅಮೆರಿಕಕ್ಕೆ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಒಂದು ಸ್ಥಾನ ಖಾತರಿಯಾಗಿದೆ.

ಮಹಿಳಾ ವಿಶ್ವಕಪ್ ಫಲಿತಾಂಶ ಮಾನದಂಡ: ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಅಂತಿಮ ಸ್ಥಾನಮಾನ ಆಧಾರಿಸಿ ಅಗ್ರ ನಾಲ್ಕು ತಂಡಗಳಿಗೆ ಎನ್‌ಒಸಿ ಕೋಟಾದಲ್ಲಿ ಸ್ಥಾನ ನೀಡಲಾಗುತ್ತದೆ.

ವಿಂಡೀಸ್‌ಗಿಲ್ಲ ನೇರ ಅವಕಾಶ: ವೆಸ್ಟ್ ಇಂಡೀಸ್ ಸೆಮಿಫೈನಲ್ ಪ್ರವೇಶಿಸಿದರೂ, ಅದು ಹಲವು ಕೆರಿಬಿಯನ್ ರಾಷ್ಟ್ರಗಳ ಸಂಯುಕ್ತ ತಂಡವಾಗಿದ್ದು, ಪ್ರತ್ಯೇಕ ಐಸಿಸಿ ರಾಷ್ಟ್ರೀಯ ಒಲಿಂಪಿಕ್ ಸಮಿತಿಯಾಗಿ ಮಾನ್ಯತೆ ಹೊಂದಿಲ್ಲ.

ಜಯ್ ಶಾ ಹೇಳಿದ್ದೇನು?: ಐಸಿಸಿ ಅಧ್ಯಕ್ಷ ಜಯ್ ಶಾ, 100 ವರ್ಷಗಳ ಬಳಿಕ ಒಲಿಂಪಿಕ್ಸ್‌ಗೆ ಕ್ರಿಕೆಟ್ ಮರಳುತ್ತಿರುವುದು ನಮ್ಮ ಕ್ರೀಡೆಗೆ ಐತಿಹಾಸಿಕ ಕ್ಷಣವಾಗಿದೆ. ಈ ಅರ್ಹತಾ ಮಾರ್ಗಸೂಚಿ ಪ್ರಕಟವಾಗಿರುವುದು ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಮಹತ್ವದ ಹೆಜ್ಜೆಯಾಗಿದ್ದು, ವಿಶ್ವದ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಒಲಿಂಪಿಕ್ ವೇದಿಕೆಯನ್ನು ತಲುಪಲು ಸ್ಪಷ್ಟ ಅವಕಾಶ ಕಲ್ಪಿಸಿದೆ ಎಂದು ಹೇಳಿದ್ದಾರೆ.

ಮಯಾಂಕ್, ತಾಹ ಅಬ್ಬರದ ಬ್ಯಾಟಿಂಗ್ | ಪ್ಲೇಆಫ್ ಆಸೆ ಜೀವಂತ

ತವರಿನಲ್ಲಿ ಹುಬ್ಬಳ್ಳಿಗೆ ಭರ್ಜರಿ ಜಯ

▸ ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಅನುಭವಿ ಮಯಾಂಕ್ ಅಗರವಾಲ್ ಹಾಗೂ ಮೊಹಮ್ಮದ್ ತಾಹ ಅವರ ಅಬ್ಬರದ ಬ್ಯಾಟಿಂಗ್‌ನಿಂದ ಮಹಾರಾಜ ಟ್ರೋಫಿಯ ಟಿ-20 ಟೂರ್ನಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ತವರಿನ ಅಂಗಳದಲ್ಲಿ ಗೆದ್ದು ಬೀಗಿತು. ಎರಡನೇ ಗೆಲುವಿನೊಂದಿಗೆ 5 ಅಂಕಗಳಿಸಿ ಪ್ಲೇಆಫ್ ಆಸೆ ಜೀವಂತ ಉಳಿಸಿಕೊಂಡಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ಮಳೆ ಸುರಿದಿದ್ದರಿಂದ ಪಂದ್ಯವನ್ನು 15 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಗುಲ್ಬರ್ಗಾ ಮಿಸ್ಟಿಕ್ಸ್ ನೀಡಿದ 140 ರನ್‌ಗಳ ಗುರಿಯನ್ನು ಹುಬ್ಬಳ್ಳಿ 17 ಎಸೆತಗಳು ಬಾಕಿ ಇರುವಂತೆಯೇ ಯಾವುದೇ ವಿಕೆಟ್ ಕಳೆದುಕೊಳ್ಳದೆ ಮುಟ್ಟಿತು. ಹಿಂದಿನ ಪಂದ್ಯದ ಸೋಲಿನ ಸೇಡು ತೀರಿಸಿಕೊಂಡಿತು. ಆರಂಭಿಕ ಆಟಗಾರ ಮಯಾಂಕ ಅಗರವಾಲ್(81) ಹಾಗೂ



• ಚಿತ್ರ: ಮಂಜುನಾಥ ಜರತಾರಘರ

ಮೊಹಮ್ಮದ ತಾಹಾ(51) ಜೋಡಿ ಗುಲ್ಬರ್ಗಾ ಬೌಲರ್‌ಗಳ ಬೆವರಿಳಿಸಿದರು. ಮಳೆ ನಿಂತರೂ ಸಹ ಇವರಿಬ್ಬರ ಅಬ್ಬರದ ಬ್ಯಾಟಿಂಗ್ ತಡೆಯಲು ಗುಲ್ಬರ್ಗ ತಂಡದ ಬೌಲರ್‌ಗಳಿಗೆ ಆಗಲಿಲ್ಲ. ಇಬ್ಬರೂ ಜತೆಗೂಡಿ ಕೇವಲ 73 ಎಸೆತಕ್ಕೆ 143 ರನ್ ಕಲೆಹಾಕಿದರು.

ಮನೀಶ್-ರೆಡ್ಡಿ ಆಟ ವ್ಯರ್ಥ: ಟಾಸ್ ಸೋತು ಬ್ಯಾಟ್ ಮಾಡಿದ ಗುಲ್ಬರ್ಗಾ ಪರ ಆರಂಭಿಕರಾದ ಲೋಚನ್ ಗೌಡ, ನಾಯಕ ಶರತ್ ಬಿ.ಆರ್. ಹಾಗೂ ಪ್ರಖರ ಸಿ. ಬೇಗ ವಿಕೆಟ್ ಒಪ್ಪಿಸಿದರು. ವೈಭವ್ ಶರ್ಮಾ 17ಕ್ಕೆ 3 ವಿಕೆಟ್ ಕಬಳಿಸಿ ಗುಲ್ಬರ್ಗಾ ಮೊತ್ತ ಹೆಚ್ಚುವುದನ್ನು ನಿಯಂತ್ರಿಸಿದರು. ಕುಸಿದಿದ್ದ ಗುಲ್ಬರ್ಗಾಗೆ ಶಿವ್ರಾ ರೆಡ್ಡಿ (51) ಅರ್ಧ ಶತಕದಾಟ, ರೆಡ್ಡಿ ಮತ್ತು ಮನೀಶ್ ಪಾಂಡೆ(35) 44 ರನ್ ಜತೆಯಾಟ ಆಸರೆಯಾಗಿತು.

ಸಂಕ್ಷಿಪ್ತ ಸ್ಕೋರ್

ಗುಲ್ಬರ್ಗಾ: ಶಿವ್ರಾ ರೆಡ್ಡಿ 51(34), ಮನೀಶ್ ಪಾಂಡೆ 35(20), ವೈಭವ್ ಶರ್ಮಾ (17ಕ್ಕೆ 3).
ಹುಬ್ಬಳ್ಳಿ: ಮಯಾಂಕ್ 81(38), ಮೊಹಮ್ಮದ್ ತಾಹಾ 51(34).
ಪಂದ್ಯಶ್ರೇಷ್ಠ: ವೈಭವ್ ಶರ್ಮಾ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



6030

ಎಡದಿಂದ ಬಲಕ್ಕೆ
3.ನಾಲ್ಕು ವಿಧದ ಸೈನ್ಯಗಳುಳ್ಳ ಬುದ್ಧಿವಂತಿಕೆಯ ಆಟ (4)
5.ಕಹಿರುಚಿಯುಳ್ಳ ತರಕಾರಿ (3)
6.ಹಲ್ಲಿನ ಮೇಲ್ಭಾಗ ಹಾನಿಗೊಳಗಾಗುವುದು (4)
7.ಭೂಮಿ-ನೀಲಿಆಕಾಶ (2)
8.ಗುಂಪಿನ ಒಡೆಯನಾದ ಶಿವಪುತ್ರ ತಿರುಗಿದ್ದಾನೆ (4)
10.ಪಕ್ಷದ ಹದಿಮೂರನೆಯ ದಿವಸ (4)
13.ಸಣ್ಣಕೋಟೆ-ದುರ್ಗವಿದು (2)
14.ಮಠದ ನಡುವೆ ಅಂತರಂಗದ ಆಧ್ಯಾತ್ಮಿಯವಿದೆ (4)
16.ಸೂಕ್ಷ್ಮವಾಗಿ ಹೇಳು-ಶಬ್ದ ಮಾಡುವುದು (3)
17.ಕಮಲದಲ್ಲಿ ಹುಟ್ಟಿದವನು-ಬ್ರಹ್ಮ (4)

ಮೇಲಿನಿಂದ ಕೆಳಕ್ಕೆ
1.ಇದು ದಿಕ್ಕಿನ ತುದಿ (3)
2.ಇನ್ನೊಬ್ಬರ ಕೆಲಸ ಸುಲಭಗೊಳಿಸಲು ನೀಡುವ ಆಸರೆ (3)
3.ಬೆಳ್ಳಿ ತೆರೆಯ ಸಿನಿಮಾ ಇದು (5)
4. ''ನಾನು ಕರಗಾಗುತ್ತಿದ್ದೇನೆ'' ಎಂಬರ್ಥದ ಶಬ್ದ (3)
6. ಗಂಡಹೆಂಡತಿ ಕೂಡಿ ಕಾಣುತ್ತಿದ್ದಾರೆ (3)
9. ವಿಷ್ಣುವಿನ ವಾಹನದ ಚಿಹ್ನೆಯುಳ್ಳ ಪತಾಕೆ (5)
11.ವಿದ್ಯೆಯನ್ನು ಕಲಿತವನು (3)
12.ಕೊಂಚ ಕಡೆಯಲ್ಲಿರುವ ಕೃತಕವಾದುದು (3)
14.ಅಸ್ಪಷ್ಟವಾದುದು-ಮಬ್ಬು (3)
15. ಗಾಢ,ವಿಶೇಷತೆಯಿಂದ ಕೂಡಿದ್ದು (3)

6029 ಉತ್ತರ

ಎಡದಿಂದ ಬಲಕ್ಕೆ:
1.ಸಂಚಾರ 3.ಲಲಾಮ
5.ಪಾವಕ 7.ಗಗನ
9.ಕನಕಾಚಲ
11.ಗದಗದಿಸು
14.ಗಂಗೆತ್ತು
15.ಬೀಜಾನುಗ
16.ತಿಜೋರಿ 17.ಸರಳು

ಮೇಲಿನಿಂದ ಕೆಳಕ್ಕೆ :
1.ಸಂಕಲನ 2.ರಸಪಾಕ
4.ಮನೋಬಲ 6.ಕಾಡು
8.ಗರುಡ 10.ಚಲಿಗೆ
11.ಗಣಭ್ರಾಂತಿ
12.ಗಣೆ 13.ಸುಮನಸ
14.ಗಂಟುಬೀಳು